ಸಾಹಿತ್ಯ ದಾಸೋಹ – ೧೯೭

೮ ಜನವರಿ ೨೦೨೨ರ
ಸಾಹಿತ್ಯ ದಾಸೋಹದಲ್ಲಿ
ಪ್ರಸ್ತುತಪಡಿಸಿದ ಬರಹಗಳ ಸಂಕಲನ





ಸಮನ್ವಯ ಸಮಿತಿ * ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಪ್ರಿಯರೆ,

೨೦೨೨ರ ಹೊಸ ವರ್ಷದ ಮೊದಲನೆಯ ದಾಸೋಹದ ಸಂಚಿಕೆಯನ್ನು ತಮಗೆ ಒಪ್ಪಿಸಲು ಸಂತೋಷವಾಗುತ್ತಿದೆ. ಇದು ೮ನೆಯ ಜನವರಿ ೨೦೨೨ರಂದು ನಡೆದ ೧೯೭ನೇ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಪಡಿಸಲಾದ ವಿವಿಧ ಬರಹಗಳ ಸಂಕಲನ.

ನಮ್ಮ ಸಾಹಿತ್ಯ ದಾಸೋಹ ನಡೆದು ಬಂದ ದಾರಿಯ ಸಿಂಹಾವಲೋಕನ ಮಾಡಿದಾಗ, ನಾವು ಎಲ್ಲ ಅಡೆತಡೆಗಳನ್ನು ಮೀರಿ ಇಷ್ಟು ದೂರ ಸಾಗಿ ಬಂದಿದ್ದು ನಿಜವೇ ಎಂಬ ಕುತೂಹಲ ಮೂಡುತ್ತದೆ. ಎಲ್ಲಕ್ಕಿಂತ ದೊಡ್ಡ ಅಡೆತಡೆ ಎಂದರೆ ಕರೋನಾದ ಕರಿನೆರಳು. ಎಲ್ಲೆಡೆ ಜನಸಂಚಾರವೇ ಬಂದ್ ಆದಾಗ ಸಾಹಿತ್ಯ ದಾಸೋಹದ ತಂಡದಲ್ಲಿಯೂ ಶೂನ್ಯತೆ ಆವರಿಸಿತ್ತು. ಆಗ ದಿಢೀರನೆ ನೆರವಿಗೆ ಬಂದದ್ದು ಅಂತರ್ಜಾಲ ವೇದಿಕೆ. ಈ ವೇದಿಕೆಗೆ 'ನೋಡಿಯೋ ಸಾಹಿತ್ಯ ದಾಸೋಹ' ಎಂಬ ಹೆಸರಿಟ್ಟೆವು. ಈ 'ನೋಡಿಯೋ' ಹೊಸ ಮಜಲನ್ನೇ ತೆರೆದು ನಮ್ಮ ದಾಸೋಹವನ್ನು ವಿಶ್ವವ್ಯಾಪಿಯನ್ನಾಗಿಸಿತು. ಮೊದಲು ಬೆಂಗಳೂರಿಗೆ ಮಾತ್ರ ಸೀಮಿತವಾಗಿದ್ದ ದಾಸೋಹದಲ್ಲಿ ದೇಶದ ಹಾಗೂ ಜಗತ್ತಿನ ವಿವಿಧ ಪ್ರದೇಶಗಳಿಂದ ಅನೇಕ ಸಾಹಿತ್ಯಾಸಕ್ತರು ಪಾಲ್ಗೊಳ್ಳುವ ಅವಕಾಶ ಒದಗಿಬಂತು. ಹಲವು ಹೊಸಬರು ವೇದಿಕೆಯ ಸದಸ್ಯರಾದರು.

ಹಿಂದೊಮ್ಮೆ ನಮ್ಮ ನೋಡಿಯೋ ಅಂತರ್ಜಾಲ ವೇದಿಕೆಯಲ್ಲಿ ಪ್ರಸ್ತುತಪಡಿಸುವವರ ಸಂಖ್ಯೆ ಬಹುದೊಡ್ಡ ಮಟ್ಟವನ್ನು ತಲುಪಿದಾಗ ದಾಸೋಹವನ್ನು ಎರಡು ದಿನಗಳಿಗೆ ವಿಸ್ತರಿಸುವ ಚಿಂತನೆಯೂ ನಡೆದಿತ್ತು. ಆದರೆ ಇತ್ತೀಚಿನ ಒಂದೆರಡು ತಿಂಗಳುಗಳಿಂದ ಈ ಸಂಖ್ಯೆ ಸ್ವಲ್ಪ ಕುಂಠಿತವಾಗಿದೆ. ಇದೇಕೆ ಹೀಗೆ ಎಂಬುದರ ಪರಾಮರ್ಶೆ ಅಗತ್ಯವಾಗಿದೆ. ಕೇವಲ ಇನ್ನೆರಡೇ ತಿಂಗಳು. ನಾವು ಸಾಹಿತ್ಯ ದಾಸೋಹದ ದ್ವಿಶತಕ ಬಾರಿಸಲಿದ್ದೇವೆ. ಈ ವೇಳೆಗೆ ತಮ್ಮಿಂದ ಗರಿಷ್ಠ ಸಂಖ್ಯೆಯ ಕತೆ, ಕವನ, ಲೇಖನ, ವಿಡಂಬನೆ ಮುಂತಾದ ವಿವಿಧ ಪ್ರಕಾರಗಳ ಸಾಹಿತ್ಯಕ ಪ್ರಸ್ತುತಿಗಳು ದಾಸೋಹದಲ್ಲಿ ಹೊರಹೊಮ್ಮಲಿ ಎಂಬುದೇ ನಮ್ಮ ಆಶಯ.

ಪ್ರಸ್ತುತ ಸಂಚಿಕೆಯಲ್ಲಿ ಒಟ್ಟು ೨೨ ದಾಸೋಹಿಗಳು ತಮ್ಮ ಸ್ವರಚಿತ ಬರಹಗಳನ್ನು ಪ್ರಸ್ತುತಪಡಿಸಿದ್ದಾರೆ. ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಎಲ್.ಗಿರಿಜಾರಾಜ್ ಅವರು ಎಲ್ಲರ ಲೇಖನಗಳನ್ನೂ ಆಮೂಲಾಗ್ರವಾಗಿ ಓದಿ ತಮ್ಮ ವಿಶ್ಲೇಷಣೆಯನ್ನು ಮಾಡಿದ್ದಾರೆ. ಶ್ರೀಮತಿ ಗಿರಿಜಾ ರಾಜ್ ಅವರಿಗೂ, ದಾಸೋಹದಲ್ಲಿ ಭಾಗವಹಿಸಿದ ಎಲ್ಲಾ ಬರಹಗಾರರು ಮತ್ತು ವೀಕ್ಷಕರಿಗೂ, ನಮ್ಮ ತಾಂತ್ರಿಕ ತಂಡಕ್ಕೂ ನಮ್ಮ ಕೃತಜ್ಞತೆಗಳು.

ಈ ಸಂಚಿಕೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ತಿಳಿಸಿ.

ಸಂಚಾಲಕ ಸಮಿತಿ
ನೋಡಿಯೋ ಸಾಹಿತ್ಯ ವೇದಿಕೆ,
ಸಮನ್ವಯ ಸಮಿತಿ, ಕನ್ನಡವೇ ಸತ್ಯ

ದಾಸೋಹದ ಪುಟಗಳಲ್ಲಿ . . .

ಮುಖಚಿತ್ರ: ಸಂಕ್ರಾಂತಿ ಸಂಭ್ರಮ – ಎತ್ತುಗಳ ಬೆಂಕಿ ಹಾಯುವಿಕೆ (ಚಿತ್ರಕೃಪೆ: ಅಂತರಜಾಲ)

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ನೋಡಿಯೋ ಸಾಹಿತ್ಯ ದಾಸೋಹ ೧೯೭

ಕಾರ್ಯಕ್ರಮ ವರದಿ : ಹು.ವಾ.ಶ್ರೀಪ್ರಕಾಶ್

ದಿನಾಂಕ ೦೮ನೆಯ ಜನವರಿ ೨೦೨೨ರಂದು ಶನಿವಾರ ಮಧ್ಯಾಹ್ನ ೩.೩೦ಕ್ಕೆ ಅಂತರಜಾಲ ಕಾರ್ಯಕ್ರಮ ಆರಂಭವಾಯಿತು. ಶ್ರೀಮತಿ ರಾಧಿಕಾ ವಿ ಗುಜ್ಜರ್‌ರವರು ಎಲ್ಲರನ್ನೂ ಸ್ವಾಗತಿಸಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಎಲ್. ಗಿರಿಜಾರಾಜ್‌ರವರ ಪರಿಚಯ ಮಾಡಿಕೊಟ್ಟರು.



ಶ್ರೀಮತಿ ಎಲ್. ಗಿರಿಜಾರಾಜ್ ಅವರು ಇತಿಹಾಸ ಪ್ರಸಿದ್ಧ ಚಿತ್ರದುರ್ಗದಲ್ಲಿ ಜನಿಸಿ, ತುಮಕೂರು, ಬೆಂಗಳೂರಿನಲ್ಲಿ ವ್ಯಾಸಂಗ ಮಾಡಿ ಇದೀಗ ಪಿಎಚ್‌ಡಿ ವ್ಯಾಸಂಗ ಮಾಡುತ್ತಿದ್ದಾರೆ. ಇವರಿಗೆ ಸಾಹಿತ್ಯ, ಸಂಗೀತದ ಒಲವು ಕೌಟುಂಬಿಕವಾಗಿಯೇ ಬಂದಿದ್ದು, ಬಾಲ್ಯದಲ್ಲೇ ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಇದೀಗ ಇವರು ಬೆಂಗಳೂರಿನ ವಿವೇಕಾನಂದ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಕನ್ನಡದ ಜನಪ್ರಿಯ ಪತ್ರಿಕೆಗಳಲ್ಲಿ ಇವರ ಲೇಖನ, ಕವನ, ಕತೆಗಳು ಪ್ರಕಟವಾಗಿವೆ. ಹಲವಾರು ಕವಿಗೋಷ್ಠಿ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

ಒಟ್ಟು ಹನ್ನೊಂದು ಕೃತಿಗಳನ್ನು ರಚಿಸಿರುವ ಇವರಿಗೆ ತ್ರಿವೇಣಿ ದತ್ತಿ ಪ್ರಶಸ್ತಿ, ಕಸಾಪ ದತ್ತಿ ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕ ಲೇಖಕಿಯರ ಸಂಘದ ಉಪಾಧ್ಯಕ್ಷೆಯಾಗಿರುವ ಗಿರಿಜಾರಾಜ್ ಅವರು ಇಂದಿನ ಸಾಹಿತ್ಯ ದಾಸೋಹ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ಪರಿಚಯಿಸಿ, ಅವರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿದರು.

ನಂತರ ಶ್ರೀ ಶೃಂಗೇಶ್ವರ ಶರ್ಮರವರು ಸಾಹಿತ್ಯ ದಾಸೋಹ ೧೯೬ರ ಪಿಡಿಎಫ್ ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದರು.

ದಾಸೋಹದಲ್ಲಿ ಒಟ್ಟು ೨೨ ಬರಹಗಾರರು ತಮ್ಮ ಸ್ವರಚಿತ ಪ್ರಸ್ತುತಿಗಳನ್ನು ಮಂಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಗಿರಿಜಾರಾಜ್ ರವರು ಮಾತನಾಡಿ ಇಂದು ನನ್ನ ಜೀವನದ ಅತ್ಯಂತ ಖುಷಿಯ ದಿನ. ವೈವಿಧ್ಯಮಯ ಸಾಹಿತ್ಯ ಕುಸುಮಗಳ ವಿಕಸಿತ ನಂದನದಲ್ಲಿ ವಿಹರಿಸುವಂತಹ ತೃಷಿತ ಚಂಚರೀಕವೇ ನಾನಾಗಿದ್ದೇನೆ. ಇಲ್ಲಿ ಹೊಸ ಜೀವನ ದರ್ಶನವೇ ನನಗಾಯಿತೆಂಬ ಭಾವ ನನ್ನನ್ನು ಆವರಿಸಿದೆ. ಒಂದೊಂದು ಲೇಖನವೂ ತನ್ನದೇ ಆದ ರೀತಿಯ ಚಿಂತನೆ ಸೊಬಗು ವಿಲಾಸ ವೈಖರಿಗಳಿಂದ ನನ್ನ ಮನಸ್ಸನ್ನು ಸೆಳೆದವು" ಎಂದು ಹೇಳಿ ಪ್ರತಿಯೊಂದು ಪ್ರಸ್ತುತಿಯ ಬಗ್ಗೆಯೂ ಬಹಳ ಸೊಗಸಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮ ನಿರ್ವಹಣೆ ಮಾಡಿದ ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್. ಮಹಾಬಲರವರು ಸಾಹಿತ್ಯ ದಾಸೋಹದಲ್ಲಿ ಭಾಗವಹಿಸಿದ ಎಲ್ಲರಿಗೂ ವಂದನೆ ಸಲ್ಲಿಸಿದರು.

*****

ವಿಸ್ಮಯ ತಾಣ

- ಜಿ.ವಿ.ನಿರ್ಮಲ

ಮನುಷ್ಯನ ಕಲ್ಪನೆಗೆ ಮೊದಲಿಲ್ಲ, ಕೊನೆಯಿಲ್ಲ. ವಿಶಾಲ ಸಮುದ್ರದ ನೀರಿನ ಮೇಲೆ ತೇಲಬೇಕೆನ್ನುವ ಬಯಕೆಯಿಂದ ತೇಲುವ ತೆಪ್ಪದಿಂದ ಪ್ರಾರಂಭಿಸಿ, ಪುಟ್ಟ ಪಟ್ಟಣದಂತಿರುವ ಐಷಾರಾಮಿ ಹಡಗುಗಳನ್ನು ಕಟ್ಟಿ ಸಮುದ್ರದ ಮೇಲೆ ತೇಲಾಡಿ ಹೆಮ್ಮೆ ಪಟ್ಟಿದ್ದಾನೆ. ಹಕ್ಕಿಯಂತೆ ಹಾರಬೇಕೆಂದು ಛಲಹಿಡಿದು ವಿಮಾನಗಳನ್ನು ತಯಾರಿಸಿ ಬಾನಂಗಳದಲ್ಲಿ ವಿಹರಿಸಿದ್ದಾನೆ. ಅಷ್ಟೇಕೆ ಚಂದ್ರನ ಮೇಲೆ ಮನೆ ಕಟ್ಟುವ ಸಾಹಸಕ್ಕೂ ಕೈ ಹಾಕಿದ್ದಾನೆ. ಈ ಎಲ್ಲ ಸಾಧನೆಗಳನ್ನು ಸಾಧಿಸಲು ಪ್ರಕೃತಿ ನಿಯಮಗಳನ್ನು ಅರಿಯುವುದು ಅತ್ಯವಶ್ಯಕ. ಪ್ರಕೃತಿ ನಿಯಮಗಳು, ಅತಿ ನಿಖರವಾಗಿರು ವುದರಿಂದಲೇ ಅವುಗಳನ್ನು ಸಂಪೂರ್ಣವಾಗಿ ಅರಿತು, ಸೂಕ್ತವಾಗಿ ಬಳಸಿಕೊಂಡ ಮನುಷ್ಯ, ಇಂದು ಇಷ್ಟೆಲ್ಲಾ ಸಾಧನೆಗಳನ್ನು ಮಾಡಿದ್ದಾನೆ. ಆದರೆ ಒಂದು ವೇಳೆ ಈ ನಿಯಮಗಳು ಏರುಪೇರಾದರೆ? ಉದಾಹರಣೆಗೆ ಸಾಮಾನ್ಯ ಮನುಷ್ಯನಿಗೂ ಗೊತ್ತಿರುವ ನಿಯಮವನ್ನೇ ತೆಗೆದುಕೊಳ್ಳಿ. ಹರಿಯುವ ನೀರು ಮೇಲಿನಿಂದ ಕೆಳಗೆ ಹರಿಯುವ ಬದಲು ಕೆಳಗಿನಿಂದ ಮೇಲಕ್ಕೆ ಹರಿದರೆ ಹೇಗೆ? ಭೂಮಿಯ ಮೇಲೆ ನೆಟ್ಟಗೆ ನಿಂತು ನಡೆಯುವ ಜನರು 20 ಡಿಗ್ರಿ ಕೋನದಲ್ಲಿ ವಾಲಿಕೊಂಡು ನಡೆಯಲು ಪ್ರಾರಂಭಿಸಿದರೆ ಹೇಗೆ ಕಾಣಬಹುದು? ಏನು ಇವರಿಗೆ ಹುಚ್ಚು ಹಿಡಿಯಿತೇ ಎಂದು ಯೋಚಿಸುತ್ತಿದ್ದೀರಾ? ಇಲ್ಲ; ಭೌತವಿಜ್ಞಾನದ ನಿಯಮಗಳನ್ನೆಲ್ಲಾ ಗಾಳಿಗೆ ತೂರಿದಂತೆ ದಿಗ್ಭ್ರಮೆ ಹಿಡಿಸುವಂತಹ ಸ್ಥಳವೊಂದನ್ನು ವೀಕ್ಷಿಸುವ ಅವಕಾಶ ನನಗೆ ಅಮೆರಿಕಾದ ಕ್ಯಾಲಿಫೋರ್ನಿಯಾದಲ್ಲಿ ದೊರಕಿತು.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಉನ್ನತ ಶಿಖರದಲ್ಲಿರುವ ಅಮೆರಿಕನ್ನರಿಗೂ, ಈ ಸ್ಥಳ ಇಂದಿಗೂ ಸವಾಲಾಗಿಯೇ ಉಳಿದಿರುವುದರಿಂದ ಇದನ್ನು 'Mystery Spot' ಎಂದೇ ಕರೆಯುತ್ತಾರೆ. ಈ ವಿಸ್ಮಯ ತಾಣದ ಬಗ್ಗೆ ನಾನು ಬಹಳ ಮುಂಚೆಯೇ ಓದಿದ್ದೆ; ಅದು ನನ್ನಲ್ಲಿ ಬಹಳ ಕುತೂಹಲವನ್ನೂ ಮೂಡಿಸಿತ್ತು. ನನಗೆ ಈ ಸ್ಥಳವನ್ನು ನೋಡುವ ಅವಕಾಶವೂ ದೊರೆತದ್ದು ಸಂತಸದ ವಿಷಯ.

ಈ 'Mystery Spot' ಕ್ಯಾಲಿಫೋರ್ನಿಯಾದ ಸಾಂತಾಕ್ರೂಸ್ ಬೆಟ್ಟದ ಬಳಿ ರೆಡ್‌ವುಡ್ ಕಾಡಿನಲ್ಲಿ ಸುಮಾರು 150 ಅಡಿ ವ್ಯಾಸದ ಪ್ರದೇಶದಲ್ಲಿದೆ. ಇದು ಬೆಳಕಿಗೆ ಬಂದದ್ದು 1939-1940ರಲ್ಲಿ. ಪ್ರಾತೆರ್ (Mr.Prather) ಎನ್ನುವವವರು ಬೇಸಿಗೆ ಮನೆ ಕಟ್ಟುವುದಕ್ಕೋಸ್ಕರ ಸ್ಥಳ ಹುಡುಕುತ್ತಿದ್ದಾಗ ಈ ಜಾಗ ಅವರಿಗೆ ಬಹಳ ಮೆಚ್ಚುಗೆಯಾಯಿತು. ಅದನ್ನು ಮಾರಲು ತಯಾರಾಗಿದ್ದ ಮಾಲೀಕ ಮಾತ್ರ ಸಮತಲ ಪ್ರದೇಶಕ್ಕೆ ಅಂಟಿಕೊಂಡಂತಿರುವ ಚಿಕ್ಕ ಗುಡ್ಡವನ್ನೂ ಖರೀದಿಸಿದರೆ ಮಾತ್ರ ಆ ಜಾಗವನ್ನು ಮಾರುತ್ತೇನೆನ್ನುವ ಷರತ್ತು ಹಾಕಿದರು. ಸರಿ ಎಂದ ಪ್ರಾತೆರ್ ಅವರು ಕುಟುಂಬ ಸಮೇತ ಗುಡ್ಡ ನೋಡಲು ಹೊರಟರು. ಆಗ ಅವರಿಗೆ ವಿಚಿತ್ರ ಅನುಭವಗಳಾದವು. ಗುಡ್ಡ ಹತ್ತುವಾಗ ಯಾರೋ ನೂಕಿದಂತಾಯಿತು. ಕೆಲವರಿಗೆ ತಲೆ ಸುತ್ತಿದಂತಾಯ್ತು. ಎಲ್ಲಕ್ಕಿಂತ ಹೆಚ್ಚಾಗಿ ಅವರ ಬಳಿ ಇದ್ದ ಕಂಪಾಸಿನ ಮುಳ್ಳು ವಿಚಿತ್ರವಾಗಿ ವರ್ತಿಸಿತು. ಈ ವಿಷಯ ಮಾಲೀಕರಿಗೆ ತಿಳಿಸಿದಾಗ ಯಾವುದಾದರೂ ಖನಿಜಗಳು ಭೂಮಿಯ

ಒಳಗೆ ಹುದುಗಿರಬಹುದು ಅಥವಾ ಯಾವುದೋ ಕಬ್ಬಿಣದ ಬೇಲಿ ಇರಬಹುದು ಎಂದು ಹೇಳಿದರು. ಅಂತೂ ಇಂತೂ ಪ್ರಾತೆರ್ ಆ ಜಾಗವನ್ನು ಖರೀದಿಸಿದರು. ಆದರೆ ಮನೆ ಕಟ್ಟಲು ಸರ್ವೆಮಾಡಲು ಹೊರಟ ಇಂಜಿನಿಯರ್‌ಗಳಿಗೂ ಮತ್ತೆ ಮತ್ತೆ ವಿಚಿತ್ರ ಅನುಭವ ಗಳಾದವು. ಈ ಜಾಗದಲ್ಲಿ ಕೆಲವು ಉಪಕರಣಗಳು ಸರಿಯಾಗಿ ಕೆಲಸ ಮಾಡಲಿಲ್ಲ. ಇಂದಿಗೂ ರೇಡಿಯೋ ಮತ್ತು ಮೊಬೈಲ್ ಫೋನ್ ಸರಿಯಾಗಿ ಕೆಲಸ ಮಾಡುವುದಿಲ್ಲ. ಇಷ್ಟೆಲ್ಲಾ ಆದಮೇಲೆ ಅವರು



ಪ್ರವೇಶ ದ್ವಾರ

ಮನೆ ಕಟ್ಟುವ ಯೋಜನೆ ಕೈ ಬಿಟ್ಟು ಈ ಜಾಗವನ್ನು ಪ್ರವಾಸಿ ಸ್ಥಳವನ್ನಾಗಿ ಅಭಿವೃದ್ಧಿ ಮಾಡಲು ನಿರ್ಧರಿಸಿದರು! ಇದೇ ಈ 'Mystery Spot' ಅಥವಾ 'ವಿಸ್ಮಯ ತಾಣ'.

ಬನ್ನಿ ಹೊಕ್ಕು ನೋಡೋಣ ವಿಸ್ಮಯ ತಾಣವನ್ನು: ನಾವು ವಿಸ್ಮಯ ತಾಣ ತಲುಪಿದಾಗ ಮಧ್ಯಾಹ್ನ 3 ಘಂಟೆಯ ಸಮಯ. ಮಾರ್ಗದರ್ಶಿ ಒಂದು ಬಾರಿಗೆ 20-20 ಜನರಂತೆ, ಗುಂಪು ಗುಂಪಾಗಿ ಜನರನ್ನು ಆ ಜಾಗದ ವೀಕ್ಷಣೆಗೆ ಕರೆದುಕೊಂಡು ಹೋಗುತ್ತಿದ್ದುದರಿಂದ, ನಾವು ಟಿಕೆಟ್ ಪಡೆದುಕೊಂಡು ನಮ್ಮ ಸರದಿಗಾಗಿ ಕಾದು ಕುಳಿತೆವು.

ಅಲ್ಲಿ ಅನೇಕ ಭಾರತೀಯರೂ ಬಂದಿದ್ದರು. ನಮ್ಮ ಸರದಿ ಬಂದ ಕೂಡಲೆ ನಾವು ಅತ್ಯಂತ ಕುತೂಹಲದಿಂದ ಹೊರಟೆವು. ಪ್ರವೇಶ ದ್ವಾರದ ಸ್ವಲ್ಪ ಮುಂದೆಯೇ ಎರಡು ಸಮತಟ್ಟಾದ ಸಿಮೆಂಟ್ ಹಲಗೆಗಳಿವೆ. ಆ ಎರಡೂ ಹಲಗೆಗಳು ಒಂದೇ ಸಮತಲದಲ್ಲಿರುವುದನ್ನು ಖಚಿತಪಡಿಸಲು ಬಡಗಿಗಳು ಸಮತಲವನ್ನು ಅಳೆಯಲು ಬಳಸುವ ರಸಮಟ್ಟ (ಸ್ಪಿರಿಟ್ ಲೆವೆಲ್) ಇಟ್ಟಿದ್ದಾರೆ. ಎಲ್ಲರೂ ಇದನ್ನು ಗಮನಿಸಿ ನೋಡಿದ ಮೇಲೆ ಮಾರ್ಗದರ್ಶಿಯು ಪ್ರವಾಸಿ ಗುಂಪಿನಿಂದ ಇಬ್ಬರನ್ನು ಆರಿಸಿ, ಒಬ್ಬೊಬ್ಬರು ಒಂದೊಂದು ಹಲಗೆಯ ಮೇಲೆ ಎದಿರುಬದಿರಾಗಿ ನಿಲ್ಲುವಂತೆ ಹೇಳಿದ. ಅವರಿಬ್ಬರಲ್ಲಿ ಒಬ್ಬ ಮತ್ತೊಬ್ಬನಿಗಿಂತ ಸ್ವಲ್ಪ ಎತ್ತರವಾಗಿದ್ದ. ಏನಾಶ್ಚರ್ಯ! ಕುಳ್ಳಗಿದ್ದ ಮನುಷ್ಯ ಸ್ವಲ್ಪ ಎತ್ತರವಾಗಿ ಹಾಗೂ ಎತ್ತರವಾಗಿದ್ದ ಮನುಷ್ಯನ ಸಮವಾಗಿ ಕಾಣಿಸಿದ. ಜಾಗವನ್ನು ಅದಲುಬದಲು ಮಾಡಿಕೊಂಡಾಗ ಎತ್ತರ ವಾಗಿದ್ದ ಮನುಷ್ಯ ಮತ್ತಷ್ಟು ಎತ್ತರವಾಗಿ ಕಂಡ. ಒಟ್ಟಿನಲ್ಲಿ ಒಂದು ಬದಿಯಲ್ಲಿ ನಿಂತ ಮನುಷ್ಯನ ಎತ್ತರ ಹೆಚ್ಚಾದಂತೆ


ಎಡಗಡೆ ಬನ್ನಿ, ಎತ್ತರ ಬೆಳೆಯಿರಿ

ಭಾಸವಾಗುತ್ತಿತ್ತು. ಗುಂಪಿನಲ್ಲಿ ಅನೇಕ ಜೋಡಿಗಳು ಎದಿರು-ಬದಿರು ನಿಂತು ಪರೀಕ್ಷೆಮಾಡಿ ನೋಡಿಕೊಂಡರು. ಈ ಸೋಜಿಗವನ್ನು ನೋಡಿ ಆಶ್ಚರ್ಯಪಟ್ಟೆವು ಆನಂದಿಸಿದೆವು. ಹೇಗೆಂದು ವಿವರಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ಎತ್ತರದಲ್ಲಾದ ಬದಲಾವಣೆ ಕೇವಲ ತಾತ್ಕಾಲಿಕ. ಇದು ಮಾನಸಿಕವೋ (Psychological), ದೃಷ್ಟಿಭ್ರಮೆಯೋ (optical illusion) ದೇವರೇ ಬಲ್ಲ.

ಅಲ್ಲಿಂದ ಮುಂದೆ ಸ್ವಲ್ಪ ಏರು ರಸ್ತೆಯಲ್ಲಿ ಹತ್ತಿಕೊಂಡು ಹೋಗಬೇಕು. ಬಹಳ ಹೆಚ್ಚು ಎತ್ತರವೇನೂ ಇಲ್ಲ. ಆದರೂ ಹತ್ತುವುದು ಸ್ವಲ್ಪ ಕಷ್ಟವೆನಿಸುತ್ತದೆ. ಹಿಂದಕ್ಕೆ ತಳ್ಳಿದಂತಾಗುತ್ತದೆ. ಕೆಲವರಿಗೆ ತಲೆ ಸುತ್ತಿದಂತಾಗುತ್ತದೆ. ವಿಪರೀತ ಕಷ್ಟವಾದರೆ ಅಂತಹವರು ದಯಮಾಡಿ ಮೇಲೆ ಬರಬೇಡಿ ಎಂದು ಮಾರ್ಗದರ್ಶಿ ಎಚ್ಚರಿಕೆ ನೀಡಿದ. ನಾವು ನಿಧಾನವಾಗಿ ಮೇಲೇರಿದೆವು. ಮೇಲುಗಡೆ ಒಂದು ಇಳಿಜಾರಿನಲ್ಲಿ ಮರದಿಂದ ಮಾಡಿದ ಒಂದು ಚಿಕ್ಕ ಮನೆ ಇದೆ. ಇದನ್ನು `Tilting cabin' ಎಂದು ಕರೆಯುತ್ತಾರೆ. ನನಗೆ ಇದನ್ನು `ಮಾಯಾ ಕುಟೀರ' ಎನ್ನಬಹುದು ಎನ್ನಿಸಿತು. ಒಳಗೆ ಹೋಗುತ್ತಿದ್ದ ಹಾಗೆ ನೀವು ನೆಟ್ಟಗೆ ನಿಂತಿದ್ದರೂ, ಪೀಸಾ ನಗರದ ವಾಲುಗೋಪುರದಂತೆ ಬಾಗಿಕೊಂಡು ನಿಂತಿರುವಂತೆ ಕಾಣಿಸುತ್ತೀರಿ (ಸುಮಾರು 20 ಡಿಗ್ರಿ ಕೋನ). ಫೋಟೋ ತೆಗೆದರೂ ಅದೇ ರೀತಿ ಕಾಣಿಸುತ್ತದೆ. ಎಲ್ಲರೂ ಫೋಟೋ ತೆಗೆಸಿಕೊಳ್ಳುವವರೇ. ಒಬ್ಬರನ್ನೊಬ್ಬರು ನೋಡಿ ನಗುವವರೆ.



ಗುಂಡು ತಳ್ಳಿ ನೋಡಿ

ಮುಂದೆ ನಡೆದರೆ ಕೊನೆಯಲ್ಲಿ ಲೋಹದ ದಪ್ಪ ಗುಂಡನ್ನುಳ್ಳ ಒಂದು ಲೋಲಕವನ್ನು ತೂಗಿ ಹಾಕಿದ್ದಾರೆ. ಇದನ್ನು ಮೇಲಿಂದ ಕೆಳಗೆ ತಳ್ಳುವುದು ಕಷ್ಟವೆನಿಸುತ್ತದೆ. ಕೆಳಗಿನಿಂದ ಮೇಲೆ ತಳ್ಳುವುದು ಸುಲಭವೆಂದೆನಿಸುತ್ತದೆ. ಅಂದರೆ ಗುರುತ್ವಾಕರ್ಷಣೆಯ ಸಿದ್ಧಾಂತಗಳು ತಲೆಕೆಳಗಾದಂತೆ ತೋರುತ್ತದೆ. ಅದೇ ರೀತಿ ಒಂದು ಇಳಿಜಾರು ಹಲಗೆಯ ಮೇಲೆ ಒಂದು ಚೆಂಡು ಕೆಳಗಿನಿಂದ ಮೇಲಕ್ಕೆ ಉರುಳುತ್ತದೆ. ಅಲ್ಲ ಏರುತ್ತದೆ! ನಮ್ಮ ಕಣ್ಣುಗಳನ್ನು ನಾವು ನಂಬುವುದೇ ಕಷ್ಟವಾಯಿತು. ಬಹಳ ವಿಚಿತ್ರವೆಂದೆನಿಸಿತು! ಆದರೆ ಹೀಗಾಗಿದ್ದು ನಿಜ.

ಅಲ್ಲಿಯೇ ಪಕ್ಕದಲ್ಲಿ ಗೋಡೆಯ ಮೇಲೆ ಮರದ ಚಿಕ್ಕ ಚಿಕ್ಕ ಹಲಗೆಗಳಿಂದ ಮಾಡಿದ ಮೆಟ್ಟಲುಗಳಿವೆ. ಆ ಮೆಟ್ಟಲುಗಳನ್ನು ಯಾರಾದರೂ ಹತ್ತಿ ಎಂದು ಮಾರ್ಗದರ್ಶಿ ಸೂಚಿಸಿದ. ಮತ್ತೊಂದು ಆಶ್ಚರ್ಯ! ಏಣಿಯ ಮೆಟ್ಟಲುಗಳಂತಿರುವ ಮೆಟ್ಟಲುಗಳನ್ನು ಅಕ್ಕಪಕ್ಕ ಏನೂ ಹಿಡಿದುಕೊಳ್ಳದೆ, ಸುಲಭವಾಗಿ ನೆಲದ ಮೇಲೆ ನಡೆಯುವಂತೆ ಹತ್ತಬಹುದು. ಸರಿ ಎಲ್ಲರೂ ಚಕಚಕನೆ ಮೆಟ್ಟಲೇರುವ ಆಟ ಪ್ರಾರಂಭಿಸಿದೆವು. ದೊಡ್ಡವರು, ಚಿಕ್ಕವರು, ಹೆಂಗಸರು, ಗಂಡಸರು ಎಲ್ಲರೂ ಆಟದಲ್ಲಿ ಭಾಗಿಯಾದೆವು.

ಆದರೆ ಮುಂದಿನ ಕೊಠಡಿಯಲ್ಲಿ ಹೋದರೆ ಬೇರೆಯೇ ಅನುಭವ ಕಾದಿತ್ತು. ಅಲ್ಲಿ ಸಮತಟ್ಟಾದ ನೆಲದ ಮೇಲೆ ನಡೆದುಕೊಂಡು ಹೋಗಬೇಕಾದರೆ ಇಳಿಜಾರಿನಲ್ಲಿ ನಡೆಯುವಾಗ ಆಗುವ ಹಾಗೆ ಜಾರಿ ಬೀಳುವ ಹಾಗಾಯಿತು. ಒಬ್ಬರ ಕೈ ಒಬ್ಬರು ಹಿಡಿದುಕೊಂಡು, ಗೋಡೆ ಹಿಡಿದುಕೊಂಡು ಎದ್ದು ಬಿದ್ದು ಆ ಪಕ್ಕ ತಲುಪಿದೆವು. ಮತ್ತೊಂದು ಏತ-ದೂತದ ತುದಿಗಳಲ್ಲಿ ಇಬ್ಬರು ನಿಂತಾಗ ಹೆಚ್ಚು ತೂಕದ ಮನುಷ್ಯ ಮೇಲಕ್ಕೆ ಹೋಗುತ್ತಾನೆ.



ಯಾರ ತೂಕ ಹೆಚ್ಚು?



ನೆಲ ಯಾವುದು? ಗೋಡೆ ಯಾವುದು?

ನಾನು ಸುಳ್ಳಿನ ಮೇಲೆ ಸುಳ್ಳು ಹೇಳುತ್ತಿರುವೆನೆಂದು ಅನುಮಾನಿಸುತ್ತಿರುವಿರಾ? ಖಂಡಿತ ಇಲ್ಲ. ಇವತ್ತಿಗೂ ಈ ಜಾಗದಲ್ಲಿ ಈ ಎಲ್ಲ ಚಮತ್ಕಾರಗಳು (?) ನಡೆಯುತ್ತಿವೆ. ಈ ಜಾಗದ ಬಗ್ಗೆ ಅನೇಕ ಅಧ್ಯಯನಗಳು, ಸಂಶೋಧನೆಗಳು ನಡೆದಿವೆ. ಮಹಾಭಾರತದಲ್ಲಿ ಇಂತಹ ಒಂದು ಮನೆಯನ್ನು ಧರ್ಮರಾಯನು ಕಟ್ಟಿಸಿ ಧುರ್ಯೋಧನನಿಗೆ ಅವಮಾನಗೊಳಿಸುದುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದಲ್ಲವೆ?

1959ರಲ್ಲಿ, ಇಂಗ್ಲಿಷ್ ಭಾಷೆಯ ಪ್ರಸಿದ್ಧ ಮಕ್ಕಳ ಕಾಮಿಕ್ ಪುಸ್ತಕ `Dennis the menace' ನಲ್ಲಿ, ಡೆನಿಸ್ ಈ `ವಿಸ್ಮಯ ತಾಣ'ವನ್ನು ಭೇಟಿ ಮಾಡಿದ ಕಥೆ ಪ್ರಕಟವಾಯಿತು. ಇದನ್ನು ಓದಿದ ಅನೇಕ ಜನರು ಈ ಜಾಗವನ್ನು ನೋಡಿ ಆನಂದಿಸಲು, ಅಧ್ಯಯನ ಮಾಡಲು ಮುಂದಾದರು. ಕೆಲವರು ನೈಸರ್ಗಿಕ ಇಳಿಜಾರು, ಏರು ತಗ್ಗುಗಳನ್ನು ಬಹಳ ಜಾಣತನದಿಂದ ಉಪಯೋಗ ಪಡೆದುಕೊಂಡಿರುವುದೇ ಈ ಅನುಭವಗಳಿಗೆ ಕಾರಣ ಎಂದು ರೇಖಾಗಣಿತದ ಆಧಾರದ ಮೇಲೆ ವಿವರಿಸಿದ್ದಾರೆ. ಅನೇಕಾನೇಕ ವಿವರಣೆಗಳಿದ್ದರೂ ಇಲ್ಲಿಯವರೆಗೂ ಯಾವ ವಿವರಣೆಯೂ ಸಂಪೂರ್ಣವಾಗಿ ಸಮಾಧಾನ ನೀಡಿಲ್ಲ. ಸ್ವಲ್ಪ ಸಮಾಧಾನ ನೀಡಿದರೂ ಈ ಅನುಭವಗಳನ್ನು ಪಡೆಯುವುದು ಸಾಧ್ಯವಾಗುತ್ತಿರುವುದರಿಂದ ಈ ಸ್ಥಳ ಅನೇಕ ಪ್ರವಾಸಿಗಳಿಗೆ ಅಚ್ಚರಿ, ವಿನೋದ ಮತ್ತು ಮನರಂಜನೆಯನ್ನು ಒದಗಿಸುತ್ತಿರುವ ಕೌತುಕಪೂರ್ಣ 'ವಿಸ್ಮಯ ತಾಣ'ವಾಗಿಯೇ ಉಳಿದಿದೆ.

*****

ಪ್ರವಾಸ ಕಥನ

ನೀಲ್ ಐಲ್ಯಾಂಡ್

- ಗೌರಿ ಭಟ್ಟ

ಅಂಡಮಾನಿನಲ್ಲಿ ನಮ್ಮ ಯಜಮಾನರ ವರ್ಗಾವಧಿ ಮುಗಿಯುತ್ತಾ ಬಂದಿತ್ತು. ಅಂಡಮಾನಿನಲ್ಲಿ ಜಾಲಿಬಾಯ್, ರೆಡ್ಸ್ಕಿನ್ ಮೊದಲಾದ ಪ್ರಮುಖ ನಡುಗಡ್ಡೆಗಳನ್ನೆಲ್ಲಾ ನೋಡಿಯಾಗಿತ್ತು. ಕಡೆಯದಾಗಿ ಸುಂದರವಾದ, ಅತ್ಯಾಕರ್ಷಕವಾದ "ವೆಜಿಟೇಬಲ್ ಬೌಲ್" ಎಂದು ಪ್ರಸಿದ್ಧವಾದ ನೀಲ್ ಐಲ್ಯಾಂಡ್ ನೋಡಲೇಬೇಕೆಂದು ಆಸೆಯಾಗಿತ್ತು. ಇಡೀ ಅಂಡಮಾನಿಗೇ ವಿಧವಿಧದ ತರಕಾರಿ ಪೂರೈಕೆ ಆಗುವ ನಡುಗಡ್ಡೆ. ನೀಲಾಕಾಶ, ನೀಲಿ ಕಡಲತೀರವನ್ನು ನೋಡಲು ಮನಸು ಹಾತೊರೆಯುತ್ತಿತ್ತು. ನೀಲ್ ಐಲ್ಯಾಂಡ್ ನೋಡಲು ಒಂದು ಶನಿವಾರ ತಯಾರಾಗಿ ಹಡಗಿನಲ್ಲಿ ನಾನು ಮತ್ತು ನನ್ನ ಯಜಮಾನರು ಕುಳಿತೆವು.

ರಜಾದಿನದ ಪ್ರವಾಸ. ತುಂಬಾ ಜನರಿದ್ದರು. ಎಲ್ಲಾ ಅವರವರ ಕುಟುಂಬದವರೊಡನೆ ಮಜಾ ಮಾಡುತ್ತಾ ಸಮುದ್ರ ಯಾನದ ಖುಷಿ ಸವಿಯುತ್ತಿದ್ದರು. ಸಮುದ್ರದ ಅಲೆಗಳು, ಅದರಲ್ಲಿ ಈಜಾಡುತ್ತಿರುವ ಮೀನುಗಳು. ನಾನಂತೂ ಬೇರೆಯೇ ಲೋಕದಲ್ಲಿದ್ದೆ. ಹಡಗು ಆಕಡೆ ಈಕಡೆ ಜೋರಾಗಿ ಅಲುಗಾಡುತಿತ್ತು. ತೆರೆಗಳ ಅಬ್ಬರ ಜೋರಾಗಿತ್ತು. ಹಡಗಿನ ಒಳಗೆಲ್ಲಾ ನೀರು ರಭಸವಾಗಿ ತುಂಬಿಕೊಳ್ಳುತ್ತಾ ಇತ್ತು. ಹಡಗಿನ ಅಲ್ಲಾಟದ ರಭಸಕ್ಕೆ ಕೆಲವರು ವಾಂತಿ ಮಾಡಿಕೊಳ್ಳುತ್ತಿದ್ದರು. ಎಲ್ಲರೂ ಗಾಬರಿಗೊಂಡೆವು.

ಆಗ ಹಡಗಿನ ಕಾರ್ಮಿಕ ಸಮಾಧಾನ ಮಾಡಿದ. "ಹೆದರಬೇಕಾಗಿಲ್ಲ, ಸಮುದ್ರ ಪ್ರಕ್ಷುಬ್ಧ ವಾಗಿದೆ. ಹಡಗಿನಲ್ಲೇ ಕುಳಿತು ಕೊಳ್ಳಿ. ಆಕಡೆ ಈಕಡೆ ಓಡಾಡುವುದು ಬೇಡ" ಎಂದು ಹೇಳಿದ. ನಿಂತಿದ್ದ ನನಗೆ ದೊಡ್ಡ ತೆರೆಯೊಂದು ಅಪ್ಪಳಿಸಿತು. ಹೇಗೋ ಸಾವರಿಸಿಕೊಂಡು ಗಡಗಡ ನಡುಗುತ್ತಾ ಗಟ್ಟಿಯಾಗಿ ಕಣ್ಣು ಮುಚ್ಚಿ ಕುಳಿತುಕೊಂಡೆ. ಒಂದು ತರಹದ ಭಯದಿಂದಲೇ ಸಮುದ್ರಯಾನವನ್ನು ಸುಖಿಸುತ್ತಿದ್ದೆ.

ಅಂತೂ ನೀಲ್ ಐಲ್ಯಾಂಡ್ ತಲುಪಿದೆವು. ಸುಂದರ, ಅತೀ ಸುಂದರ ನಡುಗಡ್ಡೆ. ಅಲ್ಲಿ ನಡುಗಡ್ಡೆಯ ಪೂರ್ಣ ಪರಿಚಯವಿರುವ ಒಬ್ಬ ಗೈಡ್ ನಮ್ಮ ಜೊತೆಯಲ್ಲಿ ಇದ್ದರು. ಸಮುದ್ರದ ಇಳಿತ, ಭರತಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಬೇರೆ ಬೇರೆ ಜಾಗಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿಯ ಮರಳಿನಲ್ಲಿ ಮನಸೋ ಇಚ್ಛೆ ಓಡಾಡಿದೆ. ಬಣ್ಣ ಬಣ್ಣದ ನಕ್ಷತ್ರ ಮೀನುಗಳನ್ನೂ, ಕಡಲ ಸೌತೆಯನ್ನೂ ಕೈಗೆತ್ತಿಕೊಂಡು ಆಟವಾಡಿದೆ. ಕಪ್ಪೆಚಿಪ್ಪು ನೋಡಿದ ನನಗೆ ಖುಷಿಯಾಗಿದ್ದೆಂದರೆ ಚಿಪ್ಪಿನೊಳಗಿನ ನಿಜವಾದ ಮುತ್ತು. ಚಿಪ್ಪು ತೆರೆದಿರುತ್ತದೆ ಹೊಳೆಯುವ ಬಿಳೀ ಮುತ್ತು, ಖುಷಿಯಿಂದ ಮುಟ್ಟಿದರೆ ಟಪ್ ಅಂತ ಮುಚ್ಚಿಕೊಳ್ಳುತ್ತೆ. ತುಂಬಾ ಹೊತ್ತು ಅಲ್ಲಿ ಕಳೆದೆ, ವಯಸ್ಸನ್ನೂ ಮರೆತು ಸಾಕೆನಿಸುವಷ್ಟು ಕುಣಿದೆ, ಕುಪ್ಪಳಿಸಿದೆ. ನಮ್ಮ ಗೈಡ್ ಹೇಳಿದರು ಈಗ ಇಲ್ಲಿ ನೀರಿಲ್ಲ, ಭರತವಾದಾಗ ಆಳೆತ್ತರದಲ್ಲಿ ಸಮುದ್ರದ ನೀರಿನಿಂದ ಈ ಜಾಗ ತುಂಬಿರುತ್ತದೆ ಎಂದು. ನೆನಪಿಸಿಕೊಂಡು ಮೈಯೆಲ್ಲಾ ಜುಂ ಅನ್ನಿಸಿತು. ಸುಂದರವಾದ ನೀಲ್ ಐಲ್ಯಾಂಡ್ ನಲ್ಲಿ ಮನಸೋ ಇಚ್ಛೆ ಸುತ್ತಾಡಿದೆವು.

ಆದರೆ ಸಮುದ್ರ ಪ್ರಕ್ಷುಬ್ಧವಾಗಿದ್ದ ಕಾರಣ ನಮಗೆ ಪೋರ್ಟ್ ಬ್ಲೇರ್ ಗೆ ಹಿಂತಿರುಗಿ ಹೋಗಲು ಹಡಗು ಇರಲಿಲ್ಲ. ನಮ್ಮ ಹತ್ತಿರ ಸಾಕಷ್ಟು ದುಡ್ಡೂ ಇರಲಿಲ್ಲ, ಬೇರೆ ಬಟ್ಟೆ ಇರಲಿಲ್ಲ. ನೀಲ್ ಐಲ್ಯಾಂಡ್ ನಲ್ಲಿ ಯಾವುದೇ ಏಟಿಎಂ ಇಲ್ಲದ ಕಾರಣ ಏಟಿಎಂ ಕಾರ್ಡು ಸಹ ಪ್ರಯೋಜನಕ್ಕೆ ಬರಲಿಲ್ಲ. ಒಮ್ಮೆ ಏನು ಮಾಡುವುದೆಂದು ತಿಳಿಯದೇ ಗಾಬರಿಗೊಂಡೆವು. ಹುಡುಕಾಡಿದಾಗ ನನ್ನ ಯಜಮಾನರ ಪರ್ಸಿನಲ್ಲಿ ಐನೂರು ರೂಪಾಯಿ, ನನ್ನ ಬ್ಯಾಗಿನಲ್ಲಿ ಮುನ್ನೂರಾ ಐವತ್ತು ರೂಪಾಯಿಗಳಿದ್ದವು. ಐನೂರು ರೂಪಾಯಿಯಲ್ಲಿ ಸರ್ಕಾರಿ ಪ್ರವಾಸಿ ಮಂದಿರದಲ್ಲಿ ಉಳಿಯಲು ಅವಕಾಶವಾಯಿತು.

ಸ್ನಾನ ಮಾಡಲು ಸೋಪು, ಒಂದು ಟವೆಲ್ಲಾದರೂ ತರಬೇಕೆಂದು ಅಂಗಡಿ ಹುಡುಕಿಕೊಂಡು ಹೋದೆವು. ಎಲ್ಲರೂ ನಮಗೆ ಅಪರಿಚಿತರು. ಆದರೆ ಅಲ್ಲಿಯವರು ನಮ್ಮನ್ನು ತುಂಬಾ ಪ್ರೀತಿಯಿಂದ ನೋಡಿದರು. ಯಾವುದೇ ಆಧುನಿಕತೆಯ ಸೋಂಕಿಲ್ಲದೇ ಮುಗ್ದವಾಗಿ ಸರಳವಾಗಿದ್ದ ಜನ. ತುಂಬಾ ಚಿಕ್ಕ ಊರು. ನಮಗೆ ನೀಲ್ ಐಲ್ಯಾಂಡಿನಲ್ಲಿ ಉಳಿಯುವ ಅನಿವಾರ್ಯತೆ ಬಂದಿತ್ತು ಎಂದು ಇಡೀ ಊರಿನವರಿಗೆ ತಿಳಿದಿತ್ತು. ದುಡ್ಡಿನ ಅವಶ್ಯಕತೆ ಇದ್ದರೆ ಸಂಕೋಚ ವಿಲ್ಲದೇ ಕೇಳಬೇಕೆಂದೂ, ನಾವು ಊರಿಗೆ ಹೋದಮೇಲೆ ವಾಪಸ್ಸು ಕೊಡಬಹುದೆಂದೂ ಕೆಲವರು ಹೇಳಿದರು. ಅಲ್ಲಿಯ ಮುರುಗನ ದೇವಸ್ಥಾನದಲ್ಲಿ ಮದುವೆ ಇತ್ತು. ದೇವಸ್ಥಾನವನ್ನು ಬಿದಿರು, ತೆಂಗಿನ ಗರಿಗಳಿಂದ ವಿಶೇಷವಾಗಿ ಅಲಂಕರಿಸಿದ್ದರು. ನಮಗೆ ಅಲ್ಲಿಗೆ ಆಹ್ವಾನ ಕೊಟ್ಟಿದ್ದಲ್ಲದೇ ಮದುವೆಯಲ್ಲಿ ಪಾಲ್ಗೊಳ್ಳದೇ ಇರಲು ಬಿಡಲೇ ಇಲ್ಲ. ನಮ್ಮನ್ನು ಅಪರಿಚಿತರಂತೆ ಕಾಣಲೇ ಇಲ್ಲ. ಅವರೊಳಗೊಬ್ಬರಂತೇ ನಮ್ಮನ್ನು ಕಂಡರು. ಋಣಾನುಬಂಧ ಅಂದರೆ ಇದೇ ಇರಬೇಕು ಅನ್ನಿಸಿತು.

ಊಟ ಮುಗಿಸಿ ರೂಮಿಗೆ ಬರುವಷ್ಟರಲ್ಲಿ ಜೋರು ಗುಡುಗು, ಮಿಂಚು, ಮಳೆ ಬಂದು ಕರೆಂಟು ಹೋಯಿತು. ಕಗ್ಗತ್ತಲು, ಅಪರಿಚಿತ ಜಾಗ, ಭಯದಿಂದ ನಮಗಿಬ್ಬರಿಗೂ ಏನೂ ಮಾಡಲು ತೋಚುತ್ತಿಲ್ಲ. ಗಂಟಲಲ್ಲಿ ನೀರಿನ ಪಸೆಯೇ ಇರಲಿಲ್ಲ. ನಮ್ಮ ರೂಮಿನ ಬಾಗಿಲು ತಟ್ಟುವ ಶಬ್ದ. ನಾನಂತೂ ದೇವರ ಸ್ಮರಣೆ ಮಾಡಿಕೊಳ್ಳುತ್ತಿದ್ದೆ. ಬಾಗಿಲಿನ ಬಳಿ ಆ ಊರಿನ ಐದಾರು ಜನ ನಿಂತಿದ್ದರು. ಕತ್ತಲಲ್ಲಿ ನಮಗೆ ಭಯವಾಗುವುದೆಂದು ಟಾರ್ಚ್ ಕೊಟ್ಟು ಧೈರ್ಯದಿಂದ ಇರಿ, ಬೇರೆ ಏನಾದರೂ ಬೇಕಾದರೆ ನಮ್ಮನ್ನೇ ಕೇಳಬೇಕೆಂದೂ ಹೇಳಿ ಹೋದರು.

ಮಾರನೇದಿನ ಬೆಳಗಿನ ಉಪಹಾರ ಮುಗಿಸಿದೆವು. ಬೆಳಿಗ್ಗೆ ಪೋರ್ಟ್ ಬ್ಲೇರಿಗೆ ವಾಪಸ್ಸಾಗಲು ಹಡಗು ತಯಾರಾಗಿತ್ತು. ಆದರೆ ನಮ್ಮನ್ನು ಕಳುಹಿಸಲು ಅವರು ತಯಾರಿರಲಿಲ್ಲ. ಮಿತ್ರ ಭೋಜನ ಮುಗಿಸಿ ಹೋಗಬೇಕೆಂದು ಒತ್ತಾಯಿಸಿದರು. ಯಾವ ಜನ್ಮದ ಮೈತ್ರಿಯೋ ಏನೋ.

ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ? ನನ್ನ ಹಾಗೂ ನನ್ನ ಯಜಮಾನರ ಕಣ್ಣುಗಳು ಹನಿಗೂಡಿದ್ದವು. ಭಾರವಾದ ಹೃದಯದಿಂದ, ಸವಿನೆನಪುಗಳೊಂದಿಗೆ ಸಾವಕಾಶವಾಗಿ ನಮ್ಮ ಕಾಲುಗಳು ಹಡಗಿನ ಕಡೆಗೆ ನಡೆದವು.

*****

ವಿಶ್ವಾಸ

- ಜೀವಿ. ಹೆಗಡೆ

'ಹೆಗಡೆ ನೀನು ಏನೇ ಹೇಳು. ರಮೇಶ ಪ್ರವೀಣನಿಗೆ ಹೀಗೆ ಮಾಡಬಾರದಿತ್ತು.' ಸುಧಾಕರ ನನ್ನಲ್ಲಿ ಪ್ರವೀಣನ ಪರ ವಕಾಲತ್ತು ವಹಿಸಿ ದೂರು ಕೊಟ್ಟ.

ನಾನು ಏನೂ ಹೇಳಿರಲಿಲ್ಲ. ಅಥವಾ ಹೇಳಲು ಸುಧಾಕರ ಯಾರಿಗೂ ಅವಕಾಶವನ್ನು ಕೊಡುವುದೂ ಇಲ್ಲವೆನ್ನಿ. ರಮೇಶ, ಪ್ರವೀಣ ಇಬ್ಬರೂ ನನ್ನ ಸ್ನೇಹಿತರೆ. ಎಷ್ಟೋ ಸಲ ಯಾವುದೇ ವಿಷಯವನ್ನು ಪ್ರಸ್ತಾಪಿಸಿ, ಮಂಡನೆಮಾಡಿ ವಿಮರ್ಶೆಯನ್ನೂ ಸುಧಾಕರನೇ ಮಾಡಿ ನಿರ್ಣಯಕೊಡುತ್ತಾನೆ. ನಾವು ಏನಾದರೂ ಮಾತಾಡಬೇಕು ಅಂತ ಅನ್ನಿಸಿದರೆ ಮಾತಾಡಬಹುದು. ನಮ್ಮ ಸಮಾಧಾನಕ್ಕೆ. ಅವನ ಹೇಳಿಕೆಯ ಮೇಲೆ ಅದು ಯಾವುದೇ ಪರಿಣಾಮ ಬೀರುವದಿಲ್ಲ. ಮಂಡನೆಯ ಪೂರ್ವದಲ್ಲಿಯೇ ನಿರ್ಣಯವಾದ ಸಿದ್ಧಾಂತ.

'ಬೇರೆಯವರಲ್ಲಿ ವಿಶ್ವಾಸ ಇಡುವದೇ ತಪ್ಪು', ಒಂದು ಸ್ಫೋಟಕ ಹೇಳಿಕೆ ಬಂದಿತು ಸುಧಾಕರನಿಂದ. ಹಿಂದೆಯೇ ಪ್ರವೀಣನ ಗುಣಗಾನ. ಆಮೇಲೆ ನನಗೊಂದು ಪ್ರಶ್ನೆ ಅವನದು. 'ವಿಶ್ವಾಸ ಇಡುವದು ತಪ್ಪೇ?'. ಉತ್ತರ ಬೇಕಿರಲಿಕ್ಕಿಲ್ಲ ಅಂತ ತಿಳಿದು ಸುಮ್ಮನಿದ್ದೆ. ಪುನಃ ಅದೇ ಪ್ರಶ್ನೆ ಕೇಳಿದ. ನನ್ನಿಂದ ಇಂದು ಉತ್ತರವನ್ನೂ ಬಯಸುತ್ತಾನಲ್ಲ ಎನ್ನುವ ಹಮ್ಮಿನಿಂದ ನಾನು ಎರಡು ಹೆಚ್ಚೇ ಮಾತನಾಡಿದೆ.

'ಸುಧಾಕರ, ವಿಶ್ವಾಸೋ ಫಲದಾಯಕಃ ಅವಿಶ್ವಾಸೋ ಪ್ರಾಣಘಾತಕಃ' ಎನ್ನುವ ಒಂದು ಹೇಳಿಕೆ ಇದೆ. ಪ್ರಪಂಚದಲ್ಲಿ ಜನಜೀವನ ನಡೆಯುವದೇ ಪರಸ್ಪರ ವಿಶ್ವಾಸದ ಮೂಲಕ. ಪ್ರಾಣಿಗಳಲ್ಲಿಯೂ ಒಂದು ಬಗೆಯ ವಿಶ್ವಾಸ ಇದ್ದೇ ಇರುತ್ತದೆ. ಮನುಷ್ಯರಲ್ಲಿಯ ಈ ವಿಶ್ವಾಸದಿಂದಲೇ ಗಂಡ-ಹೆಂಡತಿ, ತಂದೆ-ಮಕ್ಕಳು, ಗುರು-ಶಿಷ್ಯರು, ಬಂಧು-ಬಾಂಧವರು, ಗೆಳೆಯರು ಮುಂತಾದವರ ಮಧ್ಯೆ ಸಂಬಂಧ ಗಟ್ಟಿಯಾಗಿರುವುದು. ವಿಶ್ವಾಸ ಇಡುವದು ಒಂದು ಧನಾತ್ಮಕವಾದ ಚಿಂತನೆ. ವಿಶ್ವಾಸ ಇಲ್ಲದೇ ಬದುಕೇ ಇಲ್ಲ.' ವಿಶ್ವಾಸದ ಬಗ್ಗೆ ನನಗೆ ತಿಳಿದದ್ದನ್ನು ಎರಡು ಮಾತುಗಳಲ್ಲಿ ತಿಳಿಸಿದೆ.

'ಪ್ರವೀಣ ಹಾಗೂ ರಮೇಶ ಗೆಳೆಯರು ಅಂತ ನಿನಗೂ ಗೊತ್ತು.'

'ಹೌದು'.

'ಜೀವಕ್ಕೆ ಜೀವಕೊಟ್ಟೇವು ಅಂತ ಹೇಳುತ್ತಿದ್ದರು'.

'ಅದು ಸರಿ. ಸ್ನೇಹ ಅಂದರೇ ಹಾಗೆ. ಪರಸ್ಪರ ವಿಶ್ವಾಸ ಇದ್ದಾಗ ಮೇಲು ಕೀಳು, ಬಡವ ಶ್ರೀಮಂತ ಇವೆಲ್ಲಾ ಭೇದ ಭಾವ ಇರುವದಿಲ್ಲ. ಒಬ್ಬರಿಗೆ ಪೆಟ್ಟಾದರೆ ಇನ್ನೊಬ್ಬರಿಗೆ ನೋವಾಗುತ್ತದೆ. ಇಬ್ಬರ ಹೃದಯಗಳು ಒಂದಾಗಿ ಆಮೇಲೆ ಎರಡು ಭಾಗಗಳಾಗಿ ಸ್ನೇಹಿತರ ಹೃದಯಗಳನ್ನು ಸೇರುತ್ತವೆಯಂತೆ. ವಿಷಯ ಏನು ಹೇಳು'', ಅವನ ಮಾತಿನ ಬಾಲ ಕತ್ತರಿಸುವ ಆಲೋಚನೆಯಲ್ಲಿ ನಾನೇ ಎರಡು ಮಾತು ಹೆಚ್ಚು ಹೇಳಿದೆ.

'ಈ ರಮೇಶನೇ, ಒಮ್ಮೆ ಹಣ ಬರುತ್ತದೆ ಹೋಗುತ್ತದೆ, ಆದರೆ ಸ್ನೇಹದ ವಿಶ್ವಾಸ ಶಾಶ್ವತವಾಗಿರುತ್ತದೆ' ಅಂತ ಹೇಳಿದ್ದನ್ನು ನಾನೇ ಕೇಳಿದ್ದೇನೆ. ಏನೋ ಪಾಪ ಪ್ರವೀಣ ಅಷ್ಟು ಅನುಕೂಲಸ್ಥನಲ್ಲ. ಏನೋ ಅರ್ಜೆಂಟ್ ಅವಶ್ಯಕತೆ ಇರಬಹುದಪ್ಪ. ಎಷ್ಟೇ ಶ್ರೀಮಂತನಾದರೂ ತುರ್ತು ಅವಶ್ಯಕತೆ ಇಲ್ಲದೇ ಇರುವವರು ಯಾರು ಹೇಳು. ಸ್ನೇಹಕ್ಕಿಂತ ಹಣ ದೊಡ್ಡದೇ?' ನನ್ನ ಮಾತನ್ನು ಸಮರ್ಥಿಸಿ ನನಗೇ ತಿರುಗಿ ಹೇಳಿದ ಸುಧಾಕರ.

ಮಾತಿನ ತಲೆ ಬುಡ ಅರ್ಥವಾಗಲಿಲ್ಲ. ಆದರೂ ಅವನ ಮಾತನ್ನು ಸಮರ್ಥಿಸಿಯೇ ಹೇಳಿದೆ. 'ನೀನು ಹೇಳಿದ್ದು ಹೌದು ಬಿಡು. ಸಮುದ್ರಕ್ಕೇ ನೀರಿನ ಅವಶ್ಯಕತೆ ಇರುತ್ತದೆಯಂತೆ. ಅದಕ್ಕಾಗಿಯೇ ಪ್ರೀತಿಯಿಂದ ನದಿಗಳು ತನ್ನಲ್ಲಿ ಸೇರಿಕೊಳ್ಳಲು ಅವಕಾಶ ಕೊಡುತ್ತದೆ. ಇನ್ನು ನಮ್ಮಂತವರ ಪಾಡೇನು'.

'ನಡೆದದ್ದು ಸಣ್ಣ ಘಟನೆ. ಪರಿಣಾಮ ಕ್ರೂರವಾದದ್ದು. ಅಲ್ಪಾರಂಭೇ ಬೃಹತ್ಕಯೇ ಅಂದ ಹಾಗೆ. ನಮ್ಮ ನಮ್ಮ ತೊಂದರೆಗಳನ್ನು ಜಗಜ್ಜಾಹೀರು ಮಾಡಿ ಹೇಳಲು ಬರುತ್ತದೆಯೇ? ಕಷ್ಟವನ್ನು ಹೇಳಿಕೊಳ್ಳಬಾರದು. ಸುಖವನ್ನು ಹಂಚಿಕೊಳ್ಳಬೇಕು ಅಂತ ನೀನೇ ಎಷ್ಟು ಸಲ ಉಪದೇಶಮಾಡಿಲ್ಲ ಹೇಳು'

ನನಗೆ ಸ್ವಲ್ಪ ಗರ್ವ ಬಂದಿತು. ನನ್ನ ಮಾತನ್ನು ಮೆಚ್ಚಿ ಹೇಳುತ್ತಿದ್ದಾನಲ್ಲ. 'ಯಾಕೆಂದರೆ 'ಸಂತೋಷಮ್ ಜನಯೇತ್ ಪ್ರಾಜ್ಞಃ ತದೇವೇಶ್ವರ ಪೂಜನಂ' ಅಂತ ಹೇಳಿಲ್ಲವೇ. ನಮ್ಮ ಕಷ್ಟವನ್ನು ಹೇಳಿಕೊಂಡರೆ ಪಾಪ ಸ್ನೇಹಿತರು ದುಃಖಿತರಾಗುತ್ತಾರೆ. ಹಾಗಾಗಬಾರದು. ಸುಖವನ್ನು ಹೇಳಿದರೆ ಅವರಿಗೆ ಸಂತೋಷವಾಗುತ್ತದೆ. ಆ ಕಾರಣಕ್ಕಾಗಿ ಹಾಗೆ ಹೇಳುವುದು.' ಸ್ವಲ್ಪ ವಿವರಿಸಿದೆ.

'ಪ್ರವೀಣ ಅರ್ಜೆಂಟಿಗೆ ಬೇಕಾಗಿದೆ ಅಂತ ರಮೇಶನಲ್ಲಿ ೧೦೦೦ ರೂಪಾಯಿ ಕೇಳಿದನಂತೆ, ಅಷ್ಟೇ. ಅದಕ್ಕಾಗಿ ರಮೇಶನದು ಎಷ್ಟು ಮಾತು. ದುಡ್ಡಿದೆ ಅಂತ ಅಷ್ಟು ಸೊಕ್ಕಿರಬಾರದು. ಮನೆಗೆ ಬಂದ ಗೆಳೆಯನಿಗೆ ಮನೆಯವರ ಮುಂದೆ ಅವಮಾನ ಮಾಡಿ ಕಳಿಸಬಹುದೊ? ನೀನೇ ಹೇಳು. ಪಾಪ ಕಷ್ಟದಲ್ಲಿರುವ ಪ್ರವೀಣನಿಗೆ ಎಷ್ಟು ಬೇಸರವಾಯಿತು ಗೊತ್ತೆ? 'ಬೆಲ್ಲ ಇಲ್ಲದಿದ್ದರೆ ಬೆಲ್ಲದಂತಹ ಮಾತಾದರೂ ಇರಬಾರದೇ? ನೀನು ನನ್ನಲ್ಲಿ ಮಾತನಾಡಲೇ ಬೇಡ ಅಂತ ಮುಖಕ್ಕೆ ಹೊಡೆದ ಹಾಗೆ ರಮೇಶ, ಪ್ರವೀಣನಲ್ಲಿ ಹೇಳಬಾರದಿತ್ತು. ಪ್ರವೀಣನೇ ಹೇಳಿ ನನ್ನಲ್ಲಿ ಕಣ್ಣೀರು ಹಾಕಿದ.

ಸ್ವತಃ ತಾನೇ ನೋಡಿದ ಘಟನೆಯ ಹಾಗೆ ನನ್ನ ಕಣ್ಣಿಗೆ ಕಟ್ಟುವ ಹಾಗೆ ವಿವರಿಸಿ ಹೇಳಿದ ಸುಧಾಕರ. ಇದ್ದರೂ ಇರಬಹುದು ಅನಿಸಿತು ನನಗೆ. ಕೆಲವರು ಸಣ್ಣ ವಿಷಯಕ್ಕೇ ನೊಂದುಕೊಳ್ಳುವವರಿರುತ್ತಾರೆ. ಪ್ರವೀಣನ ವಿಷಯ ತಿಳಿದು ನನಗೂ ಸ್ವಲ್ಪ ಬೇಸರವಾಯಿತು. ಯಾಕೋ ರಮೇಶನದು ಅತಿರೇಕದ ವರ್ತನೆ ಇರಬಹುದು ಅನ್ನಿಸಿತು.

'ಹೆಗಡೆ, ನಾನೊಂದು ತೀರ್ಮಾನಕ್ಕೆ ಬಂದಿದ್ದೇನೆ. ಎಷ್ಟೇ ಕಷ್ಟ ಬಂದರೂ ಈ ಜನ್ಮದಲ್ಲಿ ರಮೇಶನಲ್ಲಿ ಹಣ ಕೇಳುವದಿಲ್ಲ. ಇದನ್ನು ಬೇಕಾದರೆ ನೀನು ಭೀಷ್ಮ ಪ್ರತಿಜ್ಞೆ ಅಂತ ತಿಳಿ.' ಉದ್ವೇಗದಲ್ಲಿ ಹೇಳಿದ ಹಾಗೆ ಅನಿಸಿತು.

'ಹಾಗೆಲ್ಲಾ ಹೇಳಬಾರದು. ಯಾವುದೋ ವಿಷಗಳಿಗೆಯಲ್ಲಿ ನಡೆದ ಘಟನೆ ಅಂತ ಮರೆತು ಬಿಡಬೇಕು. ಯಾರಿಗೆ ಯಾವಾಗ ಯಾವ ಪರಿಸ್ಥಿತಿ ಬರುತ್ತದೆ ಎನ್ನಲು ಬರುವದಿಲ್ಲ.' ಸಮಾಧಾನ ಪಡಿಸಲು ಪ್ರಯತ್ನಿಸಿದೆ.

'ಹಾಗಲ್ಲ ಹೆಗಡೆ. ಈಗ ನೋಡು ನನಗೆ ಅರ್ಜೆಂಟ್ ೨೦೦೦ ರೂಪಾಯಿ ಬೇಕಾಗಿದೆ. ರಮೇಶನಲ್ಲಿ ಹೋದರೆ ದುಡ್ಡು ಕೊಡುವದಿರಲಿ, ಬಾಯಿಗೆ ಬಂದ ಹಾಗೆ ಮಾತಾಡಿಯಾನು. ನಿನ್ನಲ್ಲಿ ಕೇಳಿದರೆ ಇಲ್ಲ ಎನ್ನಲಿಕ್ಕಿಲ್ಲ ಎನ್ನುವ ಧೈರ್ಯ ನನಗೆ. ಕೊನೆಯ ಪಕ್ಷ ಒಳ್ಳೆಯ ಮಾತನ್ನಾದರೂ ಆಡುತ್ತೀಯಲ್ಲವೇ ನೀನು?' ಅತ್ಯಂತ ವಿನೀತನಾಗಿ ಹೇಳಿದ.

ಒಳಗೆ ಹೋಗಿ ಐನೂರರ ನಾಲ್ಕು ನೋಟುಗಳನ್ನು ತಂದು ಸುಧಾಕರನಿಗೆ ಕೊಟ್ಟೆ. ಒಂದು ವಾರದಲ್ಲಿ ತಿರುಗಿ ಕೊಡುವದಾಗಿ ಹೇಳಿ ಜಾಗ ಖಾಲಿ ಮಾಡಿದ.

'ಹೊಗಳಿಕೆಯ ಹೊನ್ನಶೂಲ' ಒಳಗಿನಿಂದ ಮಾತು ಕೇಳಿಸಿತು.

*****

ಏನೆಂದು ಕರೆಯಲಿ ನಿನ್ನ

- ನಾಗರತ್ನ ಚಂದ್ರಶೇಖರ

ಏನೆಂದು ಕರೆಯಲಿ ನಿನ್ನ? ಅಮ್ಮ, ಗೆಳತಿ, ಗೆಳೆಯ, ಅಕ್ಕ, ಅಜ್ಜಿ, ಗಂಡ. ಉಹುಃ ನೀನು ಇವರ್ಯಾರೂ ಅಲ್ಲ. ನೀನು ಇವರೆಲ್ಲರಿಗಿಂತ ಬೇರೆಯೇ ಆದರೂ ಇವರೆಲ್ಲರ ಗುಣಗಳು ನಿನ್ನಲ್ಲಿವೆ. ನಿನ್ನ ಮಡಿಲಲ್ಲಿ ನಾನು ಸುಖವಾಗಿ ಬೆಚ್ಚಗೆ ಮಲಗಿದ್ದ ಕಾಲವೆಲ್ಲ ನೀನು ಅಮ್ಮನಾಗಿಯೇ ಇದ್ದೆ. ನಾನು ನೋವಿನಿಂದ ನರಳುವಾಗ ನಿನ್ನ ಹಿತವಾದ ಸ್ಪರ್ಶ ಅಜ್ಜಿಯದಾಗುತ್ತದೆ. ನಕ್ಕು ಹೊರಳಾಡುವಾಗ, ಕನಸುಗಳನ್ನು ಮೆಲಕು ಹಾಕುವಾಗ ಗೆಳತಿಯಾಗುವೆ. ಬಯಕೆಗಳು ಕೆರಳಿದಾಗ, ಕತ್ತಲೆಯ ಕೋಟೆಯೊಳಗೆ ಬೆತ್ತಲೆಯಾಗುವ ಮೈಮನಸ್ಸುಗಳಿಗೆ ಸಂಗಾತಿಯಾಗಿ ಸುಖದ ಸುಪ್ಪತ್ತಿಗೆಯಾಗುವೆ. ವಿರಹದಲಿ ಬೇಯುವಾಗ ಬೆಳದಿಂಗಲು ಬೇಗುದಿಯಾಗುವಾಗ, ಮುಡಿದ ಮಲ್ಲಿಗೆಯೂ ಮುಳ್ಳಾಗಿ ಚುಚ್ಚುವಾಗಲೆಲ್ಲಾ, ರಾತ್ರಿಗಳು ಮುಗಿಯುವುದೇ ಇಲ್ಲವಲ್ಲ ಎಂದು ರೋಧಿಸುವಾಗಲೆಲ್ಲ ನೀನು ನನ್ನ ಶತ್ರುವಾಗಿ ಬಿಡುವೆ.

ನನ್ನ ದಿನದ ಅರ್ಧ ಭಾಗವನ್ನು ನೀನು ನುಂಗಿ ಹಾಕಿ ಬಿಡುವೆಯಾದರೂ ನೀನಿಲ್ಲದೆ ನಾನು ಬದುಕಿರಲಾರೆ. ದುಡಿದು ದಣಿದ ಮೈಮನಸ್ಸುಗಳು ನಿನ್ನಲ್ಲಿ ಒಂದಾಗಲು ಹಾತೊರೆಯುತ್ತವೆ. ನಿನ್ನ ಚಾಚಿದ ಆ ವಿಶಾಲ ಎದೆಯೊಳಗೆ ಹುದುಗಿ ಕಣ್ಮುಚ್ಚಿದಾಗ, ದೇಹ ಹಗುರಾಗಿ ಕನಸಿನ ಲೋಕಕ್ಕೆ ಮನಸ್ಸು ಹಕ್ಕಿಯಾಗಿ ಹಾರಿ ಹೋಗುತ್ತದೆ. ನಿನ್ನೊಳಗೇ ಸ್ವರ್ಗ, ನರಕ, ಹುಟ್ಟು, ಸಾವುಗಳನ್ನು ಸೃಷ್ಟಿಸಿಕೊಳ್ಳಬಲ್ಲ ನಾವು ನಿನ್ನ ಸಹನಾ ಶಕ್ತಿಗೆ ತಲೆಬಾಗಲೇಬೇಕು. ಅದೆಷ್ಟು ಕಥೆಗಳು. ವ್ಯಥೆಗಳು ನಿನ್ನೊಳಗೆ ಅಡಗಿಕೊಂಡಿವೆ. ನಿನಗೆ ಬಾಯಿ ಇದ್ದಿದ್ದರೆ ಆ ಜೀವಂತ ಕಥೆಗಳಿಗೆ ಅದೆಷ್ಟು ಪ್ರಶಸ್ತಿಗಳು ಸಿಗುತ್ತಿದ್ದವೊ? ನಿನ್ನ ಮೈ ಮಲಿನವಾಗಬಾರದೆಂದು ಅದೆಷ್ಟು ಎಚ್ಚರ ವಹಿಸುತ್ತಿದ್ದೆ. ನಿನಗೆ ಗೊತ್ತಾ! ನನ್ನ ಪುಟ್ಟ ಮಕ್ಕಳು ಒಂದು ದಿನಕ್ಕೂ ನಿನ್ನ ಮೇಲೆ ಮೂತ್ರ ವಿಸರ್ಜಿಸದಂತೆ ಕಾಳಜಿ ವಹಿಸಿದ್ದೆ. ನೀ ಯಾವಾಗಲೂ ಶುಭ್ರ, ಸ್ವಚ್ಛವಾಗಿಯೇ ಇರುವಂತೆ ನಾ ನೋಡಿಕೊಳ್ಳುವೆ, ನನ್ನ ಉಸಿರಿರುವ ತನಕ. ಹಗಲು ಕನಸುಗಳಿಗೆ ಹೆಗಲು ಕೊಟ್ಟು ರಾತ್ರಿಗಳ ರೋಮಾಂಚನಗಳಿಗೆ ಸಾಥಿಯಾಗುವ ಶಕ್ತಿ ನಿನಗುಂಟು. ತಪ್ತ ಹೃದಯಗಳ ತಟ್ಟಿ ಮಲಗಿಸಬಲ್ಲ ಸಹನೆ ನಿನಗಿದೆಯೆಂದೇ ನನ್ನ ನಿದ್ದೆ ಬಾರದ ರಾತ್ರಿಗಳನ್ನು ನಿನ್ನೊಡನೆ ಹಂಚಿಕೊಳ್ಳಲು ಓಡೋಡಿ ಬರುವೆ. ನಲ್ಲ ನಲ್ಲೆಯರ ಪಿಸುಮಾತುಗಳಿಗೆ ಕಿವಿಯಾಗುವ, ದಾಂಪತ್ಯದ ಸಖೀ ಗೀತೆಗಳ ಧ್ವನಿಯಾಗುವ, ವಿರಹಿಗಳ ಮೂಕ ವೇದನೆಗಳಿಗೆ ಮುಳ್ಳಾಗುವ ಈ ನಿನ್ನ ಬಗೆ ಬಗೆಯ ರೂಪಗಳಿಗೆ ನಾನು ಶರಣಾಗುವೆ.

ಸ್ಮಶಾನದಲ್ಲೇ ಮಲಗಿದರೂ ನಿದ್ರೆ ಮಾಡಬಲ್ಲ ಶಿವನಿಗೆ, ಹಾವನ್ನೇ ಹೂವಿನ ಹಾಸಿಗೆಯೆನ್ನುವ ಆ ವಿಷ್ಣುವಿಗೂ ಒಮ್ಮೆ ಈ ಭೂಲೋಕದ ಸುಪ್ಪತ್ತಿಗೆಯ ಮೇಲೆ ಮಲಗಬೇಕೆಂಬ ಆಸೆ ಹುಟ್ಟಿದರೆ ಹೇಗಿದ್ದೀತು? ಮಾಗಿಯ ಚಳಿಯಲ್ಲಿ ಮೈ ಮುಚ್ಚುವಷ್ಟು ಬಟ್ಟೆಗೇ ಗತಿಯಿಲ್ಲದ ಅದೆಷ್ಟು ಕೋಟಿ ಕೋಟಿ ಜನ ಬಸ್ಸು, ರೈಲು ನಿಲ್ದಾಣಗಳಲ್ಲೊ, ಪಾಳುಬಿದ್ದ ಪಡಸಾಲೆಗಳಲ್ಲೊ ಆಕಾಶವನ್ನೇ ಹೊದ್ದು ಭೂತಾಯಿಯನ್ನೇ ಹಾಸಿಕೊಂಡು ಮಲಗುತ್ತಾರಲ್ಲ, ಅವರಿಗೆಲ್ಲಾ ಸುಖ

ನಿದ್ರೆ ಅದೆಷ್ಟು ಬೇಗ ಬರಬಹುದು ಎಂದು ನಾನು ಊಹಿಸಲಾರೆ. ತುಪ್ಪಳದ ಮೃದುವಾದ ಬೆಚ್ಚನೆಯ ಹಂಸತೂಲಿಕಾತಲ್ಪದಂತಹ ಹಾಸಿಗೆಯಿದ್ದರೂ ನಿದ್ರೆಬಾರದೆ ಹೊರಳಾಡುವ ಜನರಿಗೂ ನೀನು ಕೆಲವೊಮ್ಮೆ ಸವಾಲಾಗುವೆ. ಬದುಕಿನ ಅರ್ಧಭಾಗ ನಿನ್ನೊಂದಿಗೇ ಕಳೆದರೂ ನಿನ್ನ ಅದೇ ಗಾಢ ಮೌನ ನನಗಿನ್ನೂ ಅರ್ಥವಾಗಿಲ್ಲ. ಸಖೀ! ಆಹಾ.. ನಿನ್ನನ್ನು ಸಖೀ ಎಂದೊಡನೆ ತೇಲಿಬರುವ ಮಧುರ ನೆನಪುಗಳಲ್ಲಿ ತೇಲಿ ಹೋಗುವವರೆಷ್ಟು ಜನ. ವಿರಹದ ಬೇಗೆಯಲ್ಲಿ ಬೆಂದು, ಬಸವಳಿದು ಹೊರಳಾಡಿದ ಕಹಿ ಕ್ಷಣಗಳನ್ನು ಮರೆಯಲೆತ್ನಿಸುವವರದೆಷ್ಟು ಜನ!

ದೇಶ, ವಿದೇಶಗಳ ಆಕರ್ಷಕ, ಆಹ್ಲಾದಕರ ಸುಂದರ ಸಂಪರ್ಕದಲ್ಲೂ ದುಬಾರಿ ಬೆಲೆ ತೆರಬೇಕಾದ ಸಂಕಟವಿಲ್ಲದಿದ್ದರೆ ಮಾತ್ರ ಖರ್ಚು ಮಾಡಿದ ಹಣಕ್ಕೆ ತೃಪ್ತಿಯಷ್ಟೇ ಸಿಗಬಹುದು, ಅಷ್ಟೆ. ಮತ್ತೆ ಮರಳಿ ಸ್ವಂತಿಕೆಯ ಸುಖಕ್ಕೇ ಜೋತು ಬೀಳದಿದ್ದರೆ ನೋಡಿ! ತಾಯಿ-ಮಕ್ಕಳು, ಗಂಡ-ಹೆಂಡತಿ ಇವರೆಲ್ಲರನ್ನು ಬಾಡಿಗೆಗೆ ಪಡೆಯುವ ಮೂರ್ಖತನ ಮಾಡಬಾರದು. ನಿನ್ನ ತೊಡೆಯ ತೊಟ್ಟಿಲಲ್ಲಿ ಮಲಗಿ ಬೆಳೆದು ಮಕ್ಕಳಿಂದು ಬೆಳದು ದೊಡ್ಡವರಾದ ಮೇಲೆ ಪ್ರಪಂಚದಲ್ಲೇ ಉತ್ಕೃಷ್ಟವೆಂದು ಬಿಕರಿಯಾಗುವ ಹಾಸುಗಳನ್ನು ಖರೀದಿಸಿ ಸುಖ ನಿದ್ರೆ ಮಾಡಬಹುದೆಂದು ಭ್ರಮಿಸುತ್ತಾರೆ. ನಾಳೆಯ ಚಿಂತೆಗಳಿಲ್ಲದೆ ಗೋಣಿತಾಟಿನ ಮೇಲೆ, ಅರೆಹೊಟ್ಟೆಯಲ್ಲೇ ನಕ್ಷತ್ರಗಳನ್ನೆಣಿಸುತ್ತಾ ಮಲಗುವ ಕೋಟಿಗಟ್ಟಲೆ ಜನರಿಗೂ ನೀನು ಎಲ್ಲರಿಗಿಂತ ಹೆಚ್ಚಿನ ಸುಖ, ಸಂತೋಷಗಳನ್ನೇಕೆ ಕೊಡುತ್ತೀಯಾ ಎಂದು ಯಾರೂ ನಿನ್ನನ್ನು ಪ್ರಶ್ನಿಸಲಾರರು, ದೂರಲಾರರು ಅಲ್ಲವೆ?

ನಿನ್ನನ್ನು ಸಖೀ ಎಂದೊಡನೆ ತೇಲಿಬರುವ ಮಧುರ ನೆನಪುಗಳಲ್ಲಿ ಮುಳುಗಿಹೋಗುವ ನಾನು, ಸಖನಿಲ್ಲದೆ ಒಂಟಿಯಾಗಿ ಹೊರಳಾಡಿದ ಸಂಕಟದ ನೀರವ ರಾತ್ರಿಗಳನ್ನಾದರೂ ಮರೆಯಲು ಸಾಧ್ಯವಾದೀತೆ? ನನ್ನೊಡನೆ ನಿನ್ನನ್ನು ಹಂಚಿಕೊಳ್ಳುವ ಹಕ್ಕು ಪಡೆದ ನನ್ನ ಜೀವನ ಸಂಗಾತಿಗಾಗಲೀ, ನಿನ್ನ ಮಡಿಲಲ್ಲಿ ಬೆಚ್ಚಗೆ ಮಲಗಿ ನಿದ್ರಿಸಿದ ನನ್ನ ಪುಟ್ಟ ಮಕ್ಕಳಿಗಾಗಲೀ ನಿನ್ನ ಮೇಲೆ ನನ್ನಷ್ಟು ಮೋಹ ಇಲ್ಲದಿದ್ದರೇನು? ನೀನು ಸಂಪೂರ್ಣ ನನ್ನ ಆಸ್ತಿ.

ನನಗೆ ಈಗಲೂ ನೆನಪಿದೆ, ನನ್ನ ಮದುವೆಯ ತಯಾರಿ ನಡೆಯುತ್ತಿದ್ದ ದಿನಗಳವು. ನಮ್ಮೂರಿನ ಸಲೀಂನ ಅಂಗಡಿಯಲ್ಲಿ ವಿಶೇಷವಾಗಿ ತಯಾರಿಸಿದ್ದ ಬಣ್ಣ ಬಣ್ಣದ ಹೂಗಳಿದ್ದ ಹೊದಿಕೆಯೊಳಗೆ ಮೃದುವಾದ ಮೈಚಾಚಿ ಮಲಗಿದ್ದ ನೀನು ನಮ್ಮ ಪ್ರಥಮ ರಾತ್ರಿಗಾಗಿ ಸಡಗರದಿಂದ ಶೃಂಗರಿಸಿಕೊಂಡು ಸಜ್ಜೆ ಕೋಣೆಯಲ್ಲಿ ನಮಗಿಂತ ಮೊದಲೇ ಪ್ರವೇಶಿಸಿ ಕಾದು ಕುಳಿತಿದ್ದೆ. ನಿನ್ನನ್ನು ಕಂಡ ಆ ಕ್ಷಣವೇ ನನ್ನ ಅಂತರಂಗದೊಳಗೆ ಪ್ರವೇಶಿಸಿಬಿಟ್ಟೆ. ಅಂದಿನಿಂದಲೂ ನನ್ನ ಸೋಲು, ಗೆಲವುಗಳ ರಹಸ್ಯಗಳೆಲ್ಲಾ ನಿನ್ನೊಳಗೆ ಬಚ್ಚಿಟ್ಟುಕೊಳ್ಳತೊಡಗಿದೆ ಅಲ್ಲವೆ? ಪ್ರೀತಿ, ಪ್ರಣಯ, ಕೋಪ, ತಾಪ, ನೋವು, ಸಂಕಟಗಳ ಧ್ವನಿಮುದ್ರಿಕೆ ನೀನು.

ಆದರೆ ಇದೇನಾಗುತ್ತಿದೆ? ನಿನ್ನನ್ನು ಹೊರಗೆ ಹಾಕುವ ಹುನ್ನಾರ ಮನೆಯಲ್ಲಿ ನಡೆದಿದೆ. ನಿನಗೆ ವಯಸ್ಸಾಯಿತಂತೆ! ನನಗೂ ಆಯಿತಲ್ಲವೇ! ನಿನಗಿಂತ ಸುಂದರ, ಸುಖಮಯವಾದ, ಆಕರ್ಷಕವಾದದ್ದು ಮಾರುಕಟ್ಟೆಯಲ್ಲಿದೆಯಂತೆ!

ಕಾಲದ ಪ್ರವಾಹದಲ್ಲಿ ಎಲ್ಲವೂ ಬದಲಾಗುವ ನಿಯಮದಂತೆ ಎಂದು ಬಾಯಿ ಮುಚ್ಚಿಸುತ್ತಾರೆ, ಮಕ್ಕಳು! ಸದ್ಯ ನನ್ನನ್ನು ಬದಲಾಯಿಸುವ ಧೈರ್ಯವಿಲ್ಲ ಅವರಿಗೆ. ನೀನು ಇದುವರೆಗೂ ನೀಡಿದ ಸೇವೆಗೆ, ಸುಖಕ್ಕೆ ಯಾರು ಬೆಲೆ ಕಟ್ಟಬಲ್ಲರು? ನಿನಗೆ ವಿದಾಯ ಹೇಳಲು ನನಗೆ ಹೇಗೆ ಸಾಧ್ಯ ಹೇಳು? ಹಗಲು ರಾತ್ರಿಗಳ ವ್ಯತ್ಯಾಸವಿಲ್ಲದೆ ತೆರೆದ ಹೃದಯದಿಂದ ಬೇಸರವಿಲ್ಲದೆ ನಿನ್ನ ಬಳಿ ಬಂದಾಗಲೆಲ್ಲಾ ಅಪ್ಪಿಕೊಳ್ಳುತ್ತಿದ್ದ ಮಾತೃ ಹೃದಯಿಯಾದ ನಿನ್ನನ್ನು ಅಗಲುವ ಘಳಿಗೆ, ನಾನು ತೌರ ತೊರೆದು ಪತಿಗೃಹಕ್ಕೆ ಬರುವಾಗ ನನ್ನಮ್ಮನಿಗಾಗಿರುಬಹುದಾದ ನೋವಿನಷ್ಟೇ ಆಗುತ್ತಿದೆ ಎಂದು ನಿನಗೆ ಗೊತ್ತೇ? ಹೇಳು, ನಿನಗೆ ವಿದಾಯ ಹೇಳುವ ಮುನ್ನ ನಿನಗೊಂದು ಅನ್ವರ್ಥನಾಮಕ್ಕಾಗಿ ಹುಡುಕುತ್ತಿರುವೆ! ಏನೆಂದು ಕರೆಯಲಿ ನಿನ್ನ?

*****

ಹಾರೈಕೆ

– ಹುವಾಶ್ರೀ

ಮೊಮ್ಮಗಳಗೀಗ ವರುಷ ಆರು
ಆಗಿದ್ದಾಳಾಕೆ ಬಹಳ ಜೋರು
ಮಾಡುವಳು ತಂಟೆ ತಕರಾರು
ಅಳುತಾಳೆ ಬೈದರೊಂಚೂರು

ಅಪ್ಪನಂತೆ ಜಾಣೆ ಓದೋದ್ರಲ್ಲಿ
ಅಮ್ಮನಂತೆಯೇ ಮಾತಿನಮಲ್ಲಿ
ಸದಾ ಮುಂದೆ ಆಟೋಟದಲ್ಲಿ
ನಗವಳು ಸುತ್ತೆಲ್ಲ ಹರುಷ ಚೆಲ್ಲಿ

ಲೋಕದ ತುಂಬ ಕರೋನಾ ಕಾಟ
ಅವಳಗೀಗ ಮನೆಯಲ್ಲೇ ಪಾಠ
ತಪ್ಪಿಹೋಯ್ತು ಮಕ್ಕಳೊಡನಾಟ
ದಿನಾ ಬರೀ ಚಿತ್ರಪರದೆಯ ನೋಟ

ಹೊಸ ವರುಷದೊಳಾನಂದವಿರಲಿ
ಮಕ್ಕಳೊಡಗೂಡಿ ಕಲಿತಾಡುತಿರಲಿ
ಜಗದೊಳಗೆ ಹರುಷ ತುಂಬಿ ಬರಲಿ
ಲೋಕದಲಿ ಗೆಲುವು ಮರಳಿ ಬರಲಿ

*****

ಲಘು ಹರಟೆ

ಕರೆಯ ಮೇಲೆ . . .

- ಟಿ.ಎಸ್. ಶ್ರವಣಕುಮಾರಿ

ಎಲ್ಲರ ಕೈಗೂ ಒಂದೊಂದು ಚರವಾಣಿ ಬಂದಮೇಲೆ ಯಾರು ಯಾರನ್ನು ಯಾವಾಗ ಬೇಕಾದರೂ ಎಲ್ಲಿದ್ದರೂ ಸಂಪರ್ಕಿಸಲು ಸಾಧ್ಯವಿರುವುದರಿಂದ ಇಡೀ ಪ್ರಪಂಚವೇ ಈಗ ಕರೆಯ ಮೇಲೆ ಓಲಾಡುತ್ತಿದೆಯೆನ್ನಿ. ಕೆಲವು ಉಪಯುಕ್ತ ಕರೆಗಳೊಂದಿಗೆ ಹಲವು ಬೇಡದ ಕರೆಗಳು ಬರುವುದೂ ಎಲ್ಲರ ಅನುಭವಕ್ಕೆ ಬಂದೇ ಇದೆ. ಕೋಟ್ಯಾಂತರ ರೂಪಾಯಿಗಳ ಬಹುಮಾನ ಬಂದಿರುವ ಶುಭ ಸುದ್ಧಿಗಳು, ಲಕ್ಷಾಂತರ ರೂಪಾಯಿಗಳ ಸಾಲವನ್ನು ಯಾವುದೇ ರೇಜಿಗೆಯಿಲ್ಲದೆ ಕ್ಷಣಾರ್ಧದಲ್ಲಿ ನೀಡುವ ಕರೆಗಳಂತೂ ಸರ್ವೇ ಸಾಮಾನ್ಯ. ಇಂತಹ ಕರೆ ಮಾಡುವ ಮೂಲ ದೇವರಿಗೆ, ನಮಗೆ ತಿಳಿದಿರುವಂತೆ, ನಾವೆಲ್ಲೂ ನಮ್ಮ ಚರವಾಣಿ ಸಂಖ್ಯೆಯನ್ನು ನೀಡಿಲ್ಲದಿದ್ದರೂ, ಎಲ್ಲರ ಚರವಾಣಿಗಳ ಸಂಖ್ಯೆಗಳು ಹೇಗೆ ಸಿಕ್ಕಿರುತ್ತದೆಂಬುದು ಅದ್ಭುತ ಅಚ್ಚರಿಗಳಲ್ಲೊಂದು ಎಂದುಕೊಂಡಿದ್ದೇನೆ. ಎಷ್ಟು ಚೆನ್ನಾಗಿ ಪರಿಚಿತರಂತೆ ಆತ್ಮೀಯವಾಗಿ ನಮ್ಮ ಹೆಸರನ್ನು ಕರೆದು ಮಾತನಾಡಿಸುವ ಅವರ ಚಾಣಾಕ್ಷತೆ ನನ್ನಲ್ಲಿ ಬೆರಗು ಮೂಡಿಸಿದೆ. ಇಂತಹ ಒಂದೆರಡು ಅನುಭವಗಳನ್ನು ಇಂದು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಪ್ರಸಂಗ – ೧

ಕಾರಿನಲ್ಲಿ ಹೋಗುತ್ತಿರುವಾಗ ಇದ್ದಕ್ಕಿದ್ದಂತೆ ನನ್ನ ಮೊಬೈಲ್ ರಿಂಗಣಿಸಿತು. ಅಪರಿಚಿತ ಸಂಖ್ಯೆ. ನನ್ನ ಲೇಖನವನ್ನೋ ಇಲ್ಲವೇ ಕತೆಯನ್ನೋ ಓದಿ ಆನಂದಿಸಿದ ಓದುಗರ ಕರೆಯಿರಬೇಕೆಂಬ ಸಂಭ್ರಮದಿಂದಲೇ ತೆಗೆದುಕೊಂಡೆ ಎನ್ನಿ. ಆಗೀಗ ಇಂತಹ ಕರೆಗಳೂ ಬರುವುದೂ ಇದೆ. “ಹಲೋ, ಶ್ರವಣ ಕುಮಾರಿಯವರಾ” ಎಂದಿತು ಅತ್ತಲಿಂದ ಕೋಗಿಲೆಯ ಉಲಿ. “ಹಾ! ಹೌದು ಹೇಳಿ, ನೀವ್ಯಾರು ಅಂತ ತಿಳೀಲಿಲ್ಲ” ಎಂದೆ ಒಂದು ಗತ್ತಿನಲ್ಲಿ. “ನಾನು ಶಿವಾನಿ ಅಂತ, ಶ್ರೀ ಶ್ರೀ ಶ್ರೀ ಶಿವಾನಂದಜೀ ಆಶ್ರಮದಿಂದ” ಎಂದಳಾಕೆ. ನನ್ನ ಗತ್ತೆಲ್ಲಾ ಜರ್ರನೆ ಇಳಿದು “ಸರಿ” ಎಂದೆ. ಮುಂದೇನು ಎನ್ನುವಂತೆ “ನೋಡಿ, ನಮ್ಮ ಗುರು ಶ್ರೀ ಶ್ರೀ ಶ್ರೀ ಶ್ರೀ ಶಿವಾನಂದಜೀ ಗುರೂಜಿಯವರು. ನಿಮಗೆ ತಿಳಿದಿರಬೇಕಲ್ವಾ. ತುಂಬಾ ಫೇಮಸ್ಸು” ಅಂದಳು. “ಓ.. ಹಾಗಾ, ನನಗೆ ತಿಳಿದಿಲ್ಲ ಬಿಡಿ. ಅಂದ್ಹಾಗೆ ನಾಲ್ಕು ‘ಶ್ರೀ’ ಯಾಕೆ” ಕೇಳಿದೆ. “ಈಗಾಗ್ಲೇ ಒಬ್ರು ಮೂರು ಶ್ರೀ ಇಟ್ಟುಕೊಂಡಿರೋವ್ರು ಇದಾರಲ್ಲ, ಅದಕ್ಕೆ ನಮ್ಮ ಗುರೂಜಿ ನಾಲ್ಕು ಶ್ರೀ ಇಟ್ಕೊಂಡಿದಾರೆ” ಎಂದಳು. “ಓ... ಹಾಗಾ” ಎಂದ ತಕ್ಷಣ ನಾನೆಲ್ಲಿ ಕರೆಯನ್ನು ತುಂಡರಿಸುತ್ತೇನೋ ಎನ್ನುವ ಭಯಾತುರದಿಂದ ಆ ಕಡೆಯ ಧ್ವನಿ “ಸ್ವಲ್ಪ ಇರಿ ಮೇಡಂ, ನಾನಿನ್ನೂ ವಿಷಯಾನೇ ಹೇಳಿಲ್ಲ” ಎಂದಿತು. ಹೇಗೂ ಗಮ್ಯ ಸ್ಥಾನ ತಲುಪುವುದಕ್ಕೆ ಇನ್ನೂ ಹದಿನೈದು ಇಪ್ಪತ್ತು ನಿಮಿಷಗಳು ಬೇಕಿತ್ತು. ಟೈಮ್ ಪಾಸ್ ಆಗತ್ತೆ ಅಂದುಕೊಂಡು “ಹೇಳಿ ಏನು ವಿಷಯ?” ಎಂದೆ.

“ನೀವು ಅದೃಷ್ಟವಂತರು ಮತ್ತೆ ಪುಣ್ಯವಂತರು ಮೇಡಂ” ಅಂದಳು. ‘ಅರೇ ಇದ್ದಕ್ಕಿದ್ದ ಹಾಗೆ ನನಗ್ಯಾವ ಲಕ್ ಹೊಡೀತು?!’ ದಿಗ್ಭ್ರಮೆಯಾಗಿ “ಏನು ವಿಷಯ ಅಂತ ಸರಿಯಾಗಿ ಹೇಳಮ್ಮ” ಎಂದು ಕೇಳಿದೆ. “ನಮ್ಮ ಗುರೂಜಿ ಇಡೀ

ಕರ್ನಾಟಕದಲ್ಲಿ ನೂರು ಅದೃಷ್ಟಶಾಲಿಗಳನ್ನ ಆರಿಸಿದಾರೆ. ಅದ್ರಲ್ಲಿ ನೀವೂ ಒಬ್ರು" ಅಂದಳು. "ನನಗವ್ರು ಗೊತ್ತೇ ಇಲ್ವಲ್ಲ. ನನ್ನನ್ನ ಹೇಗೆ ಆರಿಸಿದ್ರು?" ಅಚ್ಚರಿಯಿಂದ ಕೇಳಿದೆ. "ಅವರು ಸಾಕ್ಷಾತ್ ದೇವ್ರೇ ಮೇಡಂ. ಅವ್ರಿಗೆ ಎಲ್ಲರ ಮೊಬೈಲ್ ನಂಬರ್ರೂ, ಹೆಸರೂ ಗೊತ್ತಿರತ್ತೆ" ಅಂದಳು. "ವಾರೇವ್ಹಾ! ಪರವಾಗಿಲ್ವೇ. ಪರಮ ಜ್ಞಾನಿಗಳು" ಎಂದೆ. "ಹೌದು ಮೇಡಂ. ನೋಡಿ ಅಂಥವ್ರು ನಿಮ್ಮ ಹೆಸ್ರನ್ನ ಆರಿಸಿದ್ದಾರೆ" ಎಂದಳು. "ಅದ್ಸರಿ. ಯಾವ್ದುಕ್ಕೆ ಆರಿಸಿರೋದು?" ಎಂದು ಮುಖ್ಯ ವಿಷಯಕ್ಕೆ ಬಂದೆ.

ಶ್ರೀ ಶ್ರೀ ಶ್ರೀ ಶ್ರೀ ಸ್ವಾಮಿಗಳ ಮಹಿಮೆ ಮತ್ತು ಪವಾಡಗಳ ಬಗ್ಗೆ ಒಂದಷ್ಟು ಹೊತ್ತು ಕೊರೆದು "ನಾವು ಆಶ್ರಮದಿಂದ ನಿಮಗೆ ಒಂದು ಲಿಂಗ, ಜಪಸರ ಮತ್ತು ರುದ್ರಾಕ್ಷಿ ಪೆಂಡೆಂಟ್ ಕಳ್ಸಿಕೊಡ್ತೀವಿ. ನೀವು ಆ ಶಿವಲಿಂಗವನ್ನು ದೇವರ ಗೂಡಲ್ಲಿಟ್ಟು, ಅದರ ಮುಂದೆ ಜಪಸರವನ್ನೂ, ರುದ್ರಾಕ್ಷಿಯ ಪೆಂಡೆಂಟನ್ನೂ ಇಟ್ಟು ಪೂಜೆ ಮಾಡಿ, ಆಮೇಲೆ ಜಪಸರ ಹಾಕ್ಕೊಂಡು ನಿಮ್ಮ ಕೊರಳಲ್ಲಿ ಸದಾ ಧರಿಸಿದ್ರೆ ನಿಮ್ಮ ಜೀವನಾನೇ ಬದ್ಲಾಗಿ ಹೋಗುತ್ತೆ. ಅಷ್ಟು ಪವರ್‌ಫುಲ್ ಅದು. ಶಿವ ಇನ್ನೇನೂ ಕೇಳಲ್ಲ. ನೀವು ದಿನಾ ಆ ಲಿಂಗಕ್ಕೆ ಐದು ನಮಸ್ಕಾರ ಮಾಡಿ 'ಓಂ ನಮಃ ಶಿವಾಯ' ಅಂತ ನೂರೆಂಟು ಸಲ, ಕಡೆಗೆ ಆಗದಿದ್ರೆ ಕನಿಷ್ಟ ಐದು ಸಲ ಹೇಳಿದ್ರೂ ಸಾಕು. ಬೇಕೂಂದ್ರೂ ಸಿಕ್ಕಲ್ಲ. ಅಂತಾದ್ರಲ್ಲಿ ನಿಮ್ಮನ್ನೇ ಹುಡುಕ್ಕೊಂಡು ಬಂದಿದೆ ಅದೃಷ್ಟ. ನಾವು ಕಳ್ಸಿದ್ರೆ ತೊಗೋತೀರಲ್ವಾ ಮೇಡಂ" ಎಂದಳು.

ಇನ್ನೊಂದು ಸ್ವಲ್ಪ ಮಜಾ ತೊಗೊಳೋಣ ಅನ್ನಿಸಿ "ಫ್ರೀಯಾಗಿ ತಾನೇ ಕಳಿಸ್ತಿದೀರಿ" ಎಂದು ಬಾಂಬ್ ಹಾಕಿದೆ. "ಅಯ್ಯಯ್ಯೋ! ಇಲ್ಲಾ ಮೇಡಂ. ಸ್ಫಟಿಕದ ಲಿಂಗ ಅದು. ಜಪಮಣಿ ಕೂಡಾ ಸ್ಫಟಿಕದ್ದೇ. ಪಂಚಮುಖಿ ರುದ್ರಾಕ್ಷಿ ಎಲ್ಲಾ ಸೇರಿ ಹತ್ತು ಸಾವಿರ ಆಗತ್ತೆ. ಆದ್ರೆ ನಿಮಗೋಸ್ಕರ ಅದನ್ನ ಐದು ಸಾವಿರಕ್ಕೆ ಕಳಿಸ್ತಿದೀವಿ" ಅಂದಳು. "ತಾಯೀ ಶಿವಾನಿ. ನಮ್ಮ ಮನೇಲಿರೋ ದೇವ್ರ ವಿಗ್ರಹಗಳ್ಗೇ ದಿನಕ್ಕೊಂದು ಹೂವಿಟ್ಟು, ಎಲ್ಲಕ್ಕೂ ಸೇರಿ ಒಂದು ನಮಸ್ಕಾರ ಹಾಕಿದ್ರೆ ಸಾಕಾಗಿದೆ. ಇನ್ನು ಹೊಸ ದೇವ್ರನ್ನ ಕರ್ಕೊಂಡುಬಂದು ಕೂರುಸ್ಕೊಳೋ ಅಷ್ಟು ಭಕ್ತಿಯಿಲ್ಲ ನಂಗೆ" ಅಂದೆ. "ದೇವ್ರು ತಾನಾಗಿ ಮನೆಗೆ ಬಂದ್ರೆ ಬೇಡಾಂತೀರಲ್ಲ. ನಿಮ್ಮನ್ನ ಶಿವ ನೋಡ್ಕೋತಾನೆ" ಎಂದಳು ಕೋಪದಿಂದ. "ಇಷ್ಟು ಕಾಲವೂ ಅವ್ನು ನನ್ನ ಚೆನ್ನಾಗೇ ನೋಡ್ಕೊಂಡಿದಾನೆ. ಮುಂದೂ ನೋಡ್ಕೋತಾನೆ. ಅದಕ್ಕೆ ನಿಮ್ಮ ಗುರುಗಳ ಶಿಫಾರಸ್ಸೇನೂ ಬೇಕಿಲ್ಲ ತಾಯಿ. ನಿನ್ನ ಮಾತನ್ನ ನಂಬೋವ್ರು ಹತ್ರ ನಿನ್ನ ವ್ಯಾಪಾರ ಮಾಡ್ಕೋ" ಎಂದ ತಕ್ಷಣ ಕರೆ ತುಂಡಾಯಿತು.

"ಮೊದ್ಲೇ ಬೇಡಾಂದೆ, ಅಷ್ಟೊಂದು ಮಾತು ಖರ್ಚು ಮಾಡ್ಬೇಕಿತ್ತಾ ಎಂದರು ಇವರು. "ನೋಡಿ ನಾವು ಹೋಗ್ಬೇಕಾಗಿರೋ ಜಾಗ ಬಂತು. ಹೊತ್ತು ಹೋಗಿದ್ದೇ ಗೊತ್ತಾಗ್ಲಿಲ್ಲ" ಅಂದೆ. "ಸರಿ ಸರಿ, ಅವ್ಳು ನಿನ್ನ ಚೆನ್ನಾಗಿ ಬೈಕೊಂಡಿರ್ತಾಳೆ" ಅಂದರು. "ಬೈಕೊಳ್ಳಿ ಬಿಡಿ, ನಾನೇನು ಅವ್ಳನ್ನ ಕರ್ದು ಮಾತಾಡ್ಸಿದ್ದಲ್ವಲ್ಲಾ. ಏನೇನು ಕತೆ ಕಟ್ತಾರೆ ಕೇಳೋವ್ರು ಒಬ್ರಿದ್ರೆ" ಎನ್ನುತ್ತಾ ಕಾರಿನಿಂದ ಕೆಳಗಿಳಿದೆ. ಮತ್ತೆ ಮೊಬೈಲ್ ರಿಂಗಣಿಸಿತು. ಅದೇ ನಂಬರ್. ತೆಗೆದುಕೊಂಡು "ಹೇಳಮ್ಮಾ ಶಿವಾನಿ. ಈಗ ಇನ್ಯಾವ ದೇವ್ರ ವ್ಯಾಪಾರ ಮಾಡ್ತಿದೀಯ?" ಅಂದೆ. "ಓ...ಮತ್ತೆ ನಿಮ್ಗೇ ಬಂತಾ. . ." ಎನ್ನುತ್ತಾ ಅಸಹನೆಯಿಂದ ಕುಕ್ಕಿದಳು. ನಾನು ಬಿದ್ದು ಬಿದ್ದು ನಕ್ಕೆ.

ಪ್ರಸಂಗ – ೨

ಅಪರೂಪಕ್ಕೆ ತಲ್ಲೀನಳಾಗಿ ಏನೋ ಬರೀತಿದ್ದೆ. ಪಕ್ಕದಲ್ಲಿದ್ದ ಮೊಬೈಲ್ ಕರೆ ಬಂದಿದೆಯೆಂದಿತು. ತಿಳಿದಿಲ್ಲದ ನಂಬರ್. ಮತ್ತೆ ಅದೇ ಆಸೆಯ ಖೆಡ್ಡಾ – ಅಭಿಮಾನಿಯಾಗಿದ್ರೆ… ಕರೆ ತೆಗೆದುಕೊಂಡೆ. “ಶ್ರವಣ ಕುಮಾರಿ ಮೇಡಮ್ಮೋರಲ್ಲವ್ರಾ ಮಾತಾಡ್ತಿರೋದು, ನಾನು ರಂಗನಾಥ ಅಂತ ಮೈಸೂರಿಂದ” ಎಂದಿತು ಆ ಕಡೆಯ ದನಿ. “ಯಾವ ರಂಗನಾಥ ಅಂತ ತಿಳೀಲಿಲ್ವೇ” ಎಂದೆ ಪ್ರಾಮಾಣಿಕವಾಗಿ. “ಓ… ನಾನು ವಿಸ್ವವಾಣೀಲಿ ನಿಮ್ಮ ಕತೆ ಪುಸ್ತಕ, ಅಮ್ಯಾಕೆ ಪ್ರವಾಸ ಕಥನ ಎರಡರ ಬಗ್ಗೇನೂ ಬಂದಿರೋ ರಿವ್ಯೂ ಓದ್ದೆ ಮೇಡಮ್ಮಾರೆ. ಭಾಳ ಖುಸ್ಯಾಯ್ತು. ನಾನು ಇಲ್ಲಿ ನಾಕೈದು ಪೇಪರ್ರಿಗೆ ಪುಸ್ತಕದ ವಿಮರ್ಸೆ ಬರೀತಿರ್ತಿನಿ. ಮಂಡ್ಯಾ ಪೇಪರ್ಗೂನೂವೆ ಬರೀತಿನಿ. ನಂಗೆ ನಿಂ ಪುಸ್ತ್ಕ ಕಳಿಸ್ತೀರಾ. ಓದಿ ಎಲ್ಲಾ ಪೇಪರ್ನಾಗೂ ಬರುದ್ಬಿಡ್ತಿನಿ. ಒಸುಬ್ರ ಬಗ್ಗೆ ಪ್ರಚಾರ ಮಾಡ್ಬೇಕು ಮೇಡಂ. ನಿಮ್ಮಂತೋರು ಮುಂದ್ ಬರ್ಬೇಕು” ಎಂದ ಆ ಅಭಿಮಾನಿ. ‘ಬರೀರಿ ಅಂತ ಪುಸ್ತಕ ಕಳ್ಸಿದ್ರೂ ಬರೆಯೋದಿರ್ಲಿ ಓದೋದೂ ಕಷ್ಟ ಅಂತಾದ್ರಲ್ಲಿ ತಾನಾಗೇ ಬರೀತೀನಿ’ ಅಂತಿದಾರಲ್ಲ ಎಂದು ಖುಷಿಯಾಗಿ “ನಿಮ್ಮ ವಿಳಾಸ ಕಳಿಸಿ ಸರ್. ಕಳಿಸ್ತೀನಿ” ಎಂದೆ. “ಒಂದೊಂದ್ನೂವೆ ಎಲ್ಡೋ, ಮೂರೂ ಪ್ರತಿ ಕಳಿಸ್ಬಿಡಿ. ನಮ್ಮ ಫ್ರೆಂಡ್ಸ್‌ಗಳ್ಗೂ ಕೊಟ್ಟು ಅವ್ರ ತಾವೂ ಬರಿಸ್ತೀನಿ” ಅಂದ ಮಹಾರಾಯ. “ಓ, ಇದ್ಯಾಕೋ ಪಾರ್ಟಿ ಸರಿ ಇಲ್ಲ’ ಅನ್ನಿಸಿ, “ನೋಡಿ ರಂಗನಾಥ್, ನನ್ನ ಹತ್ರ ಅಷ್ಟೊಂದು ಕಾಪಿ ಇಲ್ಲ; ಏನೋ ವಿಶ್ವಾಸದಲ್ಲಿ ಕೇಳಿದ್ರಿ, ಕಳಿಸ್ತೀನಿ ಅಂದ್ಬಿಟ್ಟೆ. ಕೇಳಿದ್ದಕ್ಕೆ ನಿಮ್ಗೆ ಒಂದೊಂದು ಕಾಪಿ ಕಳಿಸ್ತೀನಿ ಅಷ್ಟೇ. ನೀವು ಓದಿದ್ಮೇಲೆ ಅವ್ರಿಗೆ ಕೊಡಿ" ಎಂದೆ.

ವಿಳಾಸವೂ ಬಂತು. ಪುಸ್ತಕಗಳನ್ನೂ ಕಳಿಸಿದೆ. ಒಂದು ವಾರದ ನಂತರ ಕರೆ ಮಾಡಿ ಎರಡೂ ಪುಸ್ತಕಗಳನ್ನೂ ಯದ್ವಾತದ್ವಾ ಹೊಗಳಿದ. ನನಗೂ ಸ್ವಲ್ಪ ಜಂಭ ಬರುವ ಹಾಗೆ ಮಾತಾಡಿದ. “ವಿಮರ್ಶೆ ಕಳಿಸಿದ್ರಾ?" ಅಂತ ಕೇಳಿದೆ. “ಈಗ ಕೊರೋನಾ ಟೇಮಲ್ಲವ್ರಾ. ಎಲ್ಲಾ ಪೇಪರವ್ರೂ ಕಮ್ಮಿ ಪುಟ ಮಾಡ್ಬುಟ್ಟವ್ರೆ. ಅಂಗಾಗಿ ಪುಸ್ತಕ ವಿಮರ್ಸೆ ಆಕಾಕಾಗಲ್ಲ ಅಂದವ್ರೆ. ಸ್ವಲ್ಪ ದಿನ ಕಳೀಲಿ. ಅವ್ರು ಮತ್ತೆ ಪುಟ ಎಚ್ಮಾಡ್ದಾಗ ಆಕುಸ್ತೀನಿ. ಮಂಡ್ಯಾ ಪೇಪರ್ಗೂ ಕಳ್ಸಿವ್ನಿ. ಅವ್ರು ಆಕಿದ್ಮೇಲೆ ನಿಮ್ಗೆ ತಿಳಿಸ್ತೀನಿ” ಅಂದ.

ಮತ್ತೆ ಯಾವಾಗಲೋ ಇನ್ನೊಂದೆರಡು ತಿಂಗಳು ಬಿಟ್ಟು ಮತ್ತೆ ಕರೆ ಮಾಡಿದ. ಮತ್ತೊಂದಿಷ್ಟು ಹೊಗಳಿದ. “ಬಂತೇ ವಿಮರ್ಶೆ ಪೇಪರಿನಲ್ಲಿ?" ಕೇಳಿದೆ. “ಇಲ್ಲಾ ಮೇಡಮ್ಮೋರೆ ಇನ್ನೂ ಆಕಾಕಾಗಿಲ್ಲ. ಇನ್ಯಾವ್ದಾದ್ರೂ ಒಸಾ ಪುಸ್ತ್ಕ ಬರ್ದಿದೀರಾ?" ಎಂದು ಕೇಳಿದ. ಇಷ್ಟು ಹೊತ್ತಿಗೆ ಅವನ ಬಂಡವಾಳ ಅರ್ಥವಾಗಿದ್ದ ನಾನು “ಇಲ್ಲ, ಇನ್ಯಾವುದೂ ಬಂದಿಲ್ಲ" ಎಂದೆ. “ಔದ್ರಾ,, ಬರೀತಿರಿ ಮೇಡಂ. ನಿಮ್ಮಂಥೋವ್ರು ಬರೀತಿರ್ಬೇಕು” ಎಂದು ಒಂದಷ್ಟು ಅದೂ ಇದೂ ಮಾತಾಡಿದ. “ಮತ್ಯಾವಾಗಲಾದ್ರೂ ಮಾತಾಡೋಣ” ಎಂದು ಫೋನ್ ಕೆಳಗಿಟ್ಟೆ.

ಎಷ್ಟೋ ತಿಂಗಳುಗಳ ನಂತರ ಕಳೆದ ತಿಂಗಳು ಕರೆಮಾಡಿ “ನಾನು ರಂಗನಾಥ, ಗೆಪ್ತಿ ಐತ್ರಾ?" ಅಂದ. “ಜ್ಞಾಪ್ಕ ಇದೆ ಸರ್. ಚೆನ್ನಾಗಿದೀರಾ?" ಅಂದೆ. ತಪ್ಪಿಯೂ ವಿಮರ್ಶೆಯ ಬಗ್ಗೆ ಮಾತೆತ್ತಲಿಲ್ಲ. ಅವನೇ ಮಾತು ಮುಂದುವರೆಸುತ್ತಾ “ಮೇಡಮ್ಮೋರೆ ನಿಮ್ಮಿಂದ ಒಂದು ಸಣ್ಣ ಎಲ್ಪಾಗ್ಬೇಕಿತ್ತು” ಅಂದ. ಇನ್ಯಾವ ಹೊಸ ಪುರಾಣವೋ ಎಂದುಕೊಂಡು “ಏನ್

ಸಹಾಯ?" ಎಂದೆ ಮುಗುಮ್ಮಾಗಿ. "ನಿಮ್ಮಂಥೋರು ಖಂಡ್ತ ಎಲ್ಪ್ ಮಾಡ್ಬೇಕ್ರಾ. ನಾನು ಒಂದು ಎಂಭತ್ತು ಕವಿತೆಗಳ್ನ ಬರ್ದಿದೀನಿ. ಅದನ್ನ ಪಬ್ಲಿಸ್ ಮಾಡ್ಬಾಂತ. ನೀವೊಂದಿಷ್ಟು ದುಡ್ಡು ಸಆಯ ಮಾಡಿದ್ರೆ ಮಾಡ್ಬೈದು. ನಿಮ್ಮುಪ್ಕಾರ ಮರ್ಯಾಕಿಲ್ಲ" ಎಂದು ನನಗೇ ಗೊತ್ತಿಲ್ಲದ ನನ್ನ ಉಪಕಾರ ಬುದ್ಧಿಯನ್ನು ನನಗೆ ನಾಚಿಕೆ ಎನಿಸುವಷ್ಟು ಹೊಗಳಿದ. ಎಷ್ಟೂಂತ ಸುಳ್ಳನ್ನ ತಡ್ಕೊಳೋದು! ಮಧ್ಯದಲ್ಲೇ ಬಾಯಿ ಹಾಕಿ "ನೋಡಿ ರಂಗನಾಥ್ ಅವ್ರೇ. ನಮ್ಮನೆಯವ್ರು ಇಂಥದಕ್ಕೆಲ್ಲಾ ಒಪ್ಪಲ್ಲ. ಹಾಗಾಗಿ ನನ್ನಿಂದ ಈ ಸಹಾಯ ನಿರೀಕ್ಷೆ ಮಾಡ್ಬೇಡಿ. ನಿಮ್ಮ ಪುಸ್ತಕ ಪಬ್ಲಿಷ್ ಮಾಡಿ. ನಂಗೂ ಒಂದು ಕಾಪಿ ಕಳಿಸಿ. ನಾನೂ ಓದಿ ಯಾವ್ದಾದ್ರೂ ಪೇಪರಿಗೆ ಖಂಡಿತವಾಗ್ಲೂ ವಿಮರ್ಶೆ ಬರೀತೀನಿ" ಎಂದೆ. "ಔದ್ರಾ, ನೀವು ಸಆಯ ಮಾಡ್ತೀರೀಂತ ನಂಬ್ಕಂಡಿದ್ದೆ . . ." ಇನ್ನೂ ಏನು ಹೇಳುತ್ತಿದ್ದನೋ ಫೋನನ್ನು ಕೆಳಗಿಟ್ಟೆ. ಅಂದಿನಿಂದ ಆತನ ಫೋನ್ ಬಂದಿಲ್ಲ.

ನಿಮ್ಮಲ್ಲೂ ಯಾರಿಗಾದ್ರೂ ಇಂತಹ ಅನುಭವಗಳಾಗಿದ್ಯಾ? ನಿಮಗೆ ಅದ್ರಿಂದ ಖುಷಿಯಾಗಿದ್ಯಾ, ಬೇಜಾರಾಗಿದ್ಯಾ, ಸಿಟ್ಟು ಬಂದಿದ್ಯಾ. ನಾನೇನೋ ಇಂತಹವನ್ನೆಲ್ಲಾ ಮನರಂಜನೆಯಾಗಿ ತೆಗೆದುಕೊಳ್ತೀನಿ. ನೀವು??

*****

ನನ್ನ ದೇಹವೆಂಬ ಲೇಖನಿಯ ಶಾಯಿ

- ರಾಧಿಕಾ ವಿ ಗುಜ್ಜರ್

"ಜನವರಿಯ ಸಂಕಷ್ಟಹರ ಚತುರ್ಥಿ" ಒಂದು ತಿಥಿ ಎನ್ನುವುದನ್ನು ನಿಮ್ಮೆಲ್ಲರಂತೆ ನಾನೂ ಒಪ್ಪುತ್ತೇನೆ. ಆದರೆ ಇದೇ ತಿಥಿಯನ್ನು ಹೇಳಲು ಕಾರಣ, ಈ ಜನವರಿಗೆ ಅಮ್ಮ ತೀರಿಕೊಂಡು 13 ವರ್ಷಗಳಾಗುತ್ತವೆ. 2009ರಲ್ಲಿ ತೀರಿಕೊಂಡಾಗ ಆಕೆಗೆ ಕೇವಲ ಅರವತ್ತೆಂಟುವರೆ ವರ್ಷಗಳು.

ಅಂದಿನ ಕಾಲದಲ್ಲಿ ಬಿ.ಎಸ್ಸಿ ಹಾಗೂ ನಂತರ 1970ರಲ್ಲಿ ಶಿಕ್ಷಣ ತರಬೇತಿ ಮುಗಿಸಿದ ಆಕೆ ಸುದೀರ್ಘ 30 ವರ್ಷಗಳ ಕಾಲ ಅಧ್ಯಾಪಿಕಾ ವೃತ್ತಿಯನ್ನು ಪ್ರೀತಿಸಿ, ಬೋಧಿಸಿ ಮತ್ತೆ ಮತ್ತೆ ತಾನೂ ಹೊಸ ವಿಷಯಗಳನ್ನು ಕಲಿತು, ಸಾರ್ಥಕತೆ ಅನುಭವಿಸಿದಳು. ಅತ್ಯಂತ ಮಧುರ ಕಂಠದ ಒಡತಿಯಾದ ಆಕೆ ಹಾಡಿದ ದಾಸರಪದ, ಹಳೆಯ ಹಿಂದಿ ಚಿತ್ರಗೀತೆಗಳು, ಪೂಜಾ ಸಮಯದಲ್ಲಿ ಹಾಡುತ್ತಿದ್ದ ದೇವರ ಹಾಡುಗಳು, ಮರಾಠಿ ಹಾಗೂ ಹಿಂದಿ ಭಜನೆಗಳನ್ನು ಆಲಿಸಿದ ನಮ್ಮ ಬಾಲ್ಯ ಹಾಗೂ ಕಿಶೋರ ವಯಸ್ಸು ಧನ್ಯ. ಅಲ್ಲದೆ ತಾನು ಹಾಡುವ ಹಾಡುಗಳನ್ನು ಒಂದು ಪುಸ್ತಕದಲ್ಲಿ ಬರೆದು ಇಟ್ಟಿದ್ದಳು ಮತ್ತು ಈಗಲೂ ಆ ಪುಸ್ತಕ ಇದೆ. ಮನೆಯ ಎಲ್ಲಾ ದಿಂಬಿನ ಹೊದಿಕೆ, ಪರದೆ, ಮೇಜು ಹಾಸು, ಕರವಸ್ತ್ರಗಳಿಗೆ ಕಸೂತಿ ಕಡ್ಡಾಯ. ಪ್ರತೀ ಬಾರಿ ಹೆಣೆಯುವಾಗಲೂ ಒಂದು ಹೊಸ ನಮೂನೆ, ವಿನ್ಯಾಸ, ಚಿತ್ರಗಳ ಹುಡುಕಾಟ ಶುರುವಾಗುತ್ತಿತ್ತು. ದಾರಗಳು ಹಾಗೂ ಚಿತ್ರಕ್ಕೆ ಹೊಂದುವ ಇತರ ಮಣಿ, ಮಿಂಚಿನ ಟಿಕಳಿ, ಲೇಸ್ ಗಳ ಆಯ್ಕೆ ಅಂತಿಮ ಸುತ್ತಿನದು.

ಬಹುಶಃ ಆಗ ಅಮ್ಮನಿಗೆ 41-42 ವರ್ಷವಾಗಿತ್ತೇನೋ, ವಿಪರೀತ ಭಯ ತರಿಸುವಷ್ಟು ದಟ್ಟ, ಎರಡು ಬೆರಳು ಅಗಲದ ಸರ್ಪಸುತ್ತು ಸೊಂಟದ ಸುತ್ತ ಬಂದಿತ್ತು. ಸುಮಾರು 6 ತಿಂಗಳು ನೋವು, ಉರಿ ಅನುಭವಿಸಿ ಮೆತ್ತಗಾಗಿಬಿಟ್ಟಳು. ತದನಂತರ ಮತ್ತೆಂದೂ ಆಕೆ ಕೃತಕ ಎಳೆಯ ಸೀರೆಗಳನ್ನು ಧರಿಸಲಿಲ್ಲ. ಕೇವಲ ಹತ್ತಿ ಹಾಗೂ ರೇಷ್ಮೆ ಸೀರೆ ಉಡುತ್ತಿದ್ದಳು. ಹಾಗಾಗಿ ಆಕೆಯ ನಿಲುವಲ್ಲಿ, ವ್ಯಕ್ತಿತ್ವದಲ್ಲಿ, ಭಾವ-ಭಂಗಿಗಳಲ್ಲಿ ಒಂದು ಸಾತ್ವಿಕ ಕಳೆಯಿತ್ತು. ಅಪ್ಪಟ ಭಾರತೀಯ ಮಹಿಳಾ ಪ್ರತಿನಿಧಿಯಂತೆ ಕಾಣುತ್ತಿದ್ದಳು. ಆಕೆಯ ಸೌಂದರ್ಯ ಪ್ರಸಾಧನ ಎಂದರೆ, ಲಾಕ್ಟೋ ಕ್ಯಾಲಮೈನ್ ಲೋಷನ್ ಮತ್ತು ಐಟೆಕ್ಸ್ ಕುಂಕುಮ. ಒಂದು ದಿನವೂ ತಲೆಗೆ ಕ್ಲಿಪ್, ರಬ್ಬರ್ ಬ್ಯಾಂಡ್, ಟೇಪ್ ಸೋಕಿಸಲಿಲ್ಲ. ಕುಳಿತರೆ ನೆಲಕ್ಕೆ ತಾಕುತ್ತಿದ್ದ ಮುಡಿಯನ್ನು ಸಿಕ್ಕು ಬಿಡಿಸಿ, ಮಧ್ಯ ಬೈತಲೆ ಗೀರಿ, ಬಾಚಿ ತುರುಬು ಕಟ್ಟಿದರೆ ನನ್ನಮ್ಮ ತ್ರಿಭುವನ ಸುಂದರಿ. ಮೆಲು-ಮಿತ ಮಾತು, ಸ್ಮಿತವದನ, ತಿದ್ದಿದಂತಹ ಹುಬ್ಬುಗಳ ಕೆಳಗಿನ ಅಗಲ ಕಣ್ಣುಗಳ ಆಳ ನೋಟ, ಅತೀ ತೀಕ್ಷ್ಣಗ್ರಾಹಿ, "ಶಾಂತ" ಹೆಸರಿಗೆ ಒಪ್ಪುವಂತೆ ಶಾಂತಳು ಹಾಗೂ ಕೇವಲ ಒಂದು ಬೈಗುಳದ ಒಡತಿ !!! "ಕಮಂಗಿ......" ಎಂದರೆ ಆಯ್ತು, ಕೊನೆಯ ಮುಳ್ಳಿನ ಸಿಟ್ಟಾಗಿದ್ದಾಳೆ ಎಂದರ್ಥ. ಅದು ಆಕೆಯ ಮೊದಲ ಗದರಿಕೆ ಹಾಗೂ ಕೊನೆಯ ಬೈಗುಳ. ಧ್ವನಿಯ ಜೋರಲ್ಲಿ, ಸಿಟ್ಟಿನ ಮೀಟರ್ ಕಂಡುಹಿಡಿಯುತ್ತಿದ್ದೆವು.

ಸೀರೆ ಸೊಂಟಕ್ಕೆ ಸಿಕ್ಕಿಸಿ ಬಹಳ ಚೆನ್ನಾಗಿ ಚುರುಕಾಗಿ ಬ್ಯಾಡ್ಮಿಂಟನ್ ಆಡುತ್ತಿದ್ದಳು. ವೇಗದ ಶಾಟ್ ಎಂದೂ ಹೊಡೆಯುತ್ತಿರಲಿಲ್ಲ. ಎದುರು ಕೋರ್ಟ್ ನ ಖಾಲೀ ಮೂಲೆಗೆ ಕಾಕ್ ಹೊಡೆದು ಪಾಯಿಂಟ್ ಗಿಟ್ಟಿಸುತ್ತಿದ್ದಳು.

ಎಲ್ಲ ಋತುಮಾನದ ಹಣ್ಣುಗಳನ್ನು ನಮಗೆ ತರುತ್ತಿದ್ದಳು. ಬೇಲದಹಣ್ಣು, ನೇರಳೆಹಣ್ಣು, ದೋರ ಹುಣಸೇಕಾಯಿ, ಕಲ್ಲಂಗಡಿ, ಬೋರೆಹಣ್ಣು, ಮಾವಿನಹಣ್ಣು....ಮತ್ತೆಲ್ಲ ಸೇರಿಸಿಬಿಡಿ. ಆದರೆ ಕೆಂಪು ಹೊಟ್ಟೆಯ ಸೀಬೇಹಣ್ಣು ಆಕೆಯ ಪ್ರಿಯ ಆಯ್ಕೆ. ಚಿಕ್ಕ ಚಿಕ್ಕದಾಗಿ ಕಚ್ಚಿ ತಿನ್ನಲು ಗಿಣಿ ಮರಿಯಾಗುತ್ತಿದ್ದಳು.

ಮನೆಬಾಗಿಲಿಗೆ ಹಾಕುತ್ತಿದ್ದ ರಂಗೋಲಿ, ತೋರಣದಿಂದ ಹಿತ್ತಿಲ ಕೊನೆಯ ಬಟ್ಟೆ ಒಗೆಯುವ ಕಲ್ಲಿನವರೆಗೂ ಎಲ್ಲವೂ ಶಿಸ್ತು, ಓರಣ ಹಾಗೂ ಸದಾ ಸ್ವಚ್ಛ. ಹಿರಿಯರು, ತನ್ನ ಓರಗೆಯವರು, ಕಿರಿಯರು, ಮಕ್ಕಳು, ಮೊಮ್ಮಕ್ಕಳು ಎಲ್ಲರಲ್ಲೂ ಸ್ನೇಹ ಆಕೆಗೆ. ಎಲ್ಲರನ್ನೂ ಅವರವರ ಮನೋಭಾವ ಓದಿ ನಿಭಾಯಿಸುತ್ತಿದ್ದಳು. ನಾವು ಮಕ್ಕಳು ಎಂದೂ ಆಕೆಗೆ ಹೆದರಲಿಲ್ಲ, ಆಕೆ ಆಳಲೂ ಇಲ್ಲ. ಆಕೆಯ ನಡೆನುಡಿಯನ್ನು ಗೌರವಿಸಿ, ಪ್ರೀತಿಯನ್ನು ಸವಿದು, ಮಮತೆಯನ್ನು ಉಂಡುಟ್ಟು, ಶ್ರದ್ಧೆಗಳನ್ನು ಪಾಲಿಸಿ, ಶಿಸ್ತನ್ನು ರೂಢಿಸಿಕೊಂಡು, ಸಮಾನಾಂತರವನ್ನು ಕಾಯ್ದುಕೊಳ್ಳುತ್ತಲೇ ಆಕೆಯ ಸಮಕ್ಕೆ ಬೆಳೆದುಬಿಟ್ಟೆವು. ಯಾವ ವಯಸ್ಸಿನಲ್ಲೂ ಆಕೆ ನಮಗೆ ಹಿರಿಯಳಾಗಲಿಲ್ಲ ಮತ್ತು ನಾವು ಆಕೆಗೆ ಅವಲಂಬಿತರೆನಿಸಲಿಲ್ಲ.

ಇಂದಿಗೂ ಆಕೆ ಇಲ್ಲ ಎನಿಸುವುದಿಲ್ಲ. ಆಕೆಯನ್ನು ಅದೆಷ್ಟು ಪ್ರೀತಿಸಿದೆವೆಂದರೆ, ನಮ್ಮ ಜೊತೆಗಿದ್ದ ಆಕೆ ಕ್ರಮೇಣ ನಮ್ಮೊಳಗೆ ಹರಿದು ನಿಂತಿದ್ದಾಳೆ. ಆಕೆಯ ದೈಹಿಕ ಹಾಗೂ ಮಾನಸಿಕ ಗುಣಗಳು ಈಗ ತಾವೇ ತಾವಾಗಿ ನಮ್ಮಲ್ಲಿ ಹೊಮ್ಮಿವೆ. ನಮ್ಮ ಅರಿವಿಲ್ಲದೆಯೇ ನಾವು ಆಕೆಯನ್ನು ಹೋಲುತ್ತೇವೆ. ಆಕೆಯ ಅಂಶಗಳಾಗಿದ್ದೇವೆ. ಪ್ರತಿರೂಪ ಗಳಾಗಿದ್ದೇವೆ.

ನಮ್ಮ ದೇಹವೆಂಬ ಈ ಲೇಖನಿಗೆ ಆಕೆ -

ಶಾಯಿಯಾಗಿದ್ದಾಳೆ, ಆಯಿಯಾಗಿದ್ದಾಳೆ, ತಾಯಿಯಾಗಿದ್ದಾಳೆ.

*****

ನಾಟಕಕ್ಕೆ ನನ್ನ ನೋಟ

- ರೇಣುಕಾ ದೇಸಾಯಿ

ಎಸ್. ಎನ್. ಸೇತುರಾಮ್ ಅವರ ‘‘ಉಚ್ಛಿಷ್ಟ” ನಾಟಕಕ್ಕೆ ನನ್ನ ನೋಟ.

ಎಸ್. ಎನ್. ಸೇತುರಾಮ್ ಅವರ ನಾಟಕವಿರಲಿ, ಧಾರಾವಾಹಿ ಇರಲಿ, ತೀಕ್ಷಣ ಸಂಭಾಷಣೆ, ಚುರುಕು ಮುಟ್ಟಿಸುವ ಸಂದೇಶವಿರಲೇಬೇಕು. ಇದೇ ಭಾವದಿಂದ, ಅವರ ಈ ನಾಟಕ “ಉಚ್ಛಿಷ್ಟ” ದ ಮೊದಲ ಪ್ರಯೋಗ 14ನೇ ಡಿಸೆಂಬರ್ 2021ರಂದು ‘ರಂಗಶಂಕರ’ದಲ್ಲಿ ಇದೆ ಎನ್ನುವ ಸುದ್ದಿ ಗೊತ್ತಾದ ತಕ್ಷಣ ಟಿಕೆಟ್ ಕಾದಿರಿಸಿಕೊಂಡೆ, ಕೊನೆಘಳಿಗೆಯಲ್ಲಿ ಟಿಕೆಟ್ ಸಿಗದಿರುವ ಸಂಭವವೇ ಜಾಸ್ತಿ.

ನನ್ನ ಊಹೆ ಸರಿಯಾಗಿಯೇ ಇತ್ತು, ಎಲ್ಲರೂ ಕೆಲಸಕ್ಕೆ ಹೋಗುವ ದಿನವಾದರೂ, ಡಿಸೆಂಬರ್ 14, ಮಂಗಳವಾರ ರಾತ್ರಿ 7.30 ರ ಮೊದಲ ಪ್ರದರ್ಶನಕ್ಕೆ ‘ರಂಗಶಂಕರ ‘ದ ಮುಂದೆ “ನಾಟಕ ಗೃಹ ತುಂಬಿದೆ” ಎನ್ನುವ ಫಲಕ ನೇತಾಡುತಿತ್ತು!

ಸೇತುರಾಮ್ ಅವರ ನಾಟಕದಲ್ಲಿ ಎಂದಿನಂತೆ ಕೇವಲ ನಾಲ್ಕು ಪಾತ್ರ, ಅದರಲ್ಲೂ ಮೂರು ಪಾತ್ರ ಮಾತ್ರ ರಂಗಸಜ್ಜಿಕೆಯ ಮೇಲೆ ತುಂಬಾ ಹೊತ್ತು ಇದ್ದು, ನಾಲ್ಕನೇ ಪಾತ್ರ ಗೌರವ ಪಾತ್ರವೆಂದು ಹೇಳುವಷ್ಟು ಚಿಕ್ಕದಾಗಿ ಬಂದು ಹೋಗುತ್ತದೆ. ಆ ಪಾತ್ರಕ್ಕೆ ಸಿಕ್ಕ ಸಂಭಾಷಣೆ ನಾಲ್ಕೈದಾಗಿದ್ದರೂ ತೀಕ್ಷ್ಣತೆ, ಪ್ರಾಮುಖ್ಯತೆಗೆ ಇತರ ಪಾತ್ರಗಳಿಗಿಂತ ಕಡಿಮೆ ಏನೂ ಇರಲಿಲ್ಲ. ಯಾವ ಪಾತ್ರಕ್ಕೂ ಹೆಚ್ಚಿನ ವಸ್ತ್ರವಿನ್ಯಾಸವಿರಲಿಲ್ಲ. ವಿಭಿನ್ನ ಶೈಲಿಯ ಮೂರು ಕುಳಿತುಕೊಳ್ಳುವ ಆಸನ ಬಿಟ್ಟರೆ ಮತ್ಯಾವ ಹೆಚ್ಚಿನ ಪರಿಕರವಿರಲಿಲ್ಲ ರಂಗದಮೇಲೆ.

ವಿರಾಮವೂ ಇರದೇ ಒಂದೂವರೆ ತಾಸಿನ ನಾಟಕ ನಡೆಯುತ್ತಿದ್ದರೆ ಪ್ರೇಕ್ಷಕ ಬೇಸರಪಡಲಿಲ್ಲ. ಕಾರಣ ಸೇತುರಾಮ್ ಅವರು ತಮ್ಮ ನೋಟ ಚೆಲ್ಲಿದ್ದು ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಅಕ್ಷರ ಲೋಕದಲ್ಲಿ ತುಂಬಿರುವ ರಾಜಕೀಯ, ದೇಹಾಕರ್ಷಣೆಯಲ್ಲಿ ಹೆಣ್ಣು ಗಂಡುಗಳ ಚೆಲ್ಲಾಟ. ಒಬ್ಬ ಸಾರಸ್ವತ ಲೋಕದ ನಕ್ಷತ್ರ ನೀತಿಭ್ರಷ್ಟನಾದಾಗ, ಶೀಲಭ್ರಷ್ಟ ನಾದಾಗ ಅವನ ವಿಶ್ವಾಸದ ಪರಿಧಿಯಲ್ಲಿ ಬರುವವರು ಡಿಗ್ರಿಯ ಮೇಲೆ ಡಿಗ್ರಿ ಪಡೆಯಬಹುದು. ಇನ್ನು ಡಾಕ್ಟರೇಟ್ ಅಂತೂ ಶಿಕ್ಷಣದ ಉನ್ನತ ಡಿಗ್ರಿ, ಅದೇ ಮಾರಾಟಕ್ಕೆ ಇಟ್ಟ ಸರಕು. ಮಾರಾಟ ಬರೀ ದುಡ್ಡು ಕಾಸಿಗಲ್ಲ, ಇನ್ಯಾವದ್ಯಾವದಕ್ಕೋ.. ...

ಅನಕ್ಷರಸ್ಥ ಲೋಕದಲ್ಲಿ ಹೆಣ್ಣಿನ ಶೋಷಣೆ ಒಂದು ತೆರನಾದರೆ, ಅಕ್ಷರಸ್ಥ ಲೋಕದಲ್ಲಿ ಶೋಷಣೆಯ ಭಯಾನಕತೆಯನ್ನು ನಾಟಕದಲ್ಲಿ ಸೇತುರಾಮ್ ಅವರು ಸವಿವರವಾಗಿ ಚಿತ್ರಿಸಿದ್ದಾರೆ. ಪರಿಸ್ಥಿತಿಯ ಕೈಗೊಂಬೆ

ಜೀವನ, ಅದರಲ್ಲೂ ಈ ವಿಷಮ ಪರಿಸ್ಥಿಗಳು ಹೆಣ್ಣಿನ ಜೀವನದಲ್ಲಿ ಆಡುವ ಆಟ, ಅವಳ ಮನಸ್ಸಿನ ಒಳತೋಟಿಗಳನ್ನು ತಮ್ಮ ಎಂದಿನ ಶೈಲಿಯ ಸಂಭಾಷಣೆಯಲ್ಲಿ ಬಿಚ್ಚಿ ಬಿಚ್ಚಿ ಹರವಿದ್ದಾರೆ. ನಾಟಕದ ನೋಟ, ಅಲ್ಲಿ ಬರುವ ಸಂಘರ್ಷಕ್ಕೆ ಪಾತ್ರಗಳು ಆಡುವ ಜೀವನದ ಆಟ, ನೋಡುಗನಿಗೆ ಕ್ಲಿಷ್ಟ ಅನ್ನಿಸುತ್ತದೆ.

ಅನೈತಿಕ ಸಂಬಂಧದಿಂದ ಉಂಟಾಗುವ ಮುಂದಿನ ಪೀಳಿಗೆ ಅಥವಾ ಅನೈತಿಕ ಜೀವನ ನಡೆಸುತ್ತಿರುವವರ ಮುಂದಿನ ಪೀಳಿಗೆಯು ಯಾವ ರೀತಿಯ ನೋವು, ಅವಮಾನ, ದುಃಖ ಅನುಭವಿಸುತ್ತದೆ ಮತ್ತು ಆ ಜೀವ ಹೇಗೆ ಉಚ್ಛಿಷ್ಟ ಆಗುತ್ತದೆ ಎನ್ನುವ ಸಂದೇಶ ಅಥವಾ ನಾಟಕದ ಜೀವಾಳ ಜನರಿಗೆ ತಲುಪವಲ್ಲಿ ನೂರಕ್ಕೆ ನೂರು ಪ್ರತಿಶತ ಪಾಸಾಗುತ್ತದೆ. ಆದರೆ ನಾಟಕದಲ್ಲಿ ಬರುವ ನಾಲ್ಕೂ ಪಾತ್ರಗಳು ಪರಸ್ಪರರ ಬಗೆಗೆ ತಳೆವ ಭಾವನೆ, ಭಾವ ತುಂಬಾ ಕ್ರೂರ ಕಠೋರ ಅನ್ನಿಸುತ್ತದೆ. ಉದಾಹರಣೆಗೆ ಪ್ರೇಯಸಿ ಪಾತ್ರ ಪ್ರಿಯಕರನೆಡಗೆ, ಪ್ರಿಯಕರನ ಪಾತ್ರ ಪ್ರೇಯಸಿಯೆಡೆಗೆ, ತಾಯಿಯ ಪಾತ್ರ ಮಗಳ ಪಾತ್ರಕ್ಕೆ ಹಾಗೆಯೇ ಮಗಳು ತಾಯಿಯ ಬಗೆಗೆ ನಡೆಸುವ ವಿಮರ್ಶೆ ಮಾನವೀಯತೆಯ ಎಲ್ಲೆ ಮೀರಿದವೇನೋ ಎನ್ನುವ ದಿಗಿಲು ಪ್ರೇಕ್ಷಕರಿಗೆ ಬರುತ್ತದೆ. ಪ್ರೇಕ್ಷಕ ಒಂದು ವೇಳೆ ಸಹೃದಯಿ ಆಗಿದ್ದರೆ ಆಳವಾದ ನೋವು ಉಂಟಾಗುತ್ತದೆ.

ಅದೇ ನೋವು ನನಗೂ ಉಂಟಾದಾಗ, ನಾಟಕದ ನಂತರ ಕರ್ತೃ ಎಸ್. ಎನ್. ಸೇತುರಾಮ್ ಅವರನ್ನೇ ಕೇಳಲಾಗಿ, ನೀವು ಬರೆದ ನಾಟಕದ ವಸ್ತುನಿಷ್ಠತೆ ತೀರಾ ಕ್ರೂರ ಅನ್ನಿಸುವದಿಲ್ಲವೇ? ನೋಡುಗನ ಸಂವೇಧನೆ ಘಾಸಿ ಗೊಳ್ಳುವದಿಲ್ಲವೇ? ಎಂದಾಗ ಅವರಿಂದ ಇನ್ನೂ ಭಯಾನಕ ಸ್ಪಂದನೆ ಬಂದಿತು. "ಹೌದು ಅಲ್ಲಿರುವ ಕಟುಸತ್ಯ ಇದೇ ಆಗಿದೆ" ಎಂದರು ಅವರು.

ನಾನೂ ಬಿಡದ ತ್ರಿವಿಕ್ರಮನಂತೆ ಕೇಳಿಯೇ ಬಿಟ್ಟೆ. ನೋಡುಗನ ಮನಸ್ಸು ಶಿಕ್ಷಣ ಕ್ಷೇತ್ರದೆಡೆಗೆ, ಸಾರಸ್ವತ ಲೋಕದೆಡೆಗೆ ತುಚ್ಛವಾಗುತ್ತದೆ ಎಂದಾಗ, 'ನಾನೇನೂ ಮಾಡಲಾರೆ' ಎನ್ನುವ ಉತ್ತರವಾಗಿತ್ತು ಅವರದು.

*****

ಡಾ. ರಾಜಲಕ್ಷ್ಮಿ – ಕಿರು ಪರಿಚಯ

- ಎನ್.ವಿ.ರಘುರಾಂ

2014ರಲ್ಲಿ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ಬೆಂಗಳೂರಿನ ಹಲ್ಲಿನ ಡಾಕ್ಟರ್ ಒಬ್ಬರು ಕೊನೆಯ ಹಂತ ಪ್ರವೇಶ ಮಾಡಿದ್ದರು. ಆಗ ಅವರಿಗೆ ಕೇಳಿದ ಒಂದು ಪ್ರಶ್ನೆ - "ನಿಮಗೆ ಈ ಜೀವನದಲ್ಲಿ ಇನ್ನೊಂದು ಆಯ್ಕೆ ಸಿಕ್ಕಿದರೆ ಯಾರ ತರಹ ಜೀವನಮಾಡಲು ಬಯಸುತ್ತೀರಿ?" ಈ ಪ್ರಶ್ನೆಗೆ ಸ್ಪರ್ಧಿ ಹೇಳಿದ ಉತ್ತರ: "ನನಗೆ ಇನ್ನೊಮ್ಮೆ ಜೀವಿಸಲು ಅವಕಾಶ ಸಿಕ್ಕಿದರೆ ನಾನು ನನ್ನ ಜೀವನವನ್ನೇ ಮರು ಜೀವಿಸಲು ಪ್ರಯತ್ನಿಸುತ್ತೇನೆ. ನಾನು ಎಲ್ಲರಂತೆ ಸಾಮಾನ್ಯ



"ಮಿಸ್ ಪಾಪ್ಯುಲಾರಿಟಿ ವರ್ಲ್ಡ್ 2017 ಪ್ರಶಸ್ತಿಗೆ ಭಾಜನರಾದ ಡಾ. ರಾಜಲಕ್ಷ್ಮಿ

ಮನುಷ್ಯಳಾಗಿ ಇದ್ದಾಗ ಮಾಡಿದ ತಪ್ಪು ತಿದ್ದಿಕೊಂಡು, ಈ ದೇಶದಲ್ಲಿ ಇರುವ ವಿಶೇಷ ಚೇತನರ ಜೀವನವನ್ನು ಉತ್ತಮಪಡಿಸಲು ಪ್ರಯತ್ನ ಮಾಡುತ್ತೇನೆ". ಆ ಉತ್ತರಕ್ಕೆ ಸಭೆಯಲ್ಲಿದ್ದವರೆಲ್ಲಾ ಎದ್ದು ನಿಂತು ಚಪ್ಪಾಳೆ ತಟ್ಟಿದರು. ಆ ದಿನ "ಮಿಸ್ ವೀಲ್ ಚೇರ್ -2014" ಗೆದ್ದ ಸ್ಪರ್ಧಿ ಡಾ। ರಾಜಲಕ್ಷ್ಮಿ.

ಎಲ್ಲರಂತೆ ಸಾಮಾನ್ಯ ಮಗುವಾಗಿ ಹುಟ್ಟಿದ್ದರು ರಾಜಲಕ್ಷ್ಮಿ. ಇವರ ತಂದೆ ತಾಯಿ ಇಬ್ಬರೂ ಡಾಕ್ಟರ್. ಅವರು ಮನೆಯಲ್ಲೇ ರೋಗಿಗಳನ್ನು ನೋಡುತ್ತಿದ್ದರು. ಆಗ ಹುಷಾರಾದ ರೋಗಿಗಳು "ದೇವರು ಬಂದ ಹಾಗೆ ಬಂದು ನಮಗೆ ಸಹಾಯ ಮಾಡಿದರು" ಎಂದು ತನ್ನ ತಂದೆ ತಾಯಿಯ ಬಗ್ಗೆ ಹೇಳುವ ಮಾತುಗಳನ್ನು ಕೇಳಿ ತಾನೂ ಡಾಕ್ಟರ್ ಆಗಲು ಬಯಸಿದಳು. 2000ನೇ ವರ್ಷ ಹತ್ತನೇ ತರಗತಿಯನ್ನು ಡಿಸ್ಟಿಂಕ್ಷನ್ನಿನಲ್ಲಿ ಪಾಸು ಮಾಡಿದಳು. ಬರೀ ಪಾಠ ಮಾತ್ರವಲ್ಲದೆ ಜಿಲ್ಲಾ ಮಟ್ಟದ ಟೇಬಲ್ ಟೆನಿಸ್ ಆಟಗಾರ್ತಿಯಾಗಿದ್ದ ಆಕೆ ಭಾರತೀಯ ಮತ್ತು ಪಾಶ್ಚಿಮಾತ್ಯ ಶೈಲಿಯ ನೃತ್ಯದಲ್ಲಿ ತರಬೇತಿ ಪಡೆದಿದ್ದರು.



ಗಾಲಿಕುರ್ಚಿಯಲ್ಲಿ ಕುಳಿತೇ ತನ್ನ ರೋಗಿಗಳ ದಂತ ತಪಾಸಣೆ ನಡೆಸುತ್ತಿರುವ ಡಾ.ರಾಜಲಕ್ಷ್ಮಿ

ಪದವಿಪೂರ್ವ ಶಿಕ್ಷಣದ ನಂತರ ಬಿ.ಡಿ.ಎಸ್.ಗೆ ಸೇರಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನದಲ್ಲಿ ತೇರ್ಗಡೆ ಆದಾಗ, ಅವರ ಪ್ರೊಫೆಸರರ ಮಾತಿನಂತೆ 2007ರಲ್ಲಿ ಚೆನ್ನೈನಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನ ದಲ್ಲಿ ತಮ್ಮ ಸಂಶೋಧನಾ ಪ್ರಬಂಧವನ್ನು ಮಂಡಿಸಲು ಹೋಗುತ್ತಿದ್ದಾಗ ಭಾರೀ ಕಾರು ಅಪಘಾತಕ್ಕೆ ತುತ್ತಾದರು. ಆಗ ಅವರ ಬೆನ್ನುಹುರಿಗೆ ತೀವ್ರ ತೊಂದರೆಯುಂಟಾಗಿ ಅವರ ಎರಡೂ ಕಾಲುಗಳು ಸ್ವಾಧೀನ ಕಳೆದುಕೊಂಡವು. ಎರಡು ಆಪರೇಶನ್ ನಂತರ ಕೂಡ ಯಾವುದೇ ಗುಣ ಕಾಣಲಿಲ್ಲ. ಪ್ರಾರಂಭದಲ್ಲಿ ಚಕ್ರದ ಕುರ್ಚಿಯಲ್ಲಿ ಕೂರಲು ಮನಸ್ಸು ಒಪ್ಪಲಿಲ್ಲ. ಕೊನೆಗೆ "ಈ ಚಕ್ರದ ಕುರ್ಚಿ ಬಿಟ್ಟರೆ ಮುಂದೆ ತಾನು ಯಾರಿಗೂ ಉಪಯೋಗವಿಲ್ಲದೆ ಒಂದು ಮೂಲೆಯಲ್ಲಿ ಉಳಿಯ ಬೇಕಾಗುತ್ತದೆ" ಎಂದು ತಿಳಿದು ಅದನ್ನು ಒಪ್ಪಿಕೊಂಡರು. ಆ ಗಾಲಿ ಕುರ್ಚಿ ಮುಂದೆ ಅವರಿಗೆ ಒಳ್ಳೆಯ ಸ್ನೇಹಿತನೇ ಆಯಿತು. ನಂತರ ಅವರ ಜೀವನದ ದಿಕ್ಕನ್ನೇ ಬದಲಿಸಿತು.

ಅವರ ಮನೆಯಲ್ಲಿ ಎಲ್ಲರೂ ಅವರ ನೆರವಿಗೆ ನಿಂತರು. ಆದರೆ ಸುತ್ತಲಿನ ಸಮಾಜದ ಪ್ರತಿಕ್ರಿಯೆ ಅಷ್ಟೇನೂ ಚೆನ್ನಾಗಿರಲಿಲ್ಲ. "ಅಯ್ಯೋ ಪಾಪ, ಆಕ್ಸಿಡೆಂಟ್ ಅಂತೆ", ಈ ತರಹದ ಮಾತುಗಳನ್ನು ಹೇಳುವವರೇ ಜಾಸ್ತಿ. ಆ ಮಾತುಗಳನ್ನು ತಲೆಗೆ ಹಾಕಿಕೊಳ್ಳದೆ ತಮ್ಮ ಕೆಲಸದಲ್ಲಿ ನಿರತರಾದರು.

2009ರಲ್ಲಿ ಫ್ಯಾಶನ್ ಡಿಸೈನ್, ಯೋಗ, ಸೈಕಾಲಜಿಗಳಲ್ಲಿ ತರಬೇತಿ ಪಡೆದರು. ಸರ್ಕಾರವು ವಿಶೇಷ ಚೇತನರಿಗೆ ಶೇ. 3 ರಷ್ಟು ಅವಕಾಶವನ್ನು ಮೀಸಲು ಇರಿಸಿದ್ದರೂ ಕೂಡ ಅದನ್ನು ಪಾಲನೆ ಮಾಡುತ್ತಿರಲಿಲ್ಲ. 2015 ರಲ್ಲಿ ಕೋರ್ಟ್ ಸಹಾಯದಿಂದ ಎಂ.ಡಿ.ಎಸ್. ಪದವಿಗೆ ಪ್ರವೇಶ ಪಡೆದರು. 2013ರಲ್ಲಿ ಶೇ. 73 ಅಂಕಗಳನ್ನು ಪಡೆದು ಕರ್ನಾಟಕಕ್ಕೆ ಪ್ರಥಮ ಸ್ಥಾನ ಗಳಿಸಿದರು. 2012ರಲ್ಲಿ ಇವರು ತಮ್ಮ ಕ್ಷೇತ್ರದಲ್ಲಿ ಮಾಡಿದ ಸಂಶೋಧನೆಯ ಬಗ್ಗೆ ಪ್ರೌಢ ಪ್ರಬಂಧವನ್ನು ಪ್ರಕಟಿಸಿದರು.

ಆ ಸಮಯದಲ್ಲಿ ಅವರ ಕಣ್ಣಿಗೆ ಬಿದ್ದಿದ್ದು "ಮಿಸ್ ವೀಲ್ ಚೇರ್" ಸ್ಪರ್ಧೆಯ ಜಾಹೀರಾತು. ತಮ್ಮ ಮೂರು ನಿಮಿಷದ ವಿಡಿಯೋ ಮಾಡಿ ಆ ಸ್ಪರ್ಧೆಗೆ ಕಳುಹಿಸಿದರು. ಅವರು ಸ್ಪರ್ಧೆಗೆ ಆಯ್ಕೆಯಾದಾಗ ಜಿಮ್ ನಲ್ಲಿ ತರಬೇತಿ ಪಡೆದು,

ಉತ್ತಮ ಆಹಾರ ಪದ್ಧತಿಯನ್ನು ರೂಡಿಸಿಕೊಂಡರು. ನಂತರ ನಡೆದಿದ್ದು ಇತಿಹಾಸ. ಆಗಲೇ ಅವರು ಹೇಳಿದ ಮಾತುಗಳು "ನಾನು ಒಂದು ಜೀವನದಲ್ಲಿ ಎರಡು ತರಹದ ಅನುಭವ ಪಡೆದಿದ್ದೇನೆ. ಒಂದು ಸಾಮಾನ್ಯ ಮನುಷ್ಯರ ತರಹ, ಇನ್ನೊಂದು ವಿಶೇಷ ಚೇತನರ ತರಹದ ಜೀವನ." ಈ ಸ್ಪರ್ಧೆಯಲ್ಲಿ ಗೆದಿದ್ದು ಅವರಿಗೆ ಮಾನಸಿಕವಾಗಿ ಬಹು ದೊಡ್ಡ ಬಲ ತಂದುಕೊಟ್ಟಿತು.



2014ರ ಮಿಸ್ ವ್ಹೀಲ್ ಚೇರ್ ಸೌಂದರ್ಯ ಪ್ರಶಸ್ತಿ ವಿಜೇತೆ ಡಾ.ರಾಜಲಕ್ಷ್ಮಿ

2014ರಲ್ಲಿ ತಮ್ಮ ಡೆಂಟಲ್ ಚಿಕಿತ್ಸಾಲಯ ತೆರೆದ ಡಾ.ರಾಜಲಕ್ಷ್ಮಿ, ಜೊತೆಜೊತೆಗೇ ವಿಶೇಷ ಚೇತನರ ತರಬೇತಿಗಾಗಿ, ಅವರ ಹಕ್ಕುಗಳಿಗಾಗಿ ಹೋರಾಟ ಮಾಡಲು ಪ್ರಾರಂಭಿಸಿದರು. 2015ರಲ್ಲಿ ಎಸ್.ಜೆ.. ಫೌಂಡೇಶನ್ನ್ ಸ್ಥಾಪಿಸಿ ಅದರ ಮೂಲಕ 'ಮಿಸ್ ವೀಲ್ ಚೇರ್' ಸ್ಪರ್ಧೆಯನ್ನು ಬೆಂಗಳೂರಿನಲ್ಲಿ ಆಯೋಜಿಸಿದರು. 2017ರಲ್ಲಿ ಪೋಲೆಂಡ್ ನಲ್ಲಿ ನಡೆದ "ವಿಶ್ವ ವೀಲ್ ಚೇರ್ ಸುಂದರಿ" ಸ್ಪರ್ಧೆಗೆ ಭಾರತದ ಪ್ರತಿನಿಧಿಯಾಗಿ ಆಯ್ಕೆಯಾಗಿ ಸ್ಪರ್ಧೆಯಲ್ಲಿ "ವಿಶ್ವ ಜನಪ್ರಿಯತೆ ಟೈಟಲ್" (MISS POPULARITY TITLE) ಪಡೆದರು.

ಸಣ್ಣವರಾಗಿದ್ದಾಗಿಂದಲೂ ಡಾಕ್ಟರ್ ಆಗಲು ಇವರು ಕನಸು ಕಂಡಿದ್ದರು. ಈಗ ಅವರು ಪ್ರಖ್ಯಾತ ಆರ್ಥೋಡಾಂಟಿಕ್ (ORTHODONTIC) ಡಾಕ್ಟರ್ ಆಗಿದ್ದಾರೆ. ಜೊತೆಯಲ್ಲಿ 2017ರಿಂದ ದಂತ ವೈದ್ಯಕೀಯ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿಯೂ ಕೆಲಸ ಮಾಡುತ್ತಿದ್ದರು. ಜೊತೆಗೆ ಅವರು ಸ್ಥಾಪಿಸಿರುವ ದತ್ತಿ ಸಂಸ್ಥೆಯ ಮೂಲಕ ವಿಶೇಷ

ಚೇತನರ ಅಭ್ಯುದಯಕ್ಕೆ, ಹಕ್ಕುಗಳಿಗೆ ಹೋರಾಟ ಮಾಡುತ್ತಿದ್ದಾರೆ. ಈಕೆ ಟೆಡ್ ಎಕ್ಸ್ (TEDX)ನಲ್ಲಿ ಸ್ಪೂರ್ತಿ ತುಂಬುವ ಮಾತುಗಾರ್ತಿಯಾಗಿ ಕೂಡ ಹೊರಹೊಮ್ಮಿದ್ದಾರೆ.

"ನನಗೆ ಅಪಘಾತವಾದಾಗ ನನಗೆ ಎಲ್ಲರೂ ಕರುಣೆ ತೋರಿಸಿದರು. ಆದರೆ ವಿಶೇಷ ಚೇತನರಿಗೆ ಕರುಣೆ ಬೇಕಾಗಿಲ್ಲ. ಬೇಕಾಗಿರುವುದು ಅವರ ಸಾಧನೆಗೆ ಅವರ ಜೊತೆ ಇರವುದು ಮಾತ್ರ" ಡಾ। ರಾಜಲಕ್ಷ್ಮಿಯವರ ಮಾತು ಖಂಡಿತವಾಗಿಯೂ ಸತ್ಯ.

ಡಾ. ರಾಜಲಕ್ಷ್ಮಿಯವರು ತನ್ನ ದೈಹಿಕ ಸ್ಥಿತಿಯ ಬಗ್ಗೆ ಯೋಚಿಸದೆ ಅನೇಕ ಸಾಧನೆಗಳನ್ನು ಮಾಡಿದ್ದಾರೆ. 2016ರಲ್ಲಿ ಕೊಸ್ಮೋಡರ್ಮರವರು ಡಾ.ರಾಜಲಕ್ಷ್ಮಿಯವರು ಬರೆದ "ಬೋಲ್ಡ್ ಈಸ್ ಬ್ಯೂಟಿಫುಲ್" ಪ್ರೌಢ ಲೇಖನವನ್ನು ಪರಿಗಣಿಸಿ ಭಾರತದ ಒಂಬತ್ತು ಧೈರ್ಯವಂತ ಮಹಿಳೆಯಲ್ಲಿ ಇವರೂ ಒಬ್ಬರು ಎಂದು ಗುರುತಿಸಿದ್ದಾರೆ.

2017ರಲ್ಲಿ ಎಸ್.ಆರ್.ಎಲ್. ಡಯಾಗ್ನೋಸ್ಟಿಕ್ಸ್ ರವರು "Women of Substance" ಎಂದು ಆಕೆಯನ್ನು ಸನ್ಮಾನಿಸಿದ್ದಾರೆ. ಜಿಲ್ಲಾ ಮಟ್ಟದ ವೀಲ್ ಚೇರಿನಲ್ಲಿ ಬ್ಯಾಸ್ಕೆಟ್ ಬಾಲ್ ಸ್ಪರ್ಧೆಯಲ್ಲಿ ಸೆಮಿಫೈನಲ್ ತಲುಪಿದ್ದರು. ಇಂಡಿಯನ್ ಆರ್ಥೋಡಾಂಟಿಕ್ ಸೊಸೈಟಿಯ ರಾಷ್ಟ್ರೀಯ ಪ್ರಶಂಸೆಯ ಪತ್ರ ಪಡೆದಿದ್ದಾರೆ. ಭಾರತದ ರಾಷ್ಟ್ರಾಧ್ಯಕ್ಷ ರಿಂದ ದೆಹಲಿಯಲ್ಲಿ "ರೋಲ್ ಮಾಡೆಲ್ ಆಫ್ ಇಂಡಿಯಾ" ಎಂಬ ರಾಷ್ಟ್ರೀಯ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ತಾವೇ ಸ್ವತಃ ಚಲಾಯಿಸಲು ಸಾಧ್ಯವಾಗುವಂತೆ ಬದಲಾಯಿಸಿಕೊಂಡಿರುವ ಕಾರಿನಲ್ಲಿ ಅವರು ಈವರೆಗೆ ಹದಿಮೂರು ದೇಶಗಳಿಗೆ ಭೇಟಿಕೊಟ್ಟಿದ್ದಾರೆ.

ಇಂದು ಡಾ.ರಾಜಲಕ್ಷ್ಮಿ ಸ್ವತಂತ್ರ ಮಹಿಳೆಯಾಗಿದ್ದಾರೆ. ಅವರ ಕಾರನ್ನು ಅವರೇ ಚಾಲನೆ ಮಾಡುತ್ತಾರೆ. ಭಾರತದ ಎಲ್ಲ ಕಡೆ ಓಡಾಡಿದ್ದಾರೆ. ವಿಶ್ವದ ಅನೇಕ ದೇಶಗಳಿಗೆ ಭೇಟಿಕೊಟ್ಟಿದ್ದಾರೆ. "ನಾನು ದೈಹಿಕ ತೊಂದರೆಗೆ ಒಳಗಾಗದೆ ಇದ್ದರೆ, ಅವರ ಕಷ್ಟಗಳು ಬಹುಶಃ ನನಗೆ ಗೊತ್ತೇ ಆಗುತ್ತಿರಲ್ಲಿಲ್ಲವೇನೋ." ಎಂದು ಅವರು ಹೇಳುವ ಮಾತು ಎಲ್ಲರ ಕಣ್ಣು ತೆರೆಸಲಿ.

ಈ ಮಹಿಳೆ ನಮ್ಮ ಕರ್ನಾಟಕದ ಹೆಮ್ಮೆ.

(ಬರಹಕ್ಕೆ ಆಧಾರ - ಅಂತರ್ಜಾಲ)

*****

ಭಾರತೀಯ ಯಜ್ಞಸಂಸ್ಕೃತಿಯ ಸೊಗಸು – ಕುಮಾರವ್ಯಾಸನ ಲೇಖನಿಯಲ್ಲಿ

- ಶಾಂತಾ ನಾಗಮಂಗಲ

ಯಜ್ಞ ದಾನ ತಪ - ಇವು ಭಾರತೀಯ ಸಂಸ್ಕೃತಿಯ ಆಧಾರಸ್ತಂಭವಾಗಿವೆ ಎನ್ನುವುದು ವಿದ್ವಾಂಸರ ಅಭಿಮತವಾಗಿದೆ.

ದಾನದ ಬಗ್ಗೆ ಹೆಚ್ಚು ಹೇಳಬೇಕಿಲ್ಲ. ಯಜ್ಞದ ಭಾಗವಾಗಿದ್ದ ದಾನವು ಇಂದಿಗೂ ಬೇರೆ ರೀತಿಯಲ್ಲಿ ಸಮಾಜದಲ್ಲಿ ನಡೆದುಕೊಂಡು ಬರುತ್ತಲೇ ಇದೆ.

ತಪ - ಎಂದರೆ ತಪಿಸುವುದು ಅಥವಾ ತಾಪವುಂಟು ಮಾಡುವುದು ಎಂಬುದು ಶಬ್ದದ ಅರ್ಥ. ತಪಸ್ತೇಪೇ ಎಂಬುದು ತಪ ಶಬ್ದದ ನಿರ್ವಚನ (ಎಟಿಮಾಲಜಿ). ಒಟ್ಟಿನಲ್ಲಿ ಕಷ್ಟಕರವಾದ, ಅವಧಾನವನ್ನು ಬೇಡುವ ಕೆಲಸ ತಪಸ್ಸು. ವಿದ್ಯೆಗಾಗಿ, ಸಂಪತ್ತಿಗಾಗಿ, ಅಧಿಕಾರಕ್ಕಾಗಿ, ಪುಣ್ಯಲೋಕಗಳನ್ನು ಪಡೆಯಲು, ಸ್ವರ್ಗಕ್ಕಾಗಿ, ಮೋಕ್ಷಫಲಕ್ಕಾಗಿ- ಹೀಗೆ ಅನೇಕ ಕಾರಣಗಳಿಗಾಗಿ ಮಾಡುವ ಕಷ್ಟಸಾಧ್ಯವಾದ, ಬದ್ಧತೆಯಿಂದ ಮಾಡುವ ಪ್ರಯತ್ನವನ್ನೇ ತಪ ಎನ್ನಬಹುದು. ಕೇವಲ ಋಷಿ ಮುನಿಗಳು ಕಾಡಿನಲ್ಲೋ ಅಥವಾ ತಮ್ಮ ತಮ್ಮ ಆಶ್ರಮಗಳಲ್ಲೋ ಏಕಾಂತವಾಗಿ, ಮೂಗು ಹಿಡಿದು, ಕಣ್ಣುಮುಚ್ಚಿ ಕುಳಿತು ಮಾಡುವ ಧ್ಯಾನವೇ ತಪ ಎಂದೇನೂ ಅಲ್ಲ. ಎಲ್ಲ ಕಾಲಕ್ಕೂ "ತಪ' ಎನ್ನುವುದು ಬೇರೆ ಬೇರೆ ಬಗೆಯಲ್ಲಿ, ಬೇರೆ ಬೇರೆ ಉದ್ದೇಶ ಸಿದ್ಧಿಗಳಿಗಾಗಿ, ತೀವ್ರವಾಗಿ ಚಿಂತನ ಮಂಥನಗಳನ್ನು ಮಾಡುವ, ದೈಹಿಕವಾಗಿ ಪರಿಶ್ರಮ, ಪ್ರಯತ್ನಗಳನ್ನು ಮಾಡುವ ಬಗೆಯಲ್ಲಿ ತಪಸ್ಸು ನಡೆಯುತ್ತಲೇ ಇರುವುದು ಕಂಡುಬರುತ್ತದೆ. ಎಲ್ಲಿಯವರೆಗೆ ಅಂದರೆ "ಅವರು ತಂದೆ ತಾಯಿಗಳ ಸೇವೆಯನ್ನು ಒಂದು ತಪಸ್ಸೋ ಎನ್ನುವಂತೆ ಮಾಡಿದರು, ಸಂಗೀತವನ್ನು ತಪಸ್ಸೆನ್ನುವಂತೆ ಕಲಿತರು, ಅವರ ಪಾಲಿಗೆ ಸಮಾಜ ಸೇವೆ ಒಂದು ತಪಸ್ಸೇ ಆಗಿದೆ" - ಹೀಗೆ ಆಡುಮಾತಿನಲ್ಲೂ ತಪ ಶಬ್ದ ನುಸುಳಿರುವುದನ್ನು ಗಮನಿಸಬಹುದು.

ಇನ್ನು ಯಜ್ಞ. ಇದು ಯಜ್ ಎನ್ನುವ ಧಾತುವಿನಿಂದ ರೂಪುಗೊಂಡ ಶಬ್ದ. ಯಜ್ ಧಾತುವಿಗೆ ದೇವಪೂಜಾ, ದಾನ, ಸಂಗತಿಕರಣ (ಒಟ್ಟುಸೇರಿಸು) ಎಂಬ ಅರ್ಥಗಳಿವೆ. ಯಜ್ಞದ ಪ್ರಕ್ರಿಯೆಯಲ್ಲಿ ಈ ಮೂರೂ ಅರ್ಥಗಳು ಮೇಳವಿಸಿರು ವುದು ಕಂಡುಬರುತ್ತದೆ.

ಯಜ್ಞ ಶಬ್ದಕ್ಕೆ "ಇಜ್ಯತೆ ಹವಿರ್ದೀಯತೇ ಅತ್ರ", "ಇಜ್ಯಂತೇ ದೇವತಾ ಅತ್ರ" ಎಂಬ ವಿವರಣೆಗಳನ್ನು ಸಂಸ್ಕೃತ ಕೋಶಗಳು ಕೊಟ್ಟಿವೆ. ಅಂದರೆ ವಿವಿಧ ದೇವತಾ ತತ್ತ್ವಗಳನ್ನು ಉದ್ದೇಶಿಸಿ ತುಪ್ಪ, ಪಶು, ಪುರೋಡಾಶ, ಯವ (ಜವೆಗೋಧಿ), ಸೋಮವೇ ಮೊದಲಾದ ಬೇರೆ ಬೇರೆ ದ್ರವ್ಯಗಳಿಂದ ಹವಿಸ್ಸನ್ನು ಕೊಡುವ ವೈದಿಕ ಕ್ರಿಯಾಕಲಾಪವೇ

ಯಜ್ಞ ಎಂಬುದು ತಾತ್ಪರ್ಯವಾಗಿದೆ. ಅಥವಾ ದೇವತೆಗಳು ಇಲ್ಲಿ (ಯಜ್ಞದಲ್ಲಿ) ಪೂಜಿಸಲ್ಪಡುತ್ತಾರೆ ಎಂದು ಎರಡನೆಯ ವಿವರಣೆ "ಇಜ್ಯಂತೇ ದೇವತಾ ಅತ್ರ" ಎಂಬುದರ ಅರ್ಥ. ಯಜ್ಞ ಶಬ್ದವು ಯಜ್ ಧಾತುವಿನ ದೇವಪೂಜಾ ಎಂಬ ಅರ್ಥವನ್ನು ಒಳಗೊಂಡಿರುವಂತದ್ದು. ಸ್ಥೂಲವಾಗಿ, ಈ ಹೊತ್ತು ನಾವು ಒಂದಲ್ಲ ಒಂದು ರೀತಿಯಲ್ಲಿ ಮಾಡುವ ದೇವಪೂಜೆಯೇ ವೇದಕಾಲದ ಯಜ್ಞದ ಆಧಾರ ಭೂಮಿಕೆಯಾಗಿತ್ತು ಎನ್ನಬಹುದು. ಇಂದು ನಾವು ಮನೆಯ ಮಟ್ಟಿಗೆ ಮಾಡುವ ಒಂದು ಸಣ್ಣ ದೇವಪೂಜೆಯಲ್ಲೂ ದಾನ, ಸಂಗತಿಕರಣದಂತಹ ಅಂಶಗಳು ಸೇರಿಕೊಂಡಿರುವುದನ್ನು ಕಾಣುತ್ತೇವೆ. ಇನ್ನು ದೇವಾಲಯದಲ್ಲಿ ನಡೆಯುವ ಬಗೆಬಗೆಯ ಪೂಜೆಗಳು, ಉತ್ಸವಾದಿಗಳಲ್ಲಿ ಇವುಗಳು ಇನ್ನೂ ಹೆಚ್ಚುವರಿಯಾಗೇ ಸೇರಿಕೊಂಡಿರುತ್ತವೆ. ಅಂದರೆ ಇರುವವರಿಂದ ಸಂಪತ್ತಿನ ಸಂಗ್ರಹಣೆ ಮತ್ತು ಅದರ ವಿತರಣೆ ಮತ್ತು ಸಮಾಜದ ಎಲ್ಲಾ ವರ್ಗದ ಜನರನ್ನು ಒಟ್ಟುಗೂಡಿಸಿಕೊಂಡು ನಡೆಸುವಂತಹ ಕ್ರಿಯಾಕಲಾಪಗಳು ಇಂದು ದೇವಾಯತನಗಳಲ್ಲಿ ನಡೆಯುವ ಪೂಜೆ, ಉತ್ಸವಗಳೆಂಬ ಹೆಸರನ್ನು ಪಡೆದುಕೊಂಡಿರುವಂತೆ, ವೇದಕಾಲದ ಋಷಿಗಳು ಅದನ್ನು ಯಜ್ಞ ಎಂದು ಕರೆದಿದ್ದಾರೆ. ಈ ಯಜ್ಞ ತತ್ತ್ವವು ಪ್ರಕೃತಿಯಲ್ಲೇ ಕಂಡು ಬರುವುದನ್ನು ಭಗವಾನ್ ಶ್ರೀ ಕೃಷ್ಣ ಗೀತೆಯಲ್ಲಿ ಹೇಳಿರುವುದನ್ನು ಇಲ್ಲಿ ಪ್ರಾಸಂಗಿಕವಾಗಿ ನೆನೆಯಬಹುದು. ಉದಾಹರಣೆಗೆ ಮಳೆ ಬೆಳೆಗಳು ಸಹ ಪ್ರಕೃತಿಯಲ್ಲಿ ನಿರಂತರವಾಗಿ ನಡೆಯುವ ಯಜ್ಞತತ್ತ್ವವನ್ನೇ ಸಂಕೇತಿಸುತ್ತದೆ. ಅಪಾರವಾದ ಜಲನಿಧಿಯಾದ ಸಮುದ್ರದಿಂದ ನೀರನ್ನು ಹೀರುವ ಸೂರ್ಯನು, ಮೋಡವಾಗಿ ಪುನಃ ಭೂಮಿಗೇ ಮಳೆಸುರಿಸುವುದು, ಸೂರ್ಯ-ಚಂದ್ರರು ಹಗಲು ರಾತ್ರಿಗಳಲ್ಲಿ ತಮ್ಮ ತಮ್ಮ ಬೆಳಕಿನಿಂದ ಇಳೆಯ ಎಲ್ಲವನ್ನೂ ಪೋಷಿಸುವುದು, ಎಲ್ಲವೂ ನಿಸರ್ಗದಲ್ಲಿ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿರುವ ಯಜ್ಞಕ್ಕೆ ದೊಡ್ಡ ನಿದರ್ಶನ ಎನ್ನಬಹುದು. ಸೂರ್ಯ ಚಂದ್ರರು ಹಗಲಿರುಳು ಇಳೆಯ ಸಸ್ಯ ಸಂಪತ್ತಿಗೆ, ತನ್ಮೂಲಕ ಸಕಲ ಚರಾಚರ ಜೀವಜಗತ್ತಿಗೆ ಮಾಡುವ ಪೋಷಣೆಯನ್ನು ವೇದಗಳು "ಅಗ್ನಿಷೋಮಿಯ" ಯಾಗ ಎಂದು ಕರೆದಿವೆ.

ಈ ಯಜ್ಞಕ್ಕೆ ಸಂಬಂಧಿಸಿದ ಪೂರ್ವಸಿದ್ಧತೆಗಳು, ವಿಧಿನಿಯಮಗಳು, ಬೇರೆ ಬೇರೆ ಹೋಮ, ಇಷ್ಟಿ, ಯಾಗಗಳಲ್ಲಿ ಬಳಕೆಯಾಗುವ ಪಾತ್ರೆಯೇ ಮೊದಲಾದ ಸಲಕರಣೆಗಳು, ಕ್ರಿಯಾಕಲಾಪಗಳು ಇವೆಲ್ಲವೂ ಯಜ್ಞ ಸಂಸ್ಕೃತಿಯ ಭಾಗವಾಗಿವೆ. ಇವೆಲ್ಲವೂ ನಮ್ಮ ವೇದಕಾಲದ ಜನಜೀವನ ಹೇಗಿತ್ತು ಎಂಬುದರ ಒಂದು ದಾಖಲಾತಿಯೇ ಆಗಿದೆ ಎನ್ನಬಹುದು. ಒಂದು ದಿನದಲ್ಲಿ ಸಂಪನ್ನಗೊಳ್ಳುವ ಯಜ್ಞಗಳಿಂದ ಹಿಡಿದು ೧೨ ವರ್ಷಗಳು ನಡೆಯುವ ದೀರ್ಘ ಸತ್ರದ ಯಜ್ಞಗಳ ವಿವರಣೆಯೂ ಯಜುರ್ವೇದದ ತೈತ್ತರೀಯ ಶಾಖೆಯ ಮಂತ್ರಗಳಲ್ಲಿ, ಶ್ರೌತಸೂತ್ರಗಳಲ್ಲಿ ಕಾಣಸಿಗುತ್ತವೆ. ಇಂದಿನ ದಿನಮಾನಕ್ಕೆ ಹೊಂದಿಸಿ ಹೇಳಬಹುದಾದರೆ ಈ ಬೇರೆ ಬೇರೆ ಬಗೆಯ ಯಜ್ಞಗಳು ಇಂದು ನಡೆಯುವ ಒಲಂಪಿಕ್ ಕ್ರೀಡೆಗಳು ಅಥವಾ ಏರ್ ಶೋಗಳು, ಅಂತಾರಾಷ್ಟ್ರೀಯ ಶೈಕ್ಷಣಿಕ ಸೆಮಿನಾರ್ ಗಳಂತೆ ಎನ್ನಬಹುದು. ಇವುಗಳಿಗೆಲ್ಲಾ ಹೇಗೆ ಒಂದು ನಿಯಮ, ವಿಧಿವಿಧಾನಗಳು, ಪೂರ್ವಸಿದ್ಧತೆಗಳು ನಡೆಯುತ್ತವೋ ಹಾಗೆಯೇ ಯಜ್ಞಗಳಿಗೂ ನಡೆಯುತ್ತಿದ್ದವು ಎಂದು ತಿಳಿದು ಬರುತ್ತದೆ.

ಪ್ರಸ್ತುತ, ಈ ಯಜ್ಞಸಂಸ್ಕೃತಿಯ ವಿವರಗಳನ್ನು ನಮ್ಮ ಕನ್ನಡದ ಮಹಾಕವಿಗಳು ತಮ್ಮ ತಮ್ಮ ಕಾವ್ಯಗಳಲ್ಲಿಯೂ ಸಂದರ್ಭೋಚಿತವಾಗಿ ಪಡಿಮೂಡಿಸಿದ್ದಾರೆ. ನಮ್ಮ ಸನಾತನ ಸಂಸ್ಕೃತಿಯ ಉದಾತ್ತ ಮನೋಹರವಾದ ಮಗ್ಗಲು

ಗಳನ್ನು ದೇಶ ಭಾಷೆಗಳಲ್ಲಿ ಪರಿಚಯಿಸುವ ಹರಿಕಾರರಾಗಿದ್ದಾರೆ. ಕುಮಾರವ್ಯಾಸನ ಕರ್ಣಾಟಭಾರತ ಕಥಾ ಮಂಜರಿಯಲ್ಲೂ ಇಂತಹ ಅನೇಕ ವಿವರಗಳನ್ನು ಕಾಣಬಹುದು. ಕುಮಾರವ್ಯಾಸ ಭಾರತದ ಸಭಾಪರ್ವದಲ್ಲಿ ಬರುವ ಧರ್ಮರಾಜ ರಾಜಸೂಯ ಯಾಗದ ಸಂದರ್ಭದ ಕೆಲವು ಪದ್ಯಗಳು ಯಜ್ಞಸಂಸ್ಕೃತಿಯ ಅನೇಕ ಮುಖಗಳನ್ನು ಪರಿಚಯಿಸುತ್ತವೆ. ಕವಿಯ ಬಹುಶ್ರುತವಾದ ಪಾಂಡಿತ್ಯಕ್ಕೂ ನಿದರ್ಶನವಾಗಿ ನಿಲ್ಲುತ್ತವೆ.

ಅಷ್ಟು ದೊಡ್ಡ ಹರಹಿನ ಮಹಾಭಾರತದಲ್ಲಿ ಎರಡು ಪ್ರಮುಖವಾದ ಯಾಗಗಳ ವಿಸ್ತಾರವಾದ ವರ್ಣನೆಗಳು ಬರುತ್ತವೆ. ಒಂದು ರಾಜಸೂಯ ಯಾಗ, ಮತ್ತೊಂದು ಅಶ್ವಮೇಧ ಯಾಗ. ಈ ಎರಡೂ ಯಾಗಗಳನ್ನು ಮಾಡಿದ್ದು ಧರ್ಮರಾಜನೇ. ಈ ಎರಡೂ ಯಾಗಗಳು ಕ್ಷತ್ರಿಯರಿಗೆ ಮಾತ್ರವೇ ಮಾಡಲು ಅಧಿಕಾರವಿರುವ ಯಾಗಗಳಾಗಿವೆ. ಜೊತೆಗೆ ಸೌತ್ರಾಮಣಿ, ವಾಜಪೇಯ ಎಂಬೆರಡು ಕ್ಷತ್ರಿಯ ಯಾಗಗಗಳೇ ಆಗಿವೆ.

ಹೀಗೆ ನಡೆಯುತ್ತಿದ್ದ ಯಜ್ಞಯಾಗಾದಿಗಳಲ್ಲಿ, ಹೋಮ ಹವನ ಮುಂತಾದ ಕೆಲಸಗಳಲ್ಲಿ ನೇರವಾಗಿ ಪಾಲ್ಗೊಳ್ಳುತ್ತಿದ್ದ ಋತ್ವಿಕರು, ಬ್ರಾಹ್ಮಣ ಕ್ಷತ್ರಿಯರು ಹೀಗೆ ಒಂದು ವರ್ಗದ ಜನರು ಮಾತ್ರವೇ ಸೇರುತ್ತಿರಲಿಲ್ಲ. ಎಲ್ಲಾ ಬಗೆಯ ವಿದ್ಯೆಗಳನ್ನು ಬಲ್ಲವರೂ, ಹಾವಾಡಿಸೋರು, ಕೋಳಿ ಜಗಳ, ಟಗರಿನ ಜಗಳ ಮಾಡಿಸೋರು, ನಟನರ್ತಕರು - ಹೀಗೆ ಒಂದು ದೊಡ್ಡ ಜನಸಂದಣಿಯೇ ಸೇರುತ್ತಿತ್ತು ಎಂಬುದು ತಿಳಿದುಬರುತ್ತದೆ. ಯಾಗದೀಕ್ಷಿತನಾದ ಯಜಮಾನ ರಾತ್ರಿ ಜಾಗರಣೆ ಮಾಡಬೇಕಾಗುತ್ತದೆ. ಹಾಗೆ ಜಾಗರಣೆ ಮಾಡುವಾಗ ವೀಣಾ, ವೇಣುವಾದನಗಳನ್ನು ಕೇಳಬೇಕು, ವೀರ ರಾಜರ, ಮನುಷ್ಯ ಶ್ರೇಷ್ಠರ ಕಥೆಗಳನ್ನು (ನಾರಾಶಂಸಿ ಕಥೆಗಳು) ಕೇಳಬೇಕು ಎಂಬ ವಿವರಗಳನ್ನು ನಾವು ಶ್ರುತಿಯಲ್ಲಿ ಕಾಣುತ್ತೇವೆ. ಇದನ್ನು ಕುಮಾರವ್ಯಾಸನ ಸಭಾಪರ್ವದ ಒಂದು ಪದ್ಯ ಹೇಳುವುದು ಹೀಗೆ-

> ದೇಶದೇಶಾಂತರದ ವಿದ್ಯಾ
> ಭ್ಯಾಸಿಗಳು ಮೊದಲಾಗಿ ವರ್ಣ ನಿ
> ವಾಸಿಗಳು ಫಲಮೂಲ ದಧಿ ಘೃತ ದುಗ್ಧ ಭಾರದಲಿ
> ಆ ಸಮಸ್ತ ಮಹೀತಳದ ಧನ
> ರಾಶಿ ಜನ ಸಂತತಿಯನೇಕ
> ನಿವಾಸದಲಿ ನೆರೆ ಕಾಣಲಾಯಿತು ನೃಪತಿ ಕೇಳೆಂದ ||

ಈ ರಾಜಸೂಯಕ್ಕೆ ಚ್ಯವನ, ಗೌತಮಾದಿ ಋಷಿಪ್ರವರರು ಬಂದಹಾಗೆಯೇ, ಬೇರೆ ಬೇರೆ ಕಡೆಯಿಂದ ಬೇರೆ ಬೇರೆ ವಿದ್ಯಾಪರಿಣತರು, ವೇದಾಭ್ಯಾಸಿಗಳು, ಬೇರೆ ಬೇರೆ ವರ್ಣದವರು ಬಂದಿದ್ದಾರೆ. ಹಾಗೆ ಬರುವಾಗ ಹಣ್ಣು, ಹಂಪಲ, ಮೊಸರು, ತುಪ್ಪ ಅಂತಾ ತಮ್ಮ ತಮ್ಮ ಕಾಣಿಕೆಯನ್ನು ತಂದಿದ್ದಾರೆ. ಇದು ಯಾರೂ ಬಲ ಪ್ರಯೋಗ ಮಾಡಿ ತಂದದ್ದಲ್ಲ. ಅವರೇ ಪ್ರೀತಿಯಿಂದ, ಯಜ್ಞದಲ್ಲಿ ನಮ್ಮ ಪಾಲೂ ಇರಲಿ ಎಂದು ತಂದದ್ದು. ಹೀಗೆ ವೈವಿಧ್ಯಮಯ ಕಾಣಿಕೆಗಳನ್ನು ತಂದವರ ಸಾಲು ಬಹಳ ಉದ್ದವಿತ್ತು, ಸಂಬಂಧಪಟ್ಟವರಿಗೆ ಅವುಗಳನ್ನು ಒಪ್ಪಿಸಲು ಬಹಳ ಹೊತ್ತು ಅವರಿಗೆ ಕಾಯಬೇಕಾಗುತ್ತಿತ್ತು ಎಂಬ ವಿವರಗಳನ್ನು ನಾವು ವ್ಯಾಸಭಾರತದಲ್ಲಿ ಕಾಣಬಹುದು. ಇದನ್ನು ನಾವು

ಇಂದಿಗೂ ಉಡುಪಿಯ ಪರ್ಯಾಯಗಳಲ್ಲಿ, ಧರ್ಮಸ್ಥಳದಲ್ಲಿ ಹೆಗಡೆಯವರು ನಡೆಸುವ ಧರ್ಮದ ಕೆಲಸಗಳಲ್ಲಿ, ಸಾಮಾನ್ಯ ಜನರು ತಂದೊಪ್ಪಿಸುವ ಹೊರೆಕಾಣಿಕೆಗೆ ಒಪ್ಪಿಡಬಹುದು. ನಮ್ಮ ಯಜ್ಞಸಂಸ್ಕೃತಿ ಹೀಗೆ ಇಂದಿಗೂ ಉಳಿದುಕೊಂಡು ಬಂದಿರುವುದನ್ನು ಕಾಣಬಹುದು.

ಇನ್ನು ಹೊರೆಕಾಣಿಕೆ ತರಲಾರದವರಿಗೂ ಅಲ್ಲಿ ಕೆಲಸ, ಸಂಪಾದನೆ, ಮೋಜು ಮಸ್ತಿ, ತಮ್ಮ ಕಲಾಕೌಶಲದ ಪ್ರದರ್ಶನ -ಎಲ್ಲಕ್ಕೂ ಒಳ್ಳೆಯ ಅವಕಾಶ ಇರುತ್ತಿತ್ತು. ಹಾಗಾಗಿ ಅಂಥವರೂ ಅಲ್ಲಿ ಬಂದು ಸೇರುತ್ತಿದ್ದರು. ಕುಮಾರವ್ಯಾಸ ಕೊಡುವ ಅಂಥವರ ಪಟ್ಟಿ ನೋಡಿ-

ವಿಕಳ ವಾಮನ ಮೂಕ ಬದಿರಾಂ
ಧಕರು ಮಾಗಧ ಸೂತ ವಂದಿ
ಪ್ರಕರ ಮಲ್ಲ ಮಹೇಂದ್ರಜಾಲಿ ಮಹಾಹಿತುಂಡಿತರು ।
ಸುಕವಿ ತಾರ್ಕಿಕ ವಾಗ್ಮಿ ವೈತಾ
ಳಿಕ ಸುಗಾಯಕ ಕಥಕ ಮಾರ್ದಂ
ಗಿಕರು ನೆರೆದುದು ನಿಖಿಳ ಯಾಚಕ ನಿಕರ ಸಂದಣಿಸಿ ॥

ಕುಂಟರು, ಕುರುಡರು, ಕಿವುಡರು, ಮೂಕರು, ರಾಜವಂಶಾಳಿಗಳನ್ನು ಹೇಳುವ ಮಾಗಧರು, ಸೂತರು, ವಂದಿಗಳು, ಜಟ್ಟಿಗಳು, ಇಂದ್ರಜಾಲ ಮಾಡೋರು (ಮೆಜಿಷಿಯನ್ಸ್), ಹಾವಾಡಿಗರು, ಕವಿ, ತಾರ್ಕಿಕರು, ಒಳ್ಳೆಯ ಮಾತುಗಾರರು, ಮೃದಂಗವಾದನ ಪಟುಗಳು - ಹೀಗೆ ಒಂದು ಜೀವಂತ ಸಮಾಜದ ಮಿನಿಚಿತ್ರಣವೇ ಇಲ್ಲಿ ಮೈದೋರಿಕೊಂಡಿದೆ.

ಈ ವಿಷಯವಸ್ತುವಿನ ಹರಹು ದೊಡ್ಡದು. ಹಾಗಾಗಿ ಸಭಾಪರ್ವದ ಇನ್ನಿತರ ಯಾಜ್ಞಿಕ ವಿವರಗಳನ್ನು ಮುಂದಿನ ದಾಸೋಹದಲ್ಲಿ ಮುಂದುವರೆಸುವ ಉದ್ದೇಶವಿದೆ.

ಅವಕಾಶವಿತ್ತ ಸ.ಸ.ಕ.ಸ ವೇದಿಕೆಗೂ, ತುಂಬಾ ಆಸ್ಥೆ, ಬದ್ಧತೆಯಿಂದ ಲೇಖನವನ್ನು ಕೇಳಿ ಪರಾಮರ್ಶಿಸಲು ತರಿಸಿಕೊಂಡು, ಮುಂದೆ ತಮ್ಮ ಅಭಿಪ್ರಾಯವನ್ನು ಮಂಡಿಸಲಿರುವ ಇಂದಿನ ಸಾಹಿತ್ಯ ದಾಸೋಹದ ಅಧ್ಯಕ್ಷರಿಗೂ, ದಾಸೋಹಿ ಮಿತ್ರವೃಂದಕ್ಕೂ ಹಣೆಮಣಿದು ವಿರಮಿಸುತ್ತೇನೆ.

*****

ಹಳ್ಳಿಯ ಅರಳೀಮರ ಹಾಗೆಯೇ ಇದೆ

- ಪೋರ



ಚಿಗುರು ಮೀಸೆಯವರೆಲ್ಲ
ಗುಳೆ ಹೊರಟರೂ
ಹಳ್ಳಿಯ ಅರಳೀಮರ ಚಿಗುರುತ್ತಲೇ ಇದೆ
ಯುದ್ಧ ಮುಗಿದ ನೆಲದ ಧ್ವಜದಂತಿದೆ.

ನೆಲದ ನೀರು ಹೀರಿ
ಕಾಂಡದಲಿ ಕಸುವು ಇದೆ
ಬಾಗಿಲ್ಲ ಮರ, ಬಣ್ಣ ಬದಲಿಸಿಲ್ಲ
ಪ್ರತಿ ಚೈತ್ರ ಹಸಿರುಟ್ಟು ಜಗುಲಿ ಏರಿದೆ

ತೊಗಟೆಗಂಟಿದ ಹುಳುಗಳ
ಒಳಗೇ ಕೊರೆಯುವ ದುರುಳರ
ಹಕ್ಕಿ ಪಿಚಿಕೆಗಳ, ಸುತ್ತ ಹಚ್ಚಿಟ್ಟ ಧೂಪಗಳ
ಮಳೆ ತೊಳೆಯುತ್ತಿದೆ, ಮರ ಹಾಗೆಯೇ ಇದೆ.

ನೆಲಕಂಟಿದ ಹೆಜ್ಜೆ ಸರಿಸದೆ
ಧ್ಯಾನಿಸುತ್ತಾ ನಿಂತ ಮರ ಸ್ಥಾವರ
ಇಳಸಂಜೆ, ಹಳ್ಳಿ ಅಮಲಿನಲ್ಲಿರಲು
ಹಾರಿದ ಹಕ್ಕಿಗಳ ಮತ್ತೆ ಕರೆಯುತ್ತಿದೆ.

ತೊಗಟೆಗಂಟಿದ ಹುಳುಗಳ
ಒಳಗೇ ಕೊರೆಯುವ ದುರುಳರ
ಹಕ್ಕಿ ಪಿಚಿಕೆ, ಹಚ್ಚಿಟ್ಟ ಧೂಪಗಳ
ಮಳೆ ತೊಳೆಯುತ್ತಿದೆ, ಮರ ಹಾಗೆಯೇ ಇದೆ.

ಹಳ್ಳಿ ಎದೆಯಲಿ ಅಳುಕು-
ಬ್ರಹ್ಮರಾಕ್ಷಸ, ಕಾಣುವುದೇ ಇಲ್ಲ
ಹಸಿರು ಮರ ಉಳಿದಿರುವುದಂತೂ ಖರೆ
ತಾರೆಗಳು ಕದ ತೆರೆವ ಹೊತ್ತು ಬೆಳೆಯುತ್ತಿದೆ.

ಪ್ರತಿ ಹಳ್ಳಿ ಎದೆಯಲ್ಲಿ ಇಂದಿಗೂ
ಅಳುಕು, ಬ್ರಹ್ಮರಾಕ್ಷಸ,
ಹುಲಿ-ಕುರಿ ಆಟ, ಅರಳೀಮರ
ಎಲ್ಲವೂ ಹಾಗೆಯೇ ಇವೆ.

****

ಸಂಕ್ರಾಂತಿಯ ಸಂಭ್ರಮ

- ಮಾಲತಿ ಶ್ರೀನಿವಾಸನ್

ವರ್ಷಾರಂಭದ ಪ್ರಥಮ ಹಬ್ಬ ಸಂಕ್ರಾಂತಿ, ದೇಶದ ವಿವಿಧ ಭಾಗಗಳಲ್ಲಿ, ವಿಭಿನ್ನ ಹೆಸರುಗಳಿಂದ ಆಚರಿಸಲ್ಪಡುವ ಹಬ್ಬ. ಜೀವರಾಶಿಗಳಿಗೆ ಚೈತನ್ಯದ ಮೂಲರೂಪಿ ಸೂರ್ಯ ತನ್ನ ಪಥ ಬದಲಾಯಿಸಿ ಮಕರ ರಾಶಿಗೆ ಪ್ರವೇಶಿಸುವ ಸಂಕ್ರಮಣ



ಕಾಲ, ಉತ್ತರಾಯಣ ಪುಣ್ಯಕಾಲ. ಈ ಹಬ್ಬಗಳ ಸಂಭ್ರಮ ನೂರಾರು ನೆನಪುಗಳ ಕೆದುಕುತ್ತ ಬಾಲ್ಯದ, ಮದುವೆಯ ನಂತರದ ದಿನಗಳನ್ನು ಕಣ್ಣಮುಂದೆ ತರುತ್ತದೆ ನನಗೆ.

ನನ್ನ ಬಾಲ್ಯ ಕಳೆದದ್ದು ಬೆಂಗಳೂರು ನಗರದ ಮಲ್ಲೇಶ್ವರಂ ಬಡಾವಣೆಯಲ್ಲಿ. ನಾನು ಹುಟ್ಟಿದ್ದು ತುಂಬು ಕುಟುಂಬದಲ್ಲಿ. ತಂದೆ ತಾಯಿ, ಅಜ್ಜ ಅಜ್ಜಿ, ಮುತ್ತಜ್ಜಿ, ದೊಡ್ಡಪ್ಪ, ದೊಡ್ಡಮ್ಮ ಮತ್ತು ಅವರ ಮಕ್ಕಳು, ಅಣ್ಣ, ಅಕ್ಕ, ತಮ್ಮ, ತಂಗಿಯರೊಡನೆ. ಆ ದಿನಗಳ ನೆನಪಿಸಲು ನಾವೆಲ್ಲ ಬೆಳೆದ ದೊಡ್ಡ ಮನೆ ಮಲ್ಲೇಶ್ವರದ 17ನೇ ಅಡ್ಡ ರಸ್ತೆಯಲ್ಲಿ ಇನ್ನೂ ಇದೆ.

ಜನವರಿ ಮಾಸದ ಮಧ್ಯದಲ್ಲಿ ಬರುವ ಸಂಕ್ರಾತಿ ಹಬ್ಬಕ್ಕೆ ಒಂದು ತಿಂಗಳ ಮುಂಚೆನಿಂದ ತಯಾರಿ ಪ್ರಾರಂಭ ನಮ್ಮ ಮನೆಯಲ್ಲಿ. ಮುತ್ತಜ್ಜಿ ಸೀತಮ್ಮ (ಅವರನ್ನು ನಾವು ತೆಲುಗಿನಲ್ಲಿ ಅವ್ವ ಎಂದು ಕರೆಯುತ್ತಿದ್ದೆವು), ಅವರ ಇಬ್ಬರು ಸೊಸೆಯರು, (ಜಾನಕಮ್ಮ ದೊಡ್ಡ ಸೊಸೆ, ನನ್ನ ತಾಯಿ ಸತ್ಯವತಿ ಕೊನೆ ಸೊಸೆ), ನನ್ನ ಸೋದರತ್ತೆ ಸರಸು, ಎಲ್ಲರೂ ಹಬ್ಬದ ಕೆಲಸಕ್ಕೆ ಸಿದ್ಧ. ಊಟದ ಪಡಸಾಲೆಯಲ್ಲಿ, ದೊಡ್ಡ ಬಕೇಟುಗಳಲ್ಲಿ ಎಳ್ಳು ನೆನಸಿ, ನೀರು ಸೋರಿಸಿ ಎಳ್ಳನ್ನು ಹಳೆ

ಪಂಚೆಗಳ ಮೇಲೆ ಉಜ್ಜುತ್ತಾ, ಹಾಡು-ಹರಟೆ ನಡೆಯುತ್ತಿತ್ತು. ಆ ಕಾಲದಲ್ಲಿ ಇಂದಿನಂತೆ ಅಂಗಡಿಯಲ್ಲಿ ಶುದ್ಧೀಕರಿಸಿದ ನೈಲಾನ್ ಎಳ್ಳು ಸಿಗುತ್ತಿರಲಿಲ್ಲವೋ ಅಥವಾ ಮಡಿಗೆ ಆಗೋಲ್ಲ ಅಂತ ತರುತ್ತಿರಲಿಲ್ಲವೋ ಗೊತ್ತಿಲ್ಲ. ಉಜ್ಜಿದ ಎಳ್ಳನ್ನು



ದೊಡ್ಡ ಕಬ್ಬಿಣದ ಬಾಂಡ್ಲೆಗಳಲ್ಲಿ ಹುರಿದು, ಆರಿಸಿ, ದೊಡ್ಡ ಸ್ಟೀಲ್ ಡಬ್ಬಕ್ಕೆ ತುಂಬುತ್ತಿದ್ದರು. ನಂತರ ಬಾಂಡ್ಲೆಗೆ ಮರಳು ಹಾಕಿ ಕಡಲೆಕಾಯಿ ಹುರಿಯುವ ಕೆಲಸ. ನಾವು ಮಕ್ಕಳ ಪಾಲಿಗೆ ಮರಳು, ಕಾಯಿ ಬೇರ್ಪಡಿಸಿ ಸಿಪ್ಪೆ ತೆಗೆದು ಉಜ್ಜುವ ಕೆಲಸ. ನಾವೆಲ್ಲ ಕಾಯಿ ಉಜ್ಜುತ್ತ ಮಧ್ಯೆ ಮಧ್ಯೆ ಮುಕ್ಕುತ್ತ ಮಾಡುವ ಕಪಿ ಚೇಷ್ಟೆ ಅಜ್ಜಿಗೆ ಮುದ್ದು, ಅಮ್ಮಂದಿರಿಗೆ ಸಿಟ್ಟು. ನಮ್ಮಲ್ಲಿ ಮಿಶ್ರಣಕ್ಕೆ ಬೆಲ್ಲಕ್ಕೆ ಬದಲು ಸಕ್ಕರೆ ಪಾಕ ಮಾಡಿ ಹಾಳೆಗಳಂತೆ ಹರಡಿ, ಗಟ್ಟಿಯಾದ ನಂತರ ಸಣ್ಣದಾಗಿ ಸಮನಾಗಿ ಮುರಿದು ಮಿಶ್ರಣಕ್ಕೆ ಬೆರಸುವ ಪದ್ಧತಿ. ಮಿಶ್ರಣಕ್ಕಾಗಿ ಒಣಕೊಬ್ಬರಿಯ ಕಪ್ಪು ಭಾಗ ಉಜ್ಜಿ ತೆಗೆದು ಸಣ್ಣದಾಗಿ ಕತ್ತರಿಸುವುದನ್ನು ನೆನಪಿಸಿಕೊಂಡರೆ ಯಾವ ಯಂತ್ರಗಳ ಸಹಾಯವೂ ಇಲ್ಲದೆ ಎಷ್ಟು ಅಚ್ಚುಕಟ್ಟಾಗಿ ತಾಳ್ಮೆಯಿಂದ ಇಬ್ಬರೋ ಅಥವಾ ಮೂವರು ಹೆಂಗಸರು ಹೇಗೆ ಮಾಡುತ್ತಿದ್ದರು ಅನಿಸುತ್ತೆ. ಈ ಮಿಶ್ರಣಕ್ಕೆ ಹುರಿಕಡಲೆ ಬೆರೆಸಿ ಡಬ್ಬಗಳಿಗೆ ತುಂಬಿಸುವ ಮುಂಚೆ ಮಕ್ಕಳ ಉತ್ಸಾಹ, ಕಳ್ಳಾಟ, ಹಿರಿಯರ ಕಣ್ಣು ತಪ್ಪಿಸಿ ಹಿಡಿಹಿಡಿ ಮಿಶ್ರಣ ಮುಕ್ಕಿ, ಗಲ್ಲಕ್ಕೆ ಅಂಟಿರುವ ಎಳ್ಳು ಕಾಣದೆ, ನಾ ತಿಂದಿಲ್ಲ ಅಂತ ಕಳ್ಳ ಕೃಷ್ಣನಂತೆ ಸುಳ್ಳು ಹೇಳುವುದು, ಅದೆಂತಹ ಮೋಜಿನ ದಿನಗಳು!

ಸಂಕ್ರಾಂತಿಯ ಮತ್ತೊಂದು ರೋಚಕ ತಿನಿಸು ಸಕ್ಕರೆ ಅಚ್ಚು. ವಿವಿಧ ಆಕಾರದ ಮರದ ಅಚ್ಚುಗಳನ್ನು ಅಟ್ಟದ ಮೇಲಿಂದ ಇಳಿಸಿ ಶುಭ್ರವಾಗಿ ತೊಳೆಯುವುದು ಮೊದಲ ಕೆಲಸ. ಈ ಕಾರ್ಯಕ್ಕೆ ಬೀರುವಿನಿಂದ ಬಿಳಿಪಂಚೆಗಳು ಹೊರಬರುತ್ತಿದ್ದವು. ದೊಡ್ಡ ಕಂಚಿನ ಪಾತ್ರೆಗಳಲ್ಲಿ ಸಕ್ಕರೆಗೆ ಹಾಲು ಹಾಕಿ, ಕುದಿಸಿ, ಶೋಧಿಸಿ, ಪಾಕ ಸರಿ ಇದೆ ಅಂತ ನೋಡಿ, ಕಶ್ಮಲ ತೆಗೆದು, ಸ್ವಲ್ಪ ಪಾಕವನ್ನು ಸಣ್ಣದೊಂದು ಕಂಚಿನ ಪಾತ್ರೆಯಲ್ಲಿ ಹಾಕಿ, ಉಜ್ಜಿ ಉಜ್ಜಿ ಕಲಕುತ್ತ ಹದಕ್ಕೆ ಬಂದಾಗ ಸಾಲಾಗಿ ಜೋಡಿಸಿಟ್ಟ ಅಚ್ಚುಗಳಿಗೆ ಹಾಕುವುದು. ನಾವೆಲ್ಲ ಹುಡುಗರ ದಂಡಿಗೆ ಆಟಿಕೆಗಳಂತೆ ಅಚ್ಚುಗಳನ್ನು ಕುಟ್ಟಿ ಪಾಕ ಸರಿಯಾಗಿ ಒಳಗಿಳಿಯುವಂತೆ ಮಾಡಿ, ಆರಿದ ನಂತರ ಬಿಡಿಸುವ ಕೆಲಸ. ಆಗಿನ ಕಾತುರತೆ ಒಳ್ಳೆ ಪರೀಕ್ಷೆ ಫಲಿತಾಂಶ ಕಾಯೋ ರೀತಿ. ಯಾವುದು ಸರಿಯಾಗಿದೆ ಯಾವುದು ಭಿನ್ನ ಎಂದು ನೋಡುವ ಮಜಾ. ಅಚ್ಚು ಮುರಿದರೆ ಬೇಜಾರು ಅಮ್ಮ ದೊಡ್ಡಮ್ಮನಿಗೆ. ನಮಗೋ ಖುಷಿಯೊ ಖುಷಿ, ಮುರಿದುಬಿದ್ದ ಅವಶೇಷಗಳಲ್ಲಿ ಕೆಲವು ಮತ್ತೆ ಪಾಕಕ್ಕೆ ಕೆಲವು ನಮ್ಮ ಉದರಕ್ಕೆ. ಕುದಿಯುವ ಪಾಕದ ಆ ಪುಟ್ಟ ಪಾತ್ರೆ, ಇಜ್ಜಿಲಿನ ಒಲೆಯ ನಿಗಿನಿಗಿ ಕೆಂಡ, ಎಳ್ಳು ಹುರಿಯುತ್ತಿದ್ದ ದೊಡ್ಡ ಬಾಂಡ್ಲೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಅಚ್ಚು ಹಾಕುವುದು ಮುಗಿದ ನಂತರ ಸುಮಾರು 100ರಿಂದ 200ರಷ್ಟು ಅಚ್ಚುಗಳು. ಗಣೇಶ, ಅಳಿಲು, ಬಾಳೆಗೊನೆ, ಆನೆ, ಜಿಂಕೆ, ಮೊಲ, ಶಿವ, ಮಂಟಪ, ಗಣಪ ಸಾಲಾಗಿ ಆರಲು ಇಟ್ಟಾಗ, ಚಿತ್ರ ಹಿಡಿದು

ವಾಟ್ಸಪ್, ಫೇಸ್ ಬುಕ್ ಅಂತ ತಕ್ಷಣ ಮುನ್ನಾಯಿಸುವ ಯೋಚನೆ ಬರುತ್ತಿರಲಿಲ್ಲ. ಇಂದಿನಂತೆ ಪ್ರದರ್ಶನದ ಮನೋಭಾವ ಇರಲಿಲ್ಲ. ಅಂದು ಆ ಘಳಿಗೆ ಸುಖಿಸೋದು, ಮುಂದಿನ ವರುಷ ಮತ್ತೆ ಹಬ್ಬ ಬರುತ್ತೆ ಅನ್ನುತ್ತ ಸಂಭ್ರಮಕ್ಕೆ ಕಾಯೋದು ಮಾತ್ರ ಗೊತ್ತಿತ್ತು.

ಹಬ್ಬ ಅಂದ್ರೆ ಬರಿ ತಿಂಡಿ ಸಂಭ್ರಮ ಒಂದೇ ಅಲ್ಲ. ಹಿರಿಯರಿಗೆ, ಮಕ್ಕಳಿಗೆಲ್ಲ ಹೊಸ ಬಟ್ಟೆ. ಗಂಡು ಹುಡುಗರಿಗೆ ಚಡ್ಡಿ, ಶರ್ಟು, ಹೆಣ್ಣು ಮಕ್ಕಳಿಗೆ ಜರತಾರಿ ಲಂಗ. ದೊಡ್ಡ ಥಾನ್ ಹೋಲ್ ಸೇಲ್ ಖರೀದಿ. ಒಂದೇ ತರಹದ ಬಟ್ಟೆ. ದರ್ಜಿ ಸುಬ್ಬರಾವ್ ಮನೆಗೇ ಬಂದು ಅಳತೆ ತೊಗೊಂಡು ಹೊಲಿದು ಹಬ್ಬದ ಹಿಂದಿನ ದಿನ ತಂದುಕೊಟ್ಟರೆ ಆಯ್ತು. ಅವನು ಹೊಲಿದಿದ್ದೇ ಅಳತೆ. ಎರಡು ಮಾತಿಲ್ಲದೆ ಎಲ್ಲರೂ ತೊಟ್ಟು ಸಂಭ್ರಮಿಸುವುದು.

ಸಂಕ್ರಾತಿಯ ಸಂಜೆಯ ಮೋಜಿನ ಕಾರ್ಯಕ್ರಮ ಎಳ್ಳು ಬೀರುವುದು. ಸುತ್ತಮುತ್ತ ಇರುವ ಮನೆಗಳಿಗೆಲ್ಲ ದೊಡ್ಡ ಚೀಲದಲ್ಲಿ ಎಳ್ಳು ಮಿಶ್ರಣ, ಸಕ್ಕರೆ ಅಚ್ಚು, ಕುಸುರಿಕಾಳಿನ ಡಬ್ಬಗಳು, ಹಣ್ಣುಗಳು, ಒಣಕೊಬ್ಬರಿ ಚಿಪ್ಪು ಹಿಡಿದು ಎಲ್ಲರ ಮನೆಯಲ್ಲಿ ತಟ್ಟೆ ಕೇಳಿ, ಎಲ್ಲವನ್ನು ಪಾಂಗಿತವಾಗಿ ಕೊಟ್ಟು, ಅವರು ಕೊಟ್ಟಿದ್ದನ್ನು ಇನ್ನೊಂದು ಚೀಲದಲ್ಲಿ ತುಂಬಿಸಿ ಕೊಂಡು ನಮ್ಮ ದಂಡು ಮನೆ ಸೇರುತ್ತಿದ್ದದ್ದು ಕತ್ತಲಾದ ನಂತರವೇ. ಅಜ್ಜಿಯ ಕೈಯ್ಯಿನ ಬಣ್ಣ ಬಣ್ಣದ ಕುಸುರಿಕಾಳು ಎಲ್ಲರಿಗೂ ಪ್ರಿಯ. ಮುಕ್ಕಿದಷ್ಟೂ ಸಂತಸ. ಈಗಿನಂತೆ ಹಲ್ಲು ಕೆಡುತ್ತೆ, ಸಕ್ಕರೆ ಹೆಚ್ಚು ತಿಂದರೆ ಮೈ ಬರುತ್ತೆ ಅನ್ನುವ ಯಾವ ಭಯವೂ ಇಲ್ಲದ ದಿನಗಳು ಅವು. ಸಂಕ್ರಾಂತಿಯ ಸಂಜೆಯಂದು ಮತ್ತೊಂದು ಆಚರಣೆ, ಸಣ್ಣ ಮಕ್ಕಳನ್ನು ಕೂಡಿಸಿ ತನಿ ಎರೆಯುವ ಶಾಸ್ತ್ರ. ಎಳ್ಳಿನ ಮಿಶ್ರಣದ ಜೊತೆ ಎಲಚಿ ಹಣ್ಣು, ಸಣ್ಣ ಸಣ್ಣ ಕಬ್ಬಿನ ಚೂರು ಮತ್ತು ನಾಣ್ಯ ಕಾಸುಗಳನ್ನು ಹಾಕಿ, ಮಕ್ಕಳಿಗೆ ಆರತಿ ಎತ್ತಿ, ಮಿಶ್ರಣ ತಲೆಯಿಂದ ಸುರಿಯುವುದು. ಕೆಳಗೆ ಬಿದ್ದ ನಾಣ್ಯ ಕಾಸು ಆರಿಸುವ ಆತುರ ದೊಡ್ಡ ಮಕ್ಕಳಿಗೆ. ಅವರ ಕಿತ್ತಾಟ, ಅಳು ಮುಜುಗರ ಸಣ್ಣವಕ್ಕೆ.

ಈ ಎಲ್ಲ ಚಟುವವಟಿಕೆಯ ಕೇಂದ್ರ ಬಿಂದು ನನ್ನ ಮುತ್ತಜ್ಜಿ ಸೀತಮ್ಮ. ಕಮಾಂಡರ್ ಇನ್ ಚೀಫ್, ಉತ್ಸಾಹದ ಚಿಲುಮೆ. ಮನೆಯ ಸದಸ್ಯರೆಲ್ಲರ ಆರೈಕೆಯಲ್ಲಿ ಸಂತಸ ಕಾಣುತ್ತಿದ್ದ ಹಿರಿಜೀವ.

“ನಿನ್ನ ದೊಡ್ಡ ಮಗಳ ಮದುವೆ ನೋಡೋ ಆಸೆ ರಾಮು, ಇನ್ನೆಷ್ಟು ದಿನಾನೋ, ಬೇಗ ಮಾಡಿಬಿಡು" ಅಂತ ನನ್ನಪ್ಪನ ಅವಸರಿಸಿದ ನನ್ನಜ್ಜಿ, ನನ್ನ ಮೊದಲ ಮಗ ಹುಟ್ಟಿದಾಗ, ನನಗೂ ಮರಿಮಗನಿಗೂ ಎಣ್ಣೆ ಹಚ್ಚಿ ಆಶೀರ್ವಾದ ಮಾಡಿ ಸಂಭ್ರಮಿಸಿದಾಗ ಅವರ ವಯಸ್ಸು 98ರ ಗಡಿ ದಾಟಿತ್ತು. ಈ ಸಂಕ್ರಾಂತಿಯ ಹಬ್ಬದ ಸಡಗರದಲ್ಲಿ ಅಗಲಿದ "ಅವ್ವ" ಸೀತಮ್ಮನ ನೆನಪಾಯಿತು.

ನನ್ನ ಅಜ್ಜಿಯಂತೆ ನನ್ನ ಅತ್ತೆ ಲಕ್ಷಮ್ಮನಿಗೂ ಹಬ್ಬಗಳ ಸಂಭ್ರಮ ಸಡಗರ, ಎಲ್ಲ ವಸ್ತುಗಳನ್ನು ಮನೆಯಲ್ಲಿ ತಯಾರಿಸುವ ಆಸಕ್ತಿ ಹುರುಪು. ಸಂಕ್ರಾಂತಿ ಹಬ್ಬದ ತಿಂಗಳು ಮುಂಚೆನಿಂದ ಮನೆಯಲ್ಲಿ ನೆಂಟರಿಗೆ ಸ್ನೇಹಿತರಿಗೆ ಸಕ್ಕರೆ ಅಚ್ಚು ಮಾಡಿಕೊಡುವ ದಿನ ನಿಗದಿಯಾಗಿರುತ್ತಿತ್ತು. ಒಬ್ಬೊಬ್ಬರಿಗೆ ಒಂದೊಂದು ದಿನ ಅಪಾಯಿಂಟ್ಮೆಂಟ್. ದಿನಕೊಬ್ಬರಂತೆ ಹಾಲು, ಸಕ್ಕರೆ ಡಬ್ಬ ಹಿಡಿದು ಬೆಳಗ್ಗೆ ಬಂದರೆ ಸೀಮೆಎಣ್ಣೆ ಸ್ಟೋವ್ ಹಚ್ಚಿ ತಯಾರಿ ಶುರು. ನಾನು ಹತ್ತಿರದ

ವಿವೇಕಾನಂದ ಕಾಲೇಜಿನಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದೆ, ಊಟದ ಡಬ್ಬಿ ಹಿಡಿದು 9 ಘಂಟೆಗೆ ನಾನು ಮನೆಯಿಂದ ಪರಾರಿ. ಸಂಜೆ ನಾಲ್ಕು ಘಂಟೆಗೆ ನಾನು ಎಂಟ್ರಿ ಕೊಟ್ಟಾಗ, ಊಟ ಕಾಫಿ ಎಲ್ಲ ಮುಗಿಸಿ, ಸಕ್ಕರೆ ಅಚ್ಚುಗಳನ್ನು ಹುಷಾರಾಗಿ ಡಬ್ಬಿಲಿ ತುಂಬಿಸಿಕೊಂಡು ಹೊರಡಲು ಸಿದ್ಧರಾದ ಹೆಂಗಳೆಯರು, "ನಿಮ್ಮ ಕೈ ಪಳಗಿದೆ ಲಕ್ಷಮ್ಮ. ಅಚ್ಚುಗಳು ಎಷ್ಟು ಚೆನ್ನಾಗಿವೆ, ಇನ್ನು ನಮ್ಮ ಕೆಲಸ ಸುಲಭ ಆಯ್ತು, ಎಳ್ಳು ಬೆರೆಸಿದರೆ ಮುಗೀತು" ಅಂತ ಹೊಗಳಿ, ಉಬ್ಬಿಸಿ ಹೊರಟಾಗ ಧನ್ಯತೆಯ ಭಾವ ಅತ್ತೆಯ ಮುಖದಲ್ಲಿ. ನಂತರದ ಅವರ ಬೇಡಿಕೆ ನಂಗೆ ಪೀಕಲಾಟ. "ಮಾಲು, ಘಂಟೆ ಇನ್ನೂ ನಾಲ್ಕು, ಸ್ವಲ್ಪ ಸೀಮೆಎಣ್ಣೆ ಬೇಕು. ನಾಳೆ ರತ್ನಮ್ಮ, ನಿಮ್ಮ ಅಮ್ಮ ಬರ್ತಾರೆ, ರೇಷನ್ ಅಂಗಡಿ 7 ಘಂಟೆವರೆಗೂ ಇರುತ್ತೆ ತರ್ತೀಯಾ, ಅಂದಾಗ, ಕ್ಲಾಸ್ ಮಾಡಿ ಸುಸ್ತು ಅತ್ತೆ ಅಂತ ಹೇಳೂಕೆ ಆಗದೆ, ಸುಮ್ಮನೆ ಮಾತಿಲ್ಲದೆ ಸೀಮೆ ಎಣ್ಣೆ ಡಬ್ಬ ಹಿಡಿದು ಹೊರಟಾಗ ಸಾಕಪ್ಪಾ ಈ ಅಚ್ಚಿನ ಸಂಭ್ರಮ ಅನಿಸುತ್ತಿತ್ತು.

ಜನವರಿ ತಿಂಗಳು ಪೂರ್ತಿ ಸಂಕ್ರಾಂತಿ ಸಂಭ್ರಮದ ಜೊತೆ ಸೀಮೆ ಎಣ್ಣೆ ಡಬ್ಬ ಹಿಡಿದು ರೇಷನ್ ಅಂಗಡಿಯವನನ್ನು 5-6 ಲೀಟರ್ ಹೆಚ್ಚಿಗೆ ಕೊಡಲು ಗೋಗರೆಯುತ್ತಿದ್ದುದನ್ನ ನೆನೆಸಿಕೊಂಡರೆ ನಗು ಬರುತ್ತೆ, ಆಗ ಈ ಸೊಸೆಯ ಸಿಟ್ಟು ಮಕ್ಕಳ ಮೇಲೆ, ಒಮ್ಮೊಮ್ಮೆ ವಿದ್ಯಾರ್ಥಿಗಳ ಮೇಲೆಯೂ ಹಾಯುತ್ತಿತ್ತು.

"ನಮ್ಮೊಂದಿಗೆ ಈ ಹಬ್ಬಗಳ ಆಚರಣೆ, ನೇಮ, ನಿಷ್ಠೆ ಹೊರಟುಹೋಗುತ್ತೆ, ಇನ್ನು ಮುಂದೆ ಯಾರೂ ಮಾಡೋಲ್ಲ" ಅಂತ ಹಲವಾರು ಬಾರಿ ನಮ್ಮ ಮಾವನವರು ಬೇಜಾರಲ್ಲಿ ಆಡಿದ ಮಾತು ಸುಳ್ಳಾಗಿಸುವಂತೆ ಇಂದು ಸಂಕ್ರಾಂತಿ ಮತ್ತು ಎಲ್ಲ ಹಬ್ಬಗಳ ಆಚರಣೆಯನ್ನು ಇಂದಿನ ಯುವಜನಾಂಗ ಬಿಡದೆ ಉತ್ಸಾಹದಿಂದ ಒಟ್ಟುಗೂಡಿ ತಮ್ಮದೇ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ. ಈಗ ಹಬ್ಬದ ಆಚರಣೆಗೆ ಸಿದ್ಧವಾದ ವಸ್ತುಗಳು ಎಲ್ಲ ನಗರಗಳಲ್ಲೂ ಆಸಕ್ತರನ್ನು ಕೈಬೀಸಿ ಕರೆಯುತ್ತಿವೆ. ಎಲ್ಲೆಡೆ ಅಂಗಡಿಗಳಲ್ಲಿ ಸಾಲಾಗಿ ಜೋಡಿಸಿಟ್ಟ ಸಕ್ಕರೆ ಅಚ್ಚು, ಸಿದ್ಧಪಡಿಸಿದ ಎಳ್ಳು-ಬೆಲ್ಲದ ಮಿಶ್ರಣ, ಕುಸುರಿ ಕಾಳಿನ ಪುಟ್ಟ ಡಬ್ಬಿಗಳು, ಬಣ್ಣಬಣ್ಣದ ಕುಡಿಕೆಗಳು ಎಂತಹವರನ್ನಾದರೂ ಸೆಳೆಯುತ್ತವೆ. ಇವೆಲ್ಲ ಒಂದು ರೀತಿ ಸೋಮಾರಿತನಕ್ಕೆ ಹಾಸಿಗೆ ಹಾಸಿದಂತೆ ಅಥವಾ ಗಡಿಬಿಡಿ ಒತ್ತಡದ ಜೀವನ ಶೈಲಿಗೆ ವರವಿದ್ದಂತೆ. ಇದರಿಂದ ಹಬ್ಬದ ಆಚರಣೆ ಇಂದು ಸುಲುಭ. ನಾ ಕಂಡಂತೆ ಹಲವು ಹೆಣ್ಣುಮಕ್ಕಳು ದೊಡ್ಡ ಹುದ್ದೆಗಳನ್ನು ನಿಭಾಯಿಸುತ್ತಲೇ ಮಕ್ಕಳೊಡನೆ ಹಬ್ಬಗಳನ್ನು ಸಂಭ್ರಮದಲ್ಲಿ ಆಚರಿಸಿ ಅನಂದಿಸುತ್ತಾರೆ. ಸುಗ್ಗಿಯ ಸಂಕ್ರಾತಿ ಮೇಳ, ಹಲವಾರು ಸಾಹಿತ್ಯ ಸಂಗೀತ ಸಮ್ಮಿಲನದ ಸಂಜೆಗಳ ಕಾರ್ಯಕ್ರಮ, ಹಬ್ಬದ ಆಚರಣೆಗೆ ರಂಗು ತುಂಬಿವೆ. ಸಂಕ್ರಾಂತಿ ಮತ್ತು ಇತರೆ ಹಬ್ಬಗಳ ಆಚರಣೆ ಹಲವಾರು ಕುಟುಂಬಗಳಿಗೆ ಜೀವನೋಪಾಯಕ್ಕೆ ಆಧಾರವಾಗಿದ್ದು ಸಾಮಾಜಿಕ ಜಾಗೃತಿ ಮೂಡಿಸಿದೆ. ಜೀವನದ ಸಂಜೆಯಲ್ಲಿ ನೆನಪುಗಳು ಸಿಹಿಯಾಗಿ, ಸಕ್ಕರೆಯ ಅಚ್ಚಿನಂತೆ, ರುಚಿರುಚಿಯಾಗಿ, ಎಳ್ಳುಬೆಲ್ಲದ ಮಿಶ್ರಣದಂತಿರಬೇಕು.

ಅಂದು ಅಜ್ಜಿ, ಮುತ್ತಜ್ಜಿ, ಅಪ್ಪ, ಅಮ್ಮ, ಅತ್ತೆ, ಹಿರಿಯ ಕಿರಿಯ ಬಂಧುಗಳು, ಸ್ನೇಹಿತರೊಡನೆ ಹಂಚಿಕೊಂಡ ಹಬ್ಬದ ಸಂಭ್ರಮದ ದಿನಗಳ ನೆನಪು ಇಂದಿನ ಬಾಳಸಂಜೆಗಳಲ್ಲಿ ಜೀವನೋತ್ಸಾಹಕ್ಕೆ ಹುರುಪು ಚೇತೋಹಾರಿ.

(ಚಿತ್ರಗಳು: ಕೃಪೆ-ಅಂತರ್ಜಾಲ)

*****

ಕಥಾ ಪ್ರಪಂಚ

ದೃಷ್ಟಾಂತ ಕತೆಗಳು

-- ವಿಠ್ಠಲ್ ಇಜೇರಿ

ಭಾರತ ದೇಶದ ಆತ್ಮ ಆಧ್ಯಾತ್ಮವಾಗಿದ್ದು, ಲಾರ್ಡ್ ಮೆಕಾಲೆ ಶಿಕ್ಷಣ ಪದ್ಧತಿಗೆ ಮುಂಚೆ ಶಿಕ್ಷಣದ ಉಸಿರು, ನೈತಿಕತೆ ಮತ್ತು ಆಧ್ಯಾತ್ಮವೇ ಆಗಿತ್ತು. ಎಲ್ಲ ಧರ್ಮಗಳ, ಎಲ್ಲ ಧರ್ಮ ಗುರುಗಳು ಕ್ಲಿಷ್ಟವಾದ ವೇದಾಂತ ತತ್ವಗಳನ್ನು ನೇರವಾಗಿ ಬೋಧಿಸಿದರೆ ಶುಷ್ಕವಾಗಿ ಮನಸ್ಸಿಗೆ ಇಳಿಯುವದಿಲ್ಲ ಎಂದು ಮನರಂಜಿಸುವ ನೈತಿಕ ಕತೆಗಳು, ವಿನೋದ ಪ್ರಸಂಗಳು, ಪವಾಡಗಳೊಂದಿಗೆ ವಿವರಿಸುತ್ತಾರೆ. ಸಕ್ಕರೆ ಅಡಿಯಲ್ಲಿ ಮರೆಯಾಗಿರುವ ಕಹಿ ಔಷಧಿ ದೇಹಾರೋಗ್ಯ ಕೊಡುವಂತೆ, ಕಠಿಣ ತತ್ವಗಳು ಈ ರೀತಿಯ ಆಕರ್ಷಕತೆ, ನಗೆಹನಿಗಳ ಮೂಲಕ ಸುಲಭವಾಗಿ ಅರ್ಥವಾಗುತ್ತವೆ. ಈ ನಿಟ್ಟಿನಲ್ಲಿ ಜೈನರ ಮೂರನೇ ಶತಮಾನದ ವಡ್ಡರಾಧನೆ, ಬುದ್ಧರ ಜಾತಕ ಕತೆಗಳು, ಪಂಚತಂತ್ರ ಕತೆಗಳು, ಇತ್ತೀಚಿನ ಓಶೋ, ಖಲೀಲ್ ಗಿಬ್ರಾನ್ ಆದಿಯಾಗಿ ಸಾಕಷ್ಟು ಸಂತರು, ತತ್ವಜ್ಞಾನಿಗಳು ಮತ್ತು ಮಹಾತ್ಮರನ್ನು ಹೆಸರಿಸಿಬಹುದು. 19ನೇ ಶತಮಾನದ ಅಂತ್ಯದಲ್ಲಿ ಆಗಿ ಹೋದ ದಕ್ಷಿಣೇಶ್ವರದ ಶ್ರೀ ರಾಮಕೃಷ್ಣರು ಅಂತಹ ಮಹಾನುಭವಿಗಳಲ್ಲಿ ಒಬ್ಬರು. ಅವರು ಆಡಿದ ಮಾತುಗಳು, ಹಾಡಿದ ಹಾಡುಗಳು, ಎಲ್ಲ ಕೃತಿಗಳೂ ಆಧ್ಯಾತ್ಮವೇ ಆಗಿತ್ತು. 1874-75ರಿಂದ ಅವರು ಆಗಾಗ ಭಕ್ತರ ಮನೆಗೆ ಹೋದಾಗ, 1882-1885ರ ಅವಧಿಯಲ್ಲಿ ದಕ್ಷಿಣೇಶ್ವರಕ್ಕೆ ಭಕ್ತರು, ಜಿಜ್ಞಾಸುಗಳು ಭೇಟಿ ನೀಡಿದಾಗ, ಶ್ರೀ ರಾಮಕೃಷ್ಣರು ವಿನೋದವಾಗಿ, ಇಲ್ಲವೇ ಸರಳ ಚಿಕ್ಕ ಚಿಕ್ಕ ಕಥೆಗಳ ಮೂಲಕ ತತ್ವಗಳನ್ನು, ಕಠಿಣ ವಿಷಯಗಳನ್ನು ಆಸ್ತಿಕರಿಗೆ ಉಣಬಡಿಸುತ್ತಿದ್ದರು. ಅವರ ಮಾತುಗಳು ನೀರಸವಾಗಿರುತ್ತಿರಲಿಲ್ಲ. ಅವುಗಳನ್ನು ಪುರಾಣಗಳಿಂದ, ನಿತ್ಯ ಜೀವನದ ಸಾಮಾನ್ಯ ಘಟನೆಗಳನ್ನು ಬಳಸಿಕೊಂಡು ಸರಳ ರೀತಿಯಲ್ಲಿ ಹೇಳಿದ್ದಾರೆ. ಅವರ ತೀಕ್ಷ್ಣದೃಷ್ಟಿಗೆ ಬೀಳದ ಜೀವನದ ಸನ್ನಿವೇಶಗಳೇ ಇಲ್ಲ. ಅವರು ಮಾತು ಮಾತಿನಲ್ಲಿ ಹೇಳಿದ ತಾತ್ವಿಕ ಮೌಲ್ಯಗಳ ಕತೆಗಳನ್ನು **ಟೇಲ್ಸ್ ಅಂಡ್ ಪರಬೆಲ್ಸ್ ಆಫ್ ಶ್ರೀ ರಾಮಕೃಷ್ಣ** ಎಂಬ ಗ್ರಂಥದಲ್ಲಿ ಸಂಗ್ರಹಿಸಲಾಗಿದೆ. ಆ ಪುಸ್ತಕದಿಂದ ಆರಿಸಿದ ಒಂದೆರಡು ಕತೆಗಳು ಇಲ್ಲಿವೆ.

ಮೂವರು ದರೋಡೆಕೋರರು

ಒಬ್ಬ, ನಿರ್ಜನ ಕಾಡಿನಲ್ಲಿ ಹೋಗುತ್ತಿದ್ದ. ಆಗ ಮೂವರು ದರೋಡೆಕೋರರು ಅವನಲ್ಲಿದ್ದ ಬೆಲೆಯುಳ್ಳದ್ದನ್ನು, ಹಣವನ್ನು ದೋಚಿದರು. ಅವರಲ್ಲೊಬ್ಬ ಇವನನ್ನು ಉಳಿಸಿದರೆ ಎಂದಾದರೂ ಗುರುತು ಹೇಳಿಯಾನು, ಆದುದರಿಂದ "ಕೊಂದು ಬಿಡೋಣ" ಎಂದು ಹೇಳಿದ. ಆದರೆ ಇನ್ನೊಬ್ಬ "ಬೇಡ, ಒಳ್ಳೆಯವನು, ಇವನಿಗೆ ಹಗ್ಗದಿಂದ ಕೈಕಾಲು ಕಟ್ಟಿಹಾಕಿ ಹೋಗೋಣ, ಈಗ ಇತ್ತ ಯಾರೂ ಬರುವದಿಲ್ಲ. ನಾವು ದೂರ ಹೊರಟು ಹೋಗೋಣ" ಎಂದ. ಮೂವರೂ ದರೋಡೆಕೋರರು ಸೇರಿ ಆ ದಾರಿಹೋಕನ ಕೈಕಾಲು ಕಟ್ಟಿಹಾಕಿ ಹೊರಟರು. ಸ್ವಲ್ಪ ದೂರ ಹೋದಮೇಲೆ ಆ ಮೂವರಲ್ಲಿ ಒಬ್ಬನಿಗೆ ಆ ದಾರಿ ಹೋಕನ ಬಗ್ಗೆ ಕರುಣೆ ಬಂದು ವಾಪಸ್ಸು ಬಂದು ಅವನ ಕೈಕಾಲಿನ ಹಗ್ಗದ ಕಟ್ಟು

ಬಿಟ್ಟ, "ಬೆಳಗಿನವರೆಗೆ ಎಲ್ಲಿಯೂ ಹೋಗಬೇಡ, ಬೆಳಿಗ್ಗೆ ಹತ್ತಿರದಲ್ಲಿ ಮುಖ್ಯರಸ್ತೆ ಇದೆ. ಅಲ್ಲಿಗೆ ಹೋಗಿ ಸೇರಿಕೋ, ನಿನಗೆ ಅಲ್ಲಿ ಬಸ್ಸು ದೊರೆಯುತ್ತದೆ" ಎಂದು ಹೇಳಿಹೋದ.

ಈ ಕತೆ ಹೇಳಿ ರಾಮಕೃಷ್ಣರು ನಾವೆಲ್ಲ ಕಾಡಿನಲ್ಲಿಯ ದಾರಿಹೋಕರು. ಮೂವರು ದರೋಡೆಕೋರರು ನಮ್ಮ ವಿನಾಶಕ್ಕೆ ಕಾರಣವಾಗುವ ತಮಸ್ಸು ಮತ್ತು ಬೆಳಕಿನತ್ತ ಹೋಗುವ ನಮಗೆ ಸ್ವಲ್ಪ ಸಹಾಯ ಮಾಡುವ ರಜಸ್ಸು ಹಾಗೂ ಬೆಳಕಿನತ್ತ ಕರೆದುಕೊಂಡು ಹೋಗಿ ಮಾರ್ಗದರ್ಶನ ನೀಡುವ ಸಾತ್ವಿಕ ಗುಣ ಎಂದು ಹೇಳುತ್ತಿದ್ದರು.

ಸಾಧನೆಗೆ ತಕ್ಕ ಫಲ

ರಾಮಕೃಷ್ಣರು ಸ್ವಲ್ಪ ಸಾಧನೆ ಮಾಡಿದರೂ ಅದಕ್ಕೆ ತಕ್ಕ ಫಲ ಸಿಗುತ್ತದೆ. ಅಂಥದರಲ್ಲಿ ಉತ್ತಮ ಸಾಧನೆಗೆ ಉತ್ತಮ ಫಲ ದೊರೆತೇ ದೊರೆಯುತ್ತದೆ ಎಂದು ತಿಳಿಸಲು ಭಕ್ತರಿಗೆ ಒಂದು ಕಥೆ ಹೇಳಿದರು (04-06-1883).

ಒಬ್ಬ ಬೆಸ್ತ ರಾತ್ರಿ ವೇಳೆ ಕಳ್ಳತನದಲ್ಲಿ ತೋಟವೊಂದಕ್ಕೆ ನುಗ್ಗಿ ಅಲ್ಲಿಯ ಸರೋವರದಲ್ಲಿ ಮೀನು ಕದಿಯಲು ತನ್ನ ಬಲೆ ಬೀಸಿದ. ಅದು ಯಜಮಾನನಿಗೆ ತಿಳಿದು ಪಂಜು ಹೊತ್ತಿಸಿ ಕಳ್ಳನನ್ನು ಸುತ್ತುವರೆದು ಸೇವಕರೊಡನೆ ಬರತೊಡಗಿದ. ಕಳ್ಳ ದೂರದಿಂದ ಅದನ್ನು ಗಮನಿಸಿ, ಅಲ್ಲಿಂದ ಜಾರಿ ಒಂದು ಮರದ ಮೇಲೆ ಬಟ್ಟೆ ಸೇರಿಸಿ, ಮೈಗೆಲ್ಲ ಬೂದಿ ಬಳೆದುಕೊಂಡು ಅದೇ ಮರದಡಿಯಲ್ಲಿ ಧ್ಯಾನ ಸ್ಥಿತಿಯಲ್ಲಿ ಕುಳಿತುಬಿಟ್ಟ. ಯಜಮಾನ ಮತ್ತು ಸೇವಕರು ಕಳ್ಳನಿಗೆ ಹುಡುಕುತ್ತ ಬೂದಿ ಬಳಿದುಕೊಂಡು ಧ್ಯಾನ ಸ್ಥಿತಿಯಲ್ಲಿ ಕುಳಿತ ಸಾಧುವನ್ನು ಕಂಡು ಯಜಮಾನ "ನೋಡಿದಿರಾ, ನಾವು ಕಳ್ಳನನ್ನು ಹುಡುಕಿಕೊಂಡು ಬಂದರೆ ದೇವರು ಗುರುವಿನ ದರ್ಶನ ಮಾಡಿಸಿದ, ಒಳ್ಳೆಯದೇ ಆಯಿತು' ಎಂದು ಒಂದಿಷ್ಟು ದಕ್ಷಿಣೆ ಇರಿಸಿ ನಮಸ್ಕಾರ ಮಾಡಿದ. ಸೇವಕರೂ ಅಡ್ಡ ಬಿದ್ದು ನಮಸ್ಕರಿಸಿ ಹೊರಟು ಹೋದರು. ಮರುದಿನ ತೋಟದಲ್ಲೊಬ್ಬ ಸಾಧು ತಪಸ್ಸಿನಲ್ಲಿದ್ದಾರೆ ಎಂದು ಊರಿನ ಜನರಿಗೆ ತಿಳಿದು ತಂಡೋಪತಂಡದಲ್ಲಿ ಬಂದು ಹಣ್ಣು, ಸಿಹಿ, ತಿಂಡಿ ತಂದು ಹಾರ ಹಾಕಿ ಗೌರವಿಸಿದರು. ಬೂದಿ ಬಳಿದುಕೊಂಡು ಸಾಧುವಿನ ವೇಷದಲ್ಲಿದ್ದ ಕಳ್ಳ ಒಂದು ಕಣ್ಣಿನಲ್ಲಿ ತನ್ನೆದುರಿನ ಕಾಣಿಕೆಗಳ ಗುಡ್ಡೆ ನೋಡಿ ಮನಸ್ಸಿನಲ್ಲಿ 'ಅಲಾ, ಸಾಧುವಿನ ಹಾಗೆ ಒಂದು ದಿನ ವೇಷ ಧರಿಸಿದರೆ ಇಷ್ಟೊಂದು ಗೌರವ, ಕಾಣಿಕೆಗಳು! ಹಾಗಾದರೆ ನಿಜದಲ್ಲಿ ಸಾಧುವಾದರೆ ಖಂಡಿತವಾಗಿಯೂ ಪರಮಾತ್ಮನ ಸಾಕ್ಷಾತ್ಕಾರವೇ ಆಗಬಹುದು, ಬೂಟಾಟಿಕೆ ಸಾಧುವೇಕೆ ಆಗಬೇಕು, ನಾನು ನಿಜದಲ್ಲಿ ಸಾಧುವಾಗಿ ದೇವರಿಗಾಗಿ ಹಂಬಲಿಸುವೆ ಎಂದು ಪ್ರಪಂಚದ ಆಮಿಷಗಳಿಂದ ಮುಕ್ತನಾದ.

*****

ಅದಲು–ಬದಲು

-ಪಾರ್ವತಿ ವಿ. ಹೆಗಡೆ

"ಅದಲೂ- ಬದಲೂ

ಕೊಂಚ- ಕದಲು

ಅವರ್ಬಿಟ್ ಇವರ್ಯಾರ್?

ಇದು ನಾವೆಲ್ಲಾ ಚಿಕ್ಕವರಿರುವಾಗ ಆಡುತ್ತಿದ್ದ "ಕಣ್ಣಾಮುಚ್ಚಾಲೆ" ಆಟದಲ್ಲಿನ ಒಂದು ಹಾಡು. ಹಾಡು ಮುಗಿದಾಗ ಕಣ್ಣು ಕಟ್ಟಿಕೊಂಡಿರುವವನ ಮುಂದೆ ನಿಂತಿರುವ ಎಲ್ಲರೂ ಸ್ಥಾನಪಲ್ಲಟ ಮಾಡಿಕೊಂಡು ಅದಲುಬದಲಾಗಿ ನಿಲ್ಲುತ್ತಿದ್ದರು.

ಈಗ ನಾನು ಹೇಳುತ್ತಿರುವುದು "ಆಟವಲ್ಲ, ಒಂದು ಕಥೆ"

ಸರ್ಕಾರಿ ಕಾಲೇಜೊಂದರಲ್ಲಿ ಸದಾಚಾರ ಸಂಪನ್ನರಾದ ಇಂಗ್ಲಿಷ್ ಭಾಷೆಯ ಅತ್ಯುತ್ತಮ ಉಪನ್ಯಾಸಕ ಶ್ರೀಧರ್. ಎಲ್ಲರನ್ನೂ ಪ್ರೀತಿಯಿಂದ ಕಾಣುವ ಸ್ವಭಾವ ಅವರದಾಗಿತ್ತು. ಕಷ್ಟದಲ್ಲಿರುವವರಿಗೆ ಅವರ ಪರಿಸ್ಥಿತಿ ತಿಳಿದು ಅಯಾಚಿತವಾಗಿ ಎಲ್ಲಾ ರೀತಿಯ ಸಹಾಯವನ್ನು ಮಾಡುತ್ತಿದ್ದರು. ನಾಳಿನ ಸಮಾಜಕಟ್ಟುವ ಯುವಕರೆಂದರೆ ಇವರಿಗೆ "ಅಚ್ಚುಮೆಚ್ಚು". ಯಾವುದೇ ಯುವಕ ದುಶ್ಚಟಗಳ ವಶನಾದರೆ ಅವರ ಮನೆಗೇ ಹೋಗಿ, ಆಪ್ತವಾಗಿ ಬುದ್ಧಿ ಹೇಳಿ ಅವನನ್ನು ಸನ್ಮಾರ್ಗಿಯನ್ನಾಗಿ ಮಾಡಿಯೇ ಮಾಡುತ್ತಿದ್ದರು. ಒಟ್ಟಿನಲ್ಲಿ ಸುತ್ತಲಿನ ಸಮಾಜ ಚೆನ್ನಾಗಿ ಇರುವಲ್ಲಿ ಇವರ ಪಾತ್ರ ಬಹಳ ದೊಡ್ಡದು.

ಇಬ್ಬರು ಹೆಣ್ಣು ಮಕ್ಕಳ ಸುಂದರ ಸಂಸಾರ ಅವರದಾಗಿತ್ತು. ಪತಿ-ಪತ್ನಿಯರು ಬಹಳ ಅನ್ಯೋನ್ಯವಾಗಿದ್ದರು. ಮಕ್ಕಳಿಗೆ ಒಳ್ಳೆಯ ರೀತಿಯ ಸಂಸ್ಕಾರ ಕೊಡುತ್ತಿದ್ದರು. ಮರ್ಯಾದೆಗೆ ಅಂಜಿ ಬಾಳುವೆ ನಡೆಸುತ್ತಿದ್ದರು. ಆಗಾಗ ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿ, ಅನ್ನ ಸಂತರ್ಪಣೆ ಮಾಡುತ್ತಿದ್ದರು. ಪ್ರತಿದಿನ ರಾಮಾಯಣ, ಮಹಾಭಾರತ, ಭಗವದ್ಗೀತೆಗಳ ಪಠಣ ನಡೆಯುತ್ತಿತ್ತು.

ಪ್ರತಿಭಾಸಂಪನ್ನರಾದ ಇವರ ಕೀರ್ತಿ ಜಿಲ್ಲೆಯಾದ್ಯಂತ ಹರಡಿತ್ತು. ಅನೇಕ ವರ್ಷಗಳಿಂದ ತಾಲೂಕಿನ ಬಿ.ಎಡ್ ಕಾಲೇಜಿನ ಪ್ರಶಿಕ್ಷಣಾರ್ಥಿಗಳಿಗೆ ಇಂಗ್ಲಿಷ್ ಭಾಷೆಯ ಮಾದರಿ ಪಾಠಗಳನ್ನು ಕೊಡಲು ಇವರನ್ನೇ ಕರೆಸುತ್ತಿದ್ದರು. ಅಲ್ಲದೆ ಜಿಲ್ಲೆಯಲ್ಲಿ ನಡೆಯುವ ಅನೇಕ ಶೈಕ್ಷಣಿಕ ವಿಚಾರ ಸಂಕಿರಣಗಳಿಗೆ ಇವರೇ ಸಂಪನ್ಮೂಲ ವ್ಯಕ್ತಿ. ಒಟ್ಟಿನಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಅಪಾರವಾದ ಜ್ಞಾನ ಇವರಿಗಿತ್ತಲ್ಲದೆ ಕಲಿಸುವ ಕಲೆಯೂ ಕರಗತವಾಗಿತ್ತು. ಉತ್ತಮ ವಾಗ್ಮಿಗಳಾಗಿದ್ದ ಇವರು ಜಿಲ್ಲೆಯ ಪ್ರಭಾವೀ ಉಪನ್ಯಾಸಕರಾಗಿದ್ದರು.

ಹೀಗಿರುವಾಗ ಅದೇ ಕಾಲೇಜಿನ ವಿಜ್ಞಾನ ವಿಷಯದ ಉಪನ್ಯಾಸಕ ಹುದ್ದೆಗೆ ಕುಮಾರ್ ಎನ್ನುವ ಯುವಕರೊಬ್ಬರು ಬಂದರು. ಒಳ್ಳೆಯ ವಿದ್ಯಾವಂತರಾಗಿದ್ದ ಅವರು ಸುಸಂಸ್ಕೃತ ಮನೆತನದವರಾಗಿದ್ದರು. ಅವರ ಆಕರ್ಷಕ ವ್ಯಕ್ತಿತ್ವಕ್ಕೆ

ಮಾರುಹೋದ ಅನೇಕ ಯುವಕರು ಸದಾ ಅವರ ಹಿಂದೆಯೇ ಇರುತ್ತಿದ್ದರು. ಅವರ ಜನಪ್ರಿಯತೆಯನ್ನು ನೋಡಿ ಶ್ರೀಧರ್ ಅವರಿಗೆ ಬಹಳ ಹೆಮ್ಮೆ ಉಂಟಾಯಿತು. ಯುವಕರಿಗೆ ಬುದ್ಧಿ ಹೇಳುವಾಗ "ಕುಮಾರ್ ಸರ್ ಹಾಗೆ ಆಗಬೇಕು" ಅಂತ ಹೇಳುತ್ತಿದ್ದರು.

ಒಮ್ಮೆ ಹೀಗೆ ಉಪದೇಶದ ಮಧ್ಯೆ ಯುವಕನೊಬ್ಬ "ಗೊತ್ತು ಸರ್, ಕುಮಾರ್ ಸರ್ ನೀವಂದುಕೊಂಡಂತೆ, ಸಾಚಾ ಇಲ್ಲ. ಸಿಗರೇಟ್ ಸೇದ್ತಾರೆ, ಕುಡೀತಾರೆ, ಮಾದಕ ವಸ್ತುಗಳನ್ನು ಸೇವಿಸ್ತಾರೆ. ಅನೇಕ ಯುವಕರನ್ನ ದಾರಿ ತಪ್ಪಿಸ್ತಾ ಇದ್ದಾರೆ." ಎಂದು ತಾನು ಕೇಳಿದ್ದ ವಿಷಯವನ್ನು ಹೇಳಿದನು. ಇದನ್ನು ಕೇಳಿ ಶ್ರೀಧರ್ ಅವರಿಗೆ ಬಹಳ ಬೇಸರವಾಯಿತು. ಕುಮಾರ್ ಅವರನ್ನು ಸದಾಚಾರದ ಮಾರ್ಗದಲ್ಲಿ ತೊಡಗಿಸುವ ಪಣತೊಟ್ಟರು.

ಸಹೋದ್ಯೋಗಿಯೊಬ್ಬರಿಗೆ ಬುದ್ಧಿ ಹೇಳಿ ಪರಿವರ್ತನೆ ಮಾಡುವುದು ಸುಲಭದ ಕೆಲಸವಾಗಿರಲಿಲ್ಲ. ಸುತ್ತಲಿರುವ ಯುವಕರು ಕುಮಾರ್ ಅವರನ್ನು ಒಂಟಿಯಾಗಿ ಭೇಟಿಮಾಡಲು ಆಸ್ಪದವನ್ನೇ ಕೊಡುತ್ತಿರಲಿಲ್ಲ. ವಾರದ ಸತತ ಪ್ರಯತ್ನದಿಂದ ಒಂದು ದಿನ ಆಪ್ತವಾಗಿ ಮಾತನಾಡುವ ಅವಕಾಶ ಸಿಕ್ಕಿತು. "ಕುಮಾರ್, ನಿಮ್ಮ ಜೊತೆ ಮಾತನಾಡಬೇಕು. ಎಲ್ಲಿಗೆ ಹೋಗೋಣ?" ಎಂದು ಕೇಳಿದಾಗ ಅವರೇ "ಬನ್ನಿ ಸರ್" ಎಂದು ತಮ್ಮ ಜೊತೆ ಕರೆದುಕೊಂಡು ಹೋದರು.

ಅದೊಂದು ಬಾರ್. ಸಿಗರೇಟು ಎಳೆದು ಸೇದುತ್ತಾ, ಅವರಿಗೂ ನೀಡುತ್ತಾ, "ಈಗ ಹೇಳಿ ಸರ್, ಏನ್ ಸಮಾಚಾರ?" ಎಂದು ಕೇಳಿದರು. ಶ್ರೀಧರ್ ತಮ್ಮ ಕಣ್ಣು-ಕಿವಿಗಳನ್ನು ತಾವೇ ನಂಬದಾದರು. ಆಸಾಮಿ ಸುಲಭವಾಗಿ ಮಣಿಯುವುದಿಲ್ಲ ಎಂದು ಗೊತ್ತಾಯಿತು. "ನನಗೆ ಇದೆಲ್ಲಾ ಅಭ್ಯಾಸವಿಲ್ಲಪ್ಪ, ಆರೋಗ್ಯಕ್ಕೂ ಒಳ್ಳೆಯದಲ್ಲ'" ಎಂದಷ್ಟೇ ಹೇಳಿದರು. ಆಗ ಕುಮಾರ್ ಜೋರಾಗಿ ನಕ್ಕು "ಯಾವುದು ಒಳ್ಳೆಯದು ಹೇಳಿ ಸರ್" ಎಂದು ಕೇಳಲು ಪ್ರಾರಂಭಿಸಿದಾಗ "ನಾಳೆ ಸಿಗೋಣಪ್ಪಾ" ಎಂದು ಹೊರಬಂದರು.

ಆದರೂ ಅವರನ್ನು ಬದಲಾಯಿಸಲೇಬೇಕೆಂಬ ಛಲ!. "ಪ್ರತಿದಿನ ಅವರನ್ನು ಅನುಸರಿಸಿ ಏನೇ ಆದರೂ ಸನ್ಮಾರ್ಗಕ್ಕೆ ಎಳೆಯಲೇ ಬೇಕು". ಎಂದು ತೀರ್ಮಾನಿಸಿದರು. ಅವರ ಜೊತೆಯಲ್ಲಿ ಕುಳಿತು ಅವರ ದುಶ್ಚಟಗಳನ್ನು ನೋಡಿ, ಆಸ್ವಾದಿಸುವ ಪರಿಸ್ಥಿತಿ ಶ್ರೀಧರ್ ಅವರದಾಯಿತು.

ಪ್ರತಿಯೊಬ್ಬರೂ ಪರಿಸ್ಥಿತಿಯ ದಾಸರು. ಒಂದು ದುರ್ಬಲ ಕ್ಷ ಣ!!

"ಪ್ರತಿಭಾವಂತರಾಗಿ, ವಿಜ್ಞಾನದ ಉಪನ್ಯಾಸಕರಾಗಿ, ಸುಸಂಸ್ಕೃತರಾಗಿ, ಯಾಕೆ ಇವರಿಂದ ಈ ಚಟ ಬಿಡಲಾಗುತ್ತಿಲ್ಲ. ಅಂಥದ್ದೇನಿದೆ ಇದರಲ್ಲಿ! ಎಂದು ಯೋಚಿಸಿದ ಶ್ರೀಧರ್ ಕುತೂಹಲದಿಂದ ಮಾದಕವಸ್ತುವನ್ನು ಕೊಂಚ ಸೇವಿಸಿದರು. ವಿದ್ಯುತ್ ಸಂಚಾರವಾದಂತೆ, ಮೈ-ಮನವೆಲ್ಲಾ ಝುಮ್ ಎಂದಿತು! ನರನಾಡಿಗಳೆಲ್ಲಾ ಸಡಿಲವಾಗಿ ಹಗುರಾಯಿತು.

ಇದಾದ ಮೇಲೆ ಒಂದು ದಿನ ಆ ಮಾದಕದ್ರವ್ಯದ ಸೆಳೆತವುಂಟಾಗಿ, ತಾವೇ ಸ್ವತಹ ಆಸೆಪಟ್ಟು, ಅವರ ಜೊತೆ ಸೇರಿ ಮತ್ತೆ ಸೇವಿಸಿದರು. "ಸಂಗಾತ್ ಸಂಜಾಯತೆ ಕಾಮ:" ಅನ್ನುವಂತೆ ಮಾದಕದ್ರವ್ಯ ಹಾಗೂ ಕುಮಾರ್ ಅವರ ಸಂಗ ನಿರಂತರವಾಯಿತು. ಇಬ್ಬರದೂ ಒಂದೇ ದಾರಿಯಾಯಿತು. ಕುಮಾರ್ ಮತ್ತು ಶ್ರೀಧರ್ ಅತ್ಯಾಪ್ತರಾದರು.

ಈ ನಡುವೆ ಕುಮಾರ್ ಅವರ ಮನೆಯಲ್ಲಿ ದುರಂತವೊಂದು ನಡೆಯಿತು. ಅವರ ತಂದೆ ಹಾರ್ಟ್ ಅಟ್ಯಾಕ್ ಆಗಿ ಅಕಾಲ ಮರಣಕ್ಕೆ ತುತ್ತಾದರು. ಇಬ್ಬರು ತಂಗಿಯರ ಜವಾಬ್ದಾರಿ ಅವರ ಮೇಲಿತ್ತು. ತಾಯಿಯ ಗೋಳಂತೂ ಸಹಿಸಲು ಅಸಾಧ್ಯವಾಗಿತ್ತು. ದುಶ್ಚಟಗಳನ್ನು ಬಿಡುವಂತೆ ಮಗನಿಗೆ ಆಣೆ, ಭಾಷೆ, ಹಾಕಿಸಿದಳು. ಹೀಗಾಗಿ ಅವರು ವೈದ್ಯರ ಸಲಹೆ ಪಡೆದು, ಎಲ್ಲಾ ಚಟಗಳನ್ನೂ ಸಂಪೂರ್ಣವಾಗಿ ನಿಲ್ಲಿಸಿದರು. ಅಲ್ಲದೇ ಶ್ರೀಧರ್ ಅವರಿಗೂ ಚಟವನ್ನು ಬಿಡಲು ಪರಿಪರಿಯಾಗಿ ಕೇಳಿಕೊಂಡರು.

ಆದರೆ ಶ್ರೀಧರವರಿಗೆ ಮಾತ್ರ ಆ ಚಟ ಬಿಡಲಾಗದ ನಂಟಾಗಿತ್ತು.! "ಕುಮಾರ್" ಅವರನ್ನು ಮೇಲೆತ್ತಲು ಹೋಗಿ, "ಶ್ರೀಧರ್" ತಾವೇ ಆಳಕ್ಕೆ ಬಿದ್ದರು.

ಈಗ ಕುಮಾರ್, ಶ್ರೀಧರ್ ಆದರು. ಶ್ರೀಧರ್, ಕುಮಾರ್ ಆಗಿ ಬದಲಾದರು.

ನ ಜಾತು ಕಾಮ: ಕಾಮಾನಾಮ್
ಉಪಭೋಗೇನ ಶಾಮ್ಯತಿ!
ಹವಿಷಾ ಕೃಷ್ಣವರ್ತ್ಮೇವ
ಭೂಯ:ಏವಾಭಿವರ್ಧತೆ!!

ಆಸೆಯೆನ್ನುವುದು ಅದನ್ನು ಪೂರೈಸಿದ ಮಾತ್ರಕ್ಕೆ ತೃಪ್ತವಾಗುವುದಿಲ್ಲ. ಹವಿಸ್ಸಿನಿಂದ ಇನ್ನೂ ಹೆಚ್ಚಾಗುವ ಕಪ್ಪಾದ ಹೊಗೆಯಂತೆ ಹೆಚ್ಚುತ್ತಲೇ ಹೋಗುತ್ತದೆ.

ಯಯಾತಿ ಎಂದೋ ಹೇಳಿದ ಮಾತು ಇಂದಿಗೂ ಸತ್ಯ!!

*****

ಬಯಸಿದ್ದೇ ಬಂದದ್ದು

- ಗುರುರಾಜ ಶಾಸ್ತ್ರಿ

ನನಗೆ ಚೆನ್ನೈಗೆ ವರ್ಗಾವಣೆಯಾಗಿ ಒಂದು ವರ್ಷವಾಗಿತ್ತು. ಒಂದು ಭಾನುವಾರ ಚೆನ್ನೈ ಕನ್ನಡ ಸಂಘದಲ್ಲಿ ಶ್ರೀ ವಿದ್ಯಾಭೂಷಣರ ಸಂಗೀತ ಸಂಜೆ. ನನ್ನ ಯಮಾಹಾ ಗಾಡಿ ಹತ್ತಿ ಟಿ.ನಗರ್‌ನಲ್ಲಿದ್ದ ಕನ್ನಡ ಸಂಘಕ್ಕೆ ಹೊರಟೇಬಿಟ್ಟೆ.

ಅಲ್ಲಿ ಸಂಘದ ಆವರಣದೊಳಗೆ ಗಾಡಿ ನಿಲ್ಲಿಸುತ್ತಿದ್ದಾಗ, ಪಕ್ಕದಲ್ಲಿ ಮತ್ತೊಂದು ದ್ವಿಚಕ್ರ ವಾಹನದಲ್ಲಿ ಬಂದ ವ್ಯಕ್ತಿ "ಇಲ್ಲಿ ಗಾಡಿ ನಿಲ್ಲಿಸಬಹುದಾ" ಅಂತ ಕನ್ನಡದಲ್ಲಿ ಕೇಳಿದ. "ಓ ಅದಕ್ಕೇನಂತೆ, ನಿಲ್ಲಿಸಿ, ತೊಂದರೆ ಇಲ್ಲ" ಎಂದು ನನ್ನ ಉತ್ತರ. ನನಗಿಂತ ವಯಸ್ಸಿನಲ್ಲಿ ಸುಮಾರು 10 ವರ್ಷ ಚಿಕ್ಕವನಿರಬಹುದು ಈ ವ್ಯಕ್ತಿ. "ನಾನು ವಿಜಯ ಕುಮಾರ್, ಸಂಗೀತ ಕಾರ್ಯಕ್ರಮಕ್ಕೆ ಬಂದಿದ್ದೀನಿ" ಎಂದು ಅವನು ಹೇಳಿದಾಗ ನಾನು ನನ್ನ ಪರಿಚಯ ಮಾಡಿಕೊಂಡೆ.

ಕಾರ್ಯಕ್ರಮ ಆರಂಭವಾಗಲು ಇನ್ನೂ ಅರ್ಧ ಗಂಟೆ ಸಮಯವಿತ್ತು. ಅಷ್ಟರಲ್ಲೆ ನಮ್ಮಿಬ್ಬರ ಮಾತುಕತೆ ಸಾಕಷ್ಟಾಗಿ, ವಿಜಯ್ ಕೂಡಾ ನನ್ನ ಹಾಗೇ ಬೆಂಗಳೂರಿನಿಂದ ಕೆಲಸಕ್ಕಾಗಿ ಚೆನ್ನೈಗೆ ಬಂದಿರುವುದೆಂದು ಮತ್ತು ಅವನ ಅಪ್ಪ ಅಮ್ಮನ ಬಗ್ಗೆ, ಅವನ ಕೆಲಸದ ಬಗ್ಗೆ, ಅವನು ಚೆನ್ನೈನಲ್ಲಿ ಉಳಿದುಕೊಂಡಿರುವ ರೂಮಿನ ಬಗ್ಗೆ ಎಲ್ಲಾ ತಿಳಿದುಹೋಯಿತು. "ನಮ್ಮ ರೂಮಿನಲ್ಲಿ ಅಡುಗೆ ಮಾಡಿಕೊಳ್ಳುವ ಹಾಗಿಲ್ಲ, ನಮಗೆ ದಿನಾ ಹೊರಗಡೆಯದೇ ಊಟ" ಎಂದು ಅವನು ಹೇಳಿದಾಗ ಪಾಪ ಅನಿಸಿತು.

ಸುಮಾರು ಎರಡು ಗಂಟೆಗಳ ಕಾಲ ವಿದ್ಯಾಭೂಷಣರ ಕಛೇರಿ ನಡೆಯಿತು. ನಂತರ ನಾನು ಮನೆಗೆ ಹೊರಡಲು ತಯಾರಾದೆ. ಅಂದು ರಾತ್ರಿಗೆ ಟೊಮೆಟೋ ಸಾರು ಮಾಡಬೇಕೆಂದು ನಿರ್ಧರಿಸಿದ್ದೆ. ಹಾಗಾಗಿ ವಿಜಯ್‌ಗೆ ನನ್ನ ಮನೆಗೆ ಬರಲು ಆಹ್ವಾನ ಕೊಟ್ಟೆ. ಆಹ್ವಾನ ಒಪ್ಪಿದ ವಿಜಯ್, ಆದರೆ ಅದಕ್ಕೆ ಮುಂಚೆ ಇಲ್ಲಿ ವೇದಿಕೆಯ ಮೇಲೆ ಸ್ವಲ್ಪ ಕೆಲಸವಿದೆ ಬನ್ನಿ ಎಂದು ನನ್ನನ್ನು ಕರೆದುಕೊಂಡು ಹೋದ. ಅಲ್ಲಿ ವೇದಿಕೆಯ ಪರದೆಯ ಹಿಂದೆ ವಿದ್ಯಾಭೂಷಣರು ಎರಡು ಗಂಟೆಗಳ ಕಛೇರಿಯ ನಂತರ ಸುಸ್ತಾಗಿ ಕುಳಿತಿದ್ದರು. "ನಾನು ಬೆಂಗಳೂರಿನವನೇ ಸಾರ್, ನಿಮ್ಮ ಅಭಿಮಾನಿ, ನಿಮ್ಮ ಜೊತೆ ಒಂದು ಫೋಟೋ ತೆಗೆಸಿಕೊಳ್ಳಬೇಕು" ಎಂದು ವಿದ್ಯಾಭೂಷಣರನ್ನು ಮನವಿ ಮಾಡಿದ. ಅವರು ಒಲ್ಲದ ಮನಸ್ಸಿನಿಂದ ಏದುಸಿರು ಬಿಡುತ್ತಾ ಮೇಲೆದ್ದು ನಿಂತರು. ಈ ಕಡೆ ಬನ್ನಿ ಸಾರ್, ಅಲ್ಲಿ ಬೆಳಕಿಲ್ಲ, ಈ ಫೋಟೋ ಸರಿಯಾಗಿ ಬಂದಿಲ್ಲ, ಇನ್ನೊಂದು ಫೋಟೋ ಬೇಕು ಹೀಗೆ ಮಾತನಾಡುತ್ತಾ ಐದಾರು ಫೋಟೋಗಳನ್ನು ವಿಜಯ್ ತನ್ನ ಮೊಬೈಲಿನಿಂದ ನನ್ನ ಕೈಲಿ ತೆಗೆಸಿದ. ವಿದ್ಯಾಭೂಷಣರು ವಾಪಸು ಕುಳಿತುಕೊಳ್ಳಲು ಯೋಚಿಸುತ್ತಿದ್ದಾರೆ. ಆದರೆ ಇವ ಅವರನ್ನು ಬಿಡುತ್ತಲೇ ಇಲ್ಲ. ಕಡೆಗೂ ಅವರ ಮೇಲೆ ದಯೆ ಬಂದು ನಾನೇ ವಿಜಯ್ ನನ್ನು ಬಲವಂತವಾಗಿ ಆಚೆಗೆ ಹೊರಡಿಸಿಕೊಂಡು ಬಂದೆ. ಅಂದು ನಮ್ಮ ಮನೆಗೆ ಹೋಗಿ ಅನ್ನ, ಸಾರು ಮಾಡಿ, ಬಿಸಿ ಬಿಸಿಯಾಗಿರುವಾಗಲೇ ಇಬ್ಬರೂ ತಿಂದು ಮುಗಿಸಿ, ವಿಜಯ್ ತನ್ನ ರೂಮಿಗೆ ಹೊರಟಾಗ ರಾತ್ರಿ 11 ಗಂಟೆ.

ದಿನಗಳು ಉರುಳುತ್ತಿದ್ದಂತೆ ತನ್ನ ಪ್ರೀತಿಯ ಹಾಗೂ ಆದರ್ಶದ ಮಾತುಗಳಿಂದ ತುಂಬಾ ಹತ್ತಿರವಾದ ವಿಜಯ್. ಪ್ರತಿ ಶನಿವಾರ ಮಧ್ಯಾಹ್ನ ನನ್ನ ಮನೆಗೆ ಬಂದರೆ ಮತ್ತೆ ಅವನು ಅವನ ರೂಮಿಗೆ ಹೊರಡುತ್ತಿದ್ದದ್ದು ಭಾನುವಾರ ರಾತ್ರಿಯೇ. ಬ್ಯಾಂಕ್ ಕೊಟ್ಟಿದ್ದ ದೊಡ್ಡ ಮನೆಯಲ್ಲಿ ಒಬ್ಬನೇ ಇದ್ದ ನನಗೆ ವಾರದ ಕೊನೆಯಲ್ಲಿ ಜೊತೆಗಿರಲು ಒಬ್ಬ ಒಳ್ಳೆಯ ಗೆಳೆಯ ದೊರೆತಂತಾಯಿತು. ವಿಜಯ್‌ಗೆ ಟಿ.ವಿಯಲ್ಲಿ ಸಿನಿಮಾ ನೋಡೋದು ಅಂದರೆ ತುಂಬಾ ಖುಷಿ. ನನ್ನ ಮನೆಯ ಟಿವಿ ಅವನು ಬಳಸಿದಷ್ಟು ನಾನೂ ಉಪಯೋಗಿಸಿರಲಿಲ್ಲ. ಅಷ್ಟೇ ಅಲ್ಲ, ಶನಿವಾರ ಮತ್ತು ಭಾನುವಾರ ನನ್ನ ಮನೆಯ ಅಡುಗೆ ಮತ್ತು ಸ್ವಚ್ಛತೆ ಕೆಲಸಗಳಿಗೂ ನನ್ನೊಂದಿಗೆ ಕೈ ಜೋಡಿಸುತ್ತಿದ್ದ. ಭಾನುವಾರಗಳಂದು ಮಧ್ಯಾಹ್ನ ಒಳ್ಳೆಯ ಊಟ ಮಾಡಿ, ಒಂದು ಸುತ್ತು ಮಲಗಿ, ಸಂಜೆಗೆ ಸುಮಾರು ಐದು ಕಿಲೋಮೀಟರ್ ವಾಕಿಂಗ್ ಹೋಗಿ, ಹಾಗೆಯೇ ಅಲ್ಲಿದ್ದ ಅಡ್ಯಾರ್ ಆನಂದ ಭವನದಲ್ಲಿ ಕಾಫಿ ಕುಡಿದು ಮನೆಗೆ ಬರುತ್ತಿದ್ದದ್ದು ಇನ್ನೂ ಮರೆತಿಲ್ಲ.

ಹೀಗಿರುವಾಗ ಒಮ್ಮೆ ಚೆನ್ನೈಗೆ ನನ್ನ ಅಣ್ಣ, ಅಮೇರಿಕಾ ವೀಸಾ ಕೆಲಸಕ್ಕೆ ಬಂದಿದ್ದು ವುಡ್‌ಲ್ಯಾಂಡ್ಸ್ ಹೋಟಲಿನಲ್ಲಿ ಉಳಿದುಕೊಂಡಿದ್ದ. ನಾನು ಮತ್ತು ವಿಜಯ್ ಅವನನ್ನು ಭೇಟಿಮಾಡಲು ಹೋಗಿ ಆ ಹೋಟಲ್ಲಿನಲ್ಲೆ ಊಟಕ್ಕೆ ಕುಳಿತೆವು. ಅಲ್ಲಿ ಸೋಫಾ ಮೇಲೆ ಏನನ್ನೋ ಯೋಚನೆ ಮಾಡುತ್ತಾ ಡಾ.ಪಿ.ಬಿ.ಶ್ರೀನಿವಾಸ್ ಅವರು ಕುಳಿತಿದ್ದರು. ತಾನು ಬೇಗನೆ ಊಟ ಮಾಡಿ, ನನಗೂ ಬೇಗನೇ ಊಟ ಮಾಡಲು ಹೇಳಿ ಪಿ.ಬಿ.ಶ್ರೀನಿವಾಸ್ ಅವರ ಪಕ್ಕದಲ್ಲಿ ನಿಂತೇಬಿಟ್ಟ ವಿಜಯ್. ಬನ್ನಿ ಗುರು, ಒಂದು ಫೋಟೋ ತೆಗೀರೀ ಎಂದು, "ಸಾರ್ ಸ್ವಲ್ಪ ಎದ್ದು ನಿಲ್ತೀರಾ" ಅಂತ ಪಿಬಿಎಸ್ ಅವರಿಗೂ ಹೇಳಿದ. ಪಾಪ ಅವರದೇ ಲೋಕದಲ್ಲಿ ಮುಳುಗಿದ್ದ ಅವರು ಅಲ್ಲಿ ಏನಾಗುತ್ತಿದೆ ಎಂದು ಅರಿಯುವ ಮುನ್ನ ಅವರೊಡನೆ ಇವನ ಫೋಟೋ ಕ್ಲಿಕ್ಕಾಗಿತ್ತು.

ಚಿತ್ರರಂಗ, ಸಂಗೀತ ಹೀಗೆ ಯಾವುದೇ ಕಲಾವಿದರನ್ನು ಕಂಡರೆ, ಇವನಿಗೇನೋ ಗೌರವ, ಆದರೆ ದಯೆ ಇರಲಿಲ್ಲ. ಅವರು ಎಷ್ಟೇ ಬಳಲಿದ್ದರೂ ಇವನು ಫೋಟೋಗೆ ಕರೆದಾಗ ಅವರು ಬರಲೇಬೇಕು. ಆಗ ನನಗೆ ಈ ಫೋಟೋಗಳ ಹುಚ್ಚು ಅಷ್ಟಿರಲಿಲ್ಲ. ಈಗೀಗ ಒಮ್ಮೊಮ್ಮೆ ನಾನು ಸೆಲ್ಫಿ ತೆಗೆದುಕೊಳ್ಳುತ್ತಿದ್ದಾಗ ನನ್ನ ಗೆಳೆಯರು ಬೈದರೆ, ನನಗೆ ವಿಜಯ್ ನೆನಪಾಗುತ್ತಾನೆ.

ಚೆನ್ನೈನಲ್ಲೇ ಇದ್ದರೂ, ಅವನು ಬೆಂಗಳೂರಿನಲ್ಲಿರುವ ತನ್ನ ತಂದೆ, ತಾಯಿ, ತಂಗಿ ಇವರ ಬಗ್ಗೆಯೇ ಹೆಚ್ಚು ಯೋಚಿಸುತ್ತಿದ್ದ ಮತ್ತು ಮಾತನಾಡುತ್ತಿದ್ದ. ಬೆಂಗಳೂರಿಗೆ ಹೋಗಿ ಅವರಿಗೆ ಸಹಾಯ ಮಾಡಲು ಆಗುತ್ತಿಲ್ಲವಲ್ಲ ಎಂಬ ಕೊರಗು ಅವನಿಗೆ ಯಾವಾಗಲೂ ಇತ್ತು. ಹೀಗಿರುವಾಗ ಒಮ್ಮೆ ಅವನಿಗೆ ಬೆಂಗಳೂರಿನಲ್ಲಿ ಒಳ್ಳೆಯ ಕಂಪನಿಯಲ್ಲಿ ಕೆಲಸ ಸಿಕ್ಕಿತು. ಬಹುಶಃ ಈ ಸಂತೋಷದ ಸುದ್ದಿಯನ್ನು ಅವನು ಮೊದಲು ಹಂಚಿಕೊಂಡಿದ್ದು ನನ್ನಲ್ಲೇ, ಏಕೆಂದರೆ ಅಷ್ಟು ಜೀವನಕ್ಕೆ ಹತ್ತಿರವಾಗಿದ್ದ ವಿಜಯ್. ಅವನು ಮತ್ತೆ ತನ್ನ ತಂದೆ ತಾಯಿಯೊಂದಿಗೆ ಇರುತ್ತಾನೆ ಎಂಬುದು ಕೇಳಿ ನನಗಂತೂ ತುಂಬಾ ಸಂತೋಷವಾಯಿತು. ನೀವು ಬೆಂಗಳೂರಿಗೆ ಹೋಗಿ, ಸದ್ಯದಲ್ಲೇ ನಾನೂ ಬೆಂಗಳೂರಿಗೆ ಬರುತ್ತೇನೆ ಎಂದು ಹೇಳಿದೆ. ಆದರೆ ಕರ್ನಾಟಕಕ್ಕೆ ವಾಪಸ್ ಆಗುವುದು ನನಗೆ ಅಸಾಧ್ಯ ಎಂದು ಗೊತ್ತಿತ್ತು.

ಒಂದು ದಿನ ವಿಜಯ್ ಫೋನ್ ಮಾಡಿ 'ತನಗೆ ಮದುವೆ ನಿಶ್ಚಯವಾಗಿದೆ, ನಮ್ಮ ಅತ್ತೆ ಮಾವ ಚೆನ್ನೈಗೆ ರೇಷ್ಮೆ ಸೀರೆ ಖರೀದಿಸಲು ಬರುತ್ತಿದ್ದಾರೆ' ಎಂದು ಹೇಳಿದ. 'ನನ್ನ ಮನೆ ದೊಡ್ಡದಾಗಿದೆ, ಅವರು ಬೇಕಾದರೆ ನನ್ನ ಮನೆಯಲ್ಲೇ ಉಳಿದುಕೊಳ್ಳಬಹುದು' ಎಂದು ನಾನು ಹೇಳಿದೆ. ಆಗ ಅವನು "ಇಲ್ಲ ಅವರು ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಮನೆಗೆ ಹೋಗುತ್ತಾರೆ" ಅಂದ. ಅವನು ಹೇಳಿದ್ದು ತಮಾಷೆ ಎಂದು ತಿಳಿದು ನಾನು ನಕ್ಕು ಫೋನ್ ಕಟ್ ಮಾಡಿದೆ.

ಅವನ ಮದುವೆ ದಿನ ಬಂದೇಬಿಡ್ತು. ನಾನು ಕೆಲಸಕ್ಕೆ ರಜೆ ಹಾಕಿ, ಬೆಂಗಳೂರಿಗೆ ಬಂದೆ. ಶಂಕರಪುರಂನಲ್ಲಿ ಇದ್ದ ದೊಡ್ಡ ಛತ್ರದಲ್ಲಿ ಇವನ ಮದುವೆ. ನನ್ನ ಅಣ್ಣನ ಮಗನನ್ನೂ ಮದುವೆಗೆ ಕರೆದುಕೊಂಡು ಹೋದೆ. ಮದುವೆ ಹಾಲ್ ತುಂಬಾ ಜನ, ಎಲ್ಲಿ ನೋಡಿದರೂ ಬರೇ ಚಿತ್ರರಂಗ ಹಾಗೂ ಕಿರುತೆರೆ ಧಾರಾವಾಹಿಯವರೇ. ಅಣ್ಣನ ಮಗನಂತೂ "ಅಲ್ಲಿ ನೋಡು ಟಿ.ಎನ್.ಸೀತಾರಾಮ್, ಇಲ್ಲಿ ನೋಡು ಸಿಹಿಕಹಿ ಚಂದ್ರು" ಎಂದು ಹೇಳುತ್ತಾ ರವಿಚಂದ್ರನ್, ಎಸ್.ಪಿ.ಬಿ, ನಾಗಾಭರಣ ಇನ್ನೂ ಹಲವರನ್ನು ಮದುವೆಯ ಮಂಟಪದ ಮೇಲೆ ನೋಡುತ್ತಾ ಕುಳಿತೆವು.

ಯಾವ ವ್ಯಕ್ತಿ ಆ ದಿನ ಚೆನ್ನೈನಲ್ಲಿ 'ಸಾರ್ ಫೋಟೋ, ಸಾರ್ ಫೋಟೋ' ಎಂದು ವಿದ್ಯಾಭೂಷಣರನ್ನೂ, ಪಿಬಿ. ಶ್ರೀನಿವಾಸರನ್ನೂ ಬೇಡಿಕೊಳ್ಳುತ್ತಿದ್ದನೋ, ಅಂತಹ ವ್ಯಕ್ತಿಗೆ ತನ್ನ ಮದುವೆಯಲ್ಲಿ ಇಡೀ ಚಿತ್ರರಂಗವೇ ಹಾಜರಾಗಿರುತ್ತದೆಂಬ ಕಲ್ಪನೆಯೂ ಇರಲಾರದು. ಇವನು ಮದುವೆ ಮಾಡಿಕೊಂಡ ಹುಡುಗಿ ಶೃತಿ. ರಂಗಭೂಮಿ ಹಾಗೂ ಕಿರುತೆರೆಯ ಖ್ಯಾತ ಕಲಾವಿದೆ ಶ್ರೀಮತಿ ಸುಂದರಶ್ರೀ ಹಾಗೂ ಈ ಟಿವಿ ಮುಖ್ಯ ನಿರ್ವಾಹಕರಾಗಿದ್ದ ಶ್ರೀ ಸುರೇಂದ್ರನಾಥರ ಏಕೈಕ ಪುತ್ರಿ.

ಈಗಲೂ ತನ್ನ ಹೆಂಡತಿ ಉಪ್ಪಿಟ್ಟು ಮಾಡಿದರೆ, "ಏನೇ ಹೇಳು, ಗುರು ಚೆನ್ನೈನಲ್ಲಿ ಉಪ್ಪಿಟ್ಟು ಮಾಡಿದ ಹಾಗಿಲ್ಲ" ಎನ್ನುತ್ತಾರೆ ಎಂದು ಅವನ ಪತ್ನಿ ಒಮ್ಮೆ ಹೇಳಿದ್ದರು. ದೂರದ ಚೆನ್ನೈನಲ್ಲಿ ಇದ್ದಾಗ ಪ್ರತಿ ವಾರ ಭೇಟಿ ಮಾಡುತ್ತಿದ್ದ ನಾನು ಹಾಗೂ ವಿಜಯ್ ಈಗ ನಮ್ಮದೇ ಬೆಂಗಳೂರಿನಲ್ಲಿ ವರ್ಷಕ್ಕೊಮ್ಮೆ ಭೇಟಿಯಾಗಲೂ ಸಾಧ್ಯವಾಗುತ್ತಿಲ್ಲ. ಕಶ್ವಿ ಹಾಗೂ ಶವಿಕ್ ಎಂಬ ಹೆಸರಿನ ಎರಡು ಮಕ್ಕಳೊಂದಿಗೆ ಅವನ ಸಂಸಾರದ ಜವಾಬ್ದಾರಿಯೂ ಹೆಚ್ಚಾಗಿದೆ.

ಮೊನ್ನೆ ಎಂ.ಎಸ್.ನರಸಿಂಹಮೂರ್ತಿಯವರ ಮನೆಗೆ ಹೋಗಿದ್ದಾಗ ಅವರೊಂದಿಗೆ ಫೋಟೋ ತೆಗೆಸಿಕೊಂಡ ಸಮಯದಲ್ಲಿ ನೆನಪಾಯಿತು ನನ್ನ ಮತ್ತು ವಿಜಯ ಕುಮಾರ್‌ನ ಚೆನ್ನೈ ದಿನಗಳು. ಆ ನೆನಪುಗಳ ಮೆಲುಕುಹಾಕುತ್ತಾ ಹೊರಬಂದದ್ದೇ ಈ ಲೇಖನ.

*****

ಕತೆ ಬಂತು ಕತೆ

- ಶೀಲಾ ಅರಕಲಗೂಡು

ಇತ್ತೀಚೆಗೆ ನಾನು ಸಾಕಷ್ಟು ಕತೆಗಳನ್ನು ಓದುತ್ತಿದ್ದೇನೆ ಹಾಗೂ ಅದಕ್ಕಿಂತ ಹೆಚ್ಚಾಗಿ ಕ್ಲಬ್ ಹೌಸ್ ಮೂಲಕ ಕೇಳಿಸಿಕೊಳ್ಳುತ್ತಿದ್ದೇನೆ. ಅಲ್ಲಿ ಅನೇಕರು ಅದ್ಭುತವಾಗಿ ಕತೆಗಳನ್ನು ಓದುತ್ತಾರೆ. ಕೇಳ್ತಾ ಕೇಳ್ತಾ ನನಗನ್ನಿಸಿತು, 'ನಾನೂ ಏಕೆ ಒಂದು ಕತೆ ಬರೀಬಾರ್ದು?' ಅಂತ. 'ಎಂದೂ ಕತೆ ಬರೆಯದ ನನ್ನಿಂದ ಬರೆಯೋಕೆ ಸಾಧ್ಯವೇ?' ಅಂತ ಕೂಡಾ ಯೋಚಿಸದೆ ಬರೆಯಲು ನಿರ್ಧರಿಸಿದೆ.

ಆಲೋಚನೆ ಬಂದ ಮೇಲೆ ಮತ್ತೆ ತಡವೇಕೆ? ಎಂದುಕೊಂಡು ತುಂಬಾ ಸಂಭ್ರಮದಿಂದ ತಯಾರಿ ಮಾಡಿ ಕೊಳ್ಳಲಾರಂಭಿಸಿದೆ.

ಬೆಳಿಗ್ಗೆ ಬೇಗನೇ ಎದ್ದೆ. 'ದಿನಾ ಲೇಟಾಗಿ ಏಳ್ತೀರಾ?' ಅಂತ ಕೇಳ್ಬೇಡಿ. ಪ್ರತಿದಿನ ಬೇಗನೇ ಏಳುವ ಅಭ್ಯಾಸ ಮಾಡಿಕೊಂಡಿದ್ದೇನೆ. ಬೆಳಗಿನ ಕಾರ್ಯಕ್ರಮಗಳನ್ನು ಮುಗಿಸಿದ ನಂತರ ಪೇಪರ್ ಓದಿ, ಸ್ನಾನ-ತಿಂಡಿ ಇತ್ಯಾದಿಗಳನ್ನು ಮುಗಿಸಿದೆ. ದೇವರ ಮುಂದೆ ಮತ್ತೊಮ್ಮೆ ಶ್ರದ್ಧಾ ಭಕ್ತಿಯಿಂದ ಕೈಮುಗಿದು, 'ದೇವರೇ, ನನ್ನಿಂದ ಒಂದು ಒಳ್ಳೆಯ ಕತೆ ಸೃಷ್ಟಿಯಾಗುವಂತೆ ಕರುಣಿಸಪ್ಪಾ' ಅಂತ ಬೇಡಿದೆ. ನನ್ನ ಬೇಡಿಕೆಯನ್ನು ಅವ ಖಂಡಿತ ನಿರಾಕರಿಸಲಾರ ಎಂಬ ನಂಬಿಕೆಯಿಂದ ಕತೆಯ ಸೃಷ್ಟಿಗೆ

ಮನಸ್ಸನ್ನು ಸಿದ್ಧ ಮಾಡಿಕೊಂಡೆ. 'ಇವಳ ಕತೆ ಓದೋ ಕರ್ಮ ಯಾರಿಗಿದ್ದೀತು?' ಅಂತ ದೇವರು ಮನಸ್ಸಿನಲ್ಲೇನಾದ್ರೂ ಅಂದುಕೊಂಡಿರಬಹುದೇ? ಎಂಬ ಅನುಮಾನವೂ ಬಂತು ಅನ್ನಿ. ಆದರೂ ಮಾಡಿದ ನಿರ್ಧಾರವನ್ನು ಕಾರ್ಯರೂಪಕ್ಕೆ ತಂದುಬಿಡೋಣ ಅಂತ ಕೊಠಡಿಗೆ ಬಂದೆ.

ಟೇಬಲ್ ಮೇಲೆ ಹೇರಿದ್ದ ಹಲವಾರು ಪುಸ್ತಕಗಳನ್ನು ಆಚೀಚೆ ಸರಿಸಿ ಬರೆಯಲು ಜಾಗ ಮಾಡ್ಕೊಂಡೆ. ಈಗ ಬಿಡಿ, ಬರೆಯೋದೆಲ್ಲ ಮೊಬೈಲಿನಲ್ಲೇ ಆದ್ರಿಂದ ಸ್ವಲ್ಪ ಜಾಗವಾದರೂ ಸಾಕೇ ಸಾಕು. ನನ್ನ ತಲೆ ಖಾಲಿ ಇದ್ದರೂ ಮೊಬೈಲ್ ಸಂಪೂರ್ಣ ಚಾರ್ಜ್ ಆಗಿತ್ತು. ನೋಟ್ಸ್ ಅಪ್ಲಿಕೇಶನ್ ತೆರೆದು ಬರೆಯಲು ತಯಾರಾದೆ. ಏನು ಬರೆಯಲಿ? ಎಂತಹ ಕತೆ ಬರೆಯಲಿ? ಯಾವ ಕತೆಯೂ ಹೊಳೆಯುತ್ತಲೇ ಇಲ್ಲವಲ್ಲಾ ಅನ್ನಿಸಿತು.

ಯಾವುದಾದರೂ ಒಂದು ಮುಖ್ಯ ವಸ್ತುವನ್ನಿಟ್ಟುಕೊಂಡು ಬರೆಯಬೇಕು. ಓದಿದವರಿಗೆ, 'ಇದಪ್ಪಾ ಕತೆ ಅಂದ್ರೆ' ಅನ್ನಿಸಬೇಕು ಅಂತ ಹಾಗೇ ಯೋಚಿಸತೊಡಗಿದೆ. ಇದು ನನ್ನ ಮೊದಲ ಪ್ರಯತ್ನವಾದ್ದರಿಂದ ಪ್ರಾರಂಭದ ತೊಡಕು ಇದ್ದೇ ಇರುತ್ತದೆ. ಒಮ್ಮೆ ಶುರು ಮಾಡಿದರೆ ಅದೇ ಬರೆಸಿಕೊಂಡು ಹೋಗುತ್ತದೆ, ಕತೆ ತನಗೆ ತಾನೇ ಸ್ಪಷ್ಟ ರೂಪ

ಪಡೆಯುತ್ತದೆ ಅಂತ ನನಗೆ ನಾನೇ ಸಮಾಧಾನ ಮಾಡ್ಕೊಂಡೆ. ಯಾಕ್ಹೇಳಿ? ಹೀಗೆ ಬಹಳಷ್ಟು ಹಿರಿಯ, ಪ್ರಸಿದ್ಧ ಸಾಹಿತಿಗಳು ಹೇಳೋದನ್ನ ನಾನು ಕೇಳಿಸಿಕೊಂಡಿದ್ದೇನೆ. ಅದಕ್ಕೇ ನಾನೂ ಹಾಗೆ ಹೇಳ್ಕೊಂಡೆ.

ಎದ್ದು ಹಾಗೇ ಅಡ್ಡಾಡಿದರೆ ಹೊಸ ವಿಷಯ ಹೊಳೆಯಬಹುದು ಎಂದೆನಿಸಿ ಕುರ್ಚಿ ಬಿಟ್ಟೆದ್ದೆ. ಅಲ್ಲೇ ಮೂಲೆಯಲ್ಲಿದ್ದ ಪುಸ್ತಕ ಕಪಾಟಿನ ಬಾಗಿಲನ್ನು ದೊಡ್ಡದಾಗಿ ತೆರೆದು, ಜೋಡಿಸಿಟ್ಟಿದ್ದ ಪುಸ್ತಕ ರಾಶಿಯನ್ನು ನೋಡುತ್ತಾ ನಿಂತೆ. ಅಬ್ಬಾ! ಅದೆಷ್ಟೊಂದು ಪುಸ್ತಕಗಳು! ಒಂದು ಪುಟ ಬರೆಯಲೂ ತಿಣುಕಾಡುವ ನಾನು ಅಷ್ಟೆಲ್ಲ ಪುಸ್ತಕಗಳನ್ನು ಬರೆದವರ ಬಗ್ಗೆ ಯೋಚಿಸತೊಡಗಿದೆ. ಅಲ್ಲಾ, ಒಂದು ಪುಸ್ತಕ ಬರೆಯೋದೇ ಕಷ್ಟ, ಅಂಥಾದ್ದರಲ್ಲಿ ಒಬ್ಬೊಬ್ಬರೇ ಎಷ್ಟೊಂದು ಪುಸ್ತಕಗಳನ್ನು ಬರೆದು ಬರೆದು ಹಾಕಿದ್ದಾರಲ್ಲಾ! ಅವರ ತಲೇಲಿ ಅಷ್ಟೊಂದು ವಿಚಾರಗಳು ಬರುತ್ತವಾದರೂ ಹೇಗೆ? ಬಂದ ವಿಚಾರಗಳನ್ನು ಇಷ್ಟು ಚೆಂದವಾಗಿ ಬರೆಯುತ್ತಾರಾದರೂ ಹೇಗೆ? ಎಂದು ಆಶ್ಚರ್ಯವಾಯ್ತು.

ಸಣ್ಣ ಕತೆಗಳ ಪುಸ್ತಕಗಳನ್ನು ಒಮ್ಮೆ ನೋಡಿದೆ. ಅಬ್ಬಾ! ರಾಶಿ ರಾಶಿ ಕತೆಗಳು! ಬಗೆಬಗೆಯ ವ್ಯಕ್ತಿಗಳ ಕತೆಗಳು! ಅದೇನು ಸನ್ನಿವೇಶಗಳು! ಎಂತೆಂತಹ ತಿರುವುಗಳುಳ್ಳ ರೋಚಕ ಕತೆಗಳು! ಬಹುಶಃ ಈ ಲೇಖಕರೆಲ್ಲಾ ಜನಗಳ ಬದುಕನ್ನು ತುಂಬಾ ಆಳವಾಗಿ ಅವಲೋಕಿಸುತ್ತಾರೆ ಅನ್ಸುತ್ತೆ. ವಿವಿಧ ಬಗೆಯ ಜನಗಳ ಮನಸ್ಸಿನ ವಿಚಾರಗಳು, ಭಾವನೆಗಳು, ಅನುಭವಗಳು ಅತ್ಯಂತ ಪಾರದರ್ಶಕವಾಗಿ ಅವರಿಗೆ ಕಾಣಿಸುತ್ತಿರಬಹುದು. ಅದಕ್ಕೇ ಅಲ್ಲವೇ, ಕೆಲವರು ೫೦೦-೬೦೦ ಪುಟಗಳಷ್ಟು ದೊಡ್ಡ ಕಾದಂಬರಿಗಳನ್ನೂ ಬರೆಯುವುದು? ಎಷ್ಟೆಲ್ಲ ಜನರ ಬದುಕಿನ ವಿವಿಧ ಆಯಾಮಗಳು, ಆಗುಹೋಗುಗಳು, ಪರಸ್ಪರರ ಬಾಂಧವ್ಯಗಳು, ತಿಕ್ಕಾಟಗಳು, ತೊಳಲಾಟಗಳು, ಸುಖ-ಸಂತೋಷದ ಸಂದರ್ಭಗಳು, ನೋವು-ನಲಿವುಗಳು, ದುಃಖ-ದುಮ್ಮಾನಗಳು, ಮನ ಮುಟ್ಟುವ ಸಂಭಾಷಣೆಗಳು ಇತ್ಯಾದಿ ಇತ್ಯಾದಿ ಗಳನ್ನೆಲ್ಲಾ ತಮ್ಮ ಬದುಕಿನಲ್ಲೇ ಆಗಿದ್ದವೇನೋ ಅನ್ನುವ ಹಾಗೆ ವಿವರ ವಿವರವಾಗಿ ಬರೆಯುತ್ತಾರೆ. ನಾನೆಷ್ಟು ವಿಚಿತ್ರದವಳು ಇಂತಹವರಿಗೆ ಹೋಲಿಸಿದರೆ! ನನಗೆ ನನ್ನ ಬದುಕಿನ ವಿವರಗಳೇ ಸ್ಪಷ್ಟವಾಗಿ ನೆನಪಿಲ್ಲ ಅಂತೀನಿ! ಎಷ್ಟೋ ಬಾರಿ ನನ್ನ ಬದುಕಿನಲ್ಲಾದ ಘಟನೆಗಳನ್ನು ನನ್ನ ಒಡಹುಟ್ಟಿದವರೇ ನನಗಿಂತ ಚೆನ್ನಾಗಿ ವರ್ಣಿಸುತ್ತಾರೆ. ನಂಗಾಗ ಆಶ್ಚರ್ಯವೋ ಆಶ್ಚರ್ಯ! ಆಗ ನನ್ನ ಮೆದುಳಿನ ಯಾವುದೋ ಮುಚ್ಚಿದ ಬಾಗಿಲು ಸ್ವಲ್ಪ ತೆರೆದಂತಾಗಿ ಕೆಲ ಘಟನೆಗಳ ವಿವರಗಳು ಸ್ವಲ್ಪ ಮಟ್ಟಿಗೆ ಸ್ಪಷ್ಟವಾಗುತ್ತೆ. ಹೀಗಾದರೆ ನಾನು ಕತೆ ಬರೆಯೋದಾದ್ರೂ ಹೇಗೆ?

ಮತ್ತೆ ಕುರ್ಚಿ ಮೇಲೆ ಕುಳಿತೆ. ಅಲ್ಲಾ, ನನ್ನ ಸುತ್ತಮುತ್ತ ಮನೆಗಳ ಜನಗಳೆಲ್ಲಾ ನನಗೆ ಗೊತ್ತು. ಅವರ ಬದುಕುಗಳ ವಿವರಗಳೂ ತಕ್ಕ ಮಟ್ಟಿಗೆ ಗೊತ್ತು. ನಂಗೆ ಸ್ನೇಹಿತರು, ಬಂಧುಗಳು ತುಂಬಾನೇ ಇದ್ದಾರೆ. ಅವರಲ್ಲೇ ಒಬ್ಬರ ಒಂದು ಅನುಭವವನ್ನು ಕತೆಯನ್ನಾಗಿಸಿದರೆ ಆಯ್ತು. ಹೆಸರು, ಊರು ಇತ್ಯಾದಿಗಳನ್ನು ಬದಲಾಯಿಸಿ ಬರೆದರೆ ಯಾರಿಗೂ ಇಂತಹವರದೇ ಕತೆ ಅಂತ ತಿಳಿಯೋದೂ ಇಲ್ಲ. ಸ್ವಲ್ಪ ಉಪ್ಪು-ಖಾರ ಸೇರಿಸಿ, ಕುತೂಹಲ ಬರುವಂತೆ ಬರೆದರಾಯ್ತು ಅಂದ್ಕೊಂಡೆ. ಉತ್ಸಾಹ ಮೂಡಿಬಂತು.

ಈಗ ತಲೆ ತುಂಬಾ, ಮನಸ್ಸಿನ ತುಂಬಾ ಸಾಲು ಸಾಲು ವ್ಯಕ್ತಿಗಳ ಮೆರವಣಿಗೆ! ಅವರ ಬದುಕಿನ ಘಟನೆಗಳ ಮಹಾಪೂರವೇ ಹರಿದು ಬಂದಂತಾಯ್ತು. ಆಚೆ ಮನೆ ಕಮಲಮ್ಮ, ಮುಂದಿನ ಬೀದಿಯ ರಾಮಣ್ಣ, ದಿನವೂ ರಸ್ತೆಯಲ್ಲಾಡುವ ನನ್ನ ಪುಟಾಣಿ ಗೆಳೆಯರು, ಹಿಂದಿನ ಬೀದಿಯ ಸುಬ್ಬಜ್ಜಿ, ಹೀಗೆ ಎಲ್ಲರೂ ನನ್ನ ಕಣ್ಮುಂದೆ ಬಂದರು. ಪಾಪ! ಸುಬ್ಬಜ್ಜಿಗೆ ಮನೆಯಲ್ಲಿ ತೀರದ ಸಂಕಷ್ಟ! ಅವರ ಕತೆ ಬರೆಯೋದು ಬೇಡ. ಮೊದಲ ಕತೆಯಲ್ಲೇ ದುಃಖದ, ಬೇಸರದ ವಿಷಯ ಬೇಡವೆನ್ನಿಸಿತು. ಸುಖದ, ಸಂತಸದ ಅಂತ್ಯವಿರುವ ಕತೆ ಬರೆಯೋದೇ ಸರಿ ಅಂದ್ಕೊಂಡೆ.

ಅಲ್ಲಾ, ಕತೆಗಾಗಿ ನಾನ್ಯಾಕೆ ಬೇರೆ ಯಾರದೋ ವ್ಯಕ್ತಿಯ ಬದುಕನ್ನು ಕೆದಕಬೇಕು? ನನ್ನದೇ ಬದುಕಿನ ಯಾವುದಾದರೂ ಮಧುರ ಘಟನೆಯ ಎಳೆಯನ್ನು ಹಿಡಿದು ಕತೆ ಬರೆದರೆ ಆದೀತಲ್ಲವೇ? ಹೌದು ಹೌದು ಎನ್ನಿಸಿ, ಕತೆಯ ಶೀರ್ಷಿಕೆಯನ್ನು ಬರೆದೇ ಬಿಟ್ಟೆ. ಶೀರ್ಷಿಕೆ ಸರಳವಾಗಿ ಆಕರ್ಷಕವಾಗಿರಲಿ ಅಂತ 'ಕತೆ ಬಂತು ಕತೆ' ಅಂತ ಹೆಸರಿಟ್ಟೆ. ನೀವೂ ಈಗ ಕತೆ ಓದಲು ಉತ್ಸುಕರಾದ್ರಿ ಅಲ್ವಾ? ಸ್ವಲ್ಪ ಕಾಲ ಕಾಯ್ತಿರಿ, ಪ್ಲೀಸ್! ಬರೆದು ತಂದೇ ಬಿಡ್ತೀನಿ. ನೀವೆಲ್ಲ ಓದೇ ಓದುತ್ತೀರಿ ಅನ್ನುವ ಭರವಸೆಯಿಂದ ಈಗಲೇ ನಿಮ್ಮೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ನಮಸ್ಕಾರ, ನಮಸ್ಕಾರ, ನಮಸ್ಕಾರ!!!

*****

ಉಪನಯನವೂ, ಸುಬ್ರಹ್ಮಣ್ಯ ಷಷ್ಠಿಯೂ

- ರವೀಂದ್ರಕುಮಾರ್ ಎಲ್ವೀ, ಮೈಸೂರು

ನಾನಾಗ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದೆ. ಗುರುಬಲ ಚೆನ್ನಾಗಿತ್ತು ಮತ್ತು ಆ ವರ್ಷದ ವಿಶೇಷವೆಂದರೆ ಮೀನ ಚೈತ್ರ ಇತ್ತು. ಮೀನ ಚೈತ್ರವು ಉಪನಯನಕ್ಕೆ ಶ್ರೇಷ್ಠವಂತೆ. ಆದ್ದರಿಂದ ನನಗೆ ಉಪನಯನ ಅಥವಾ ಮುಂಜಿ ಮಾಡಬೇಕೆಂದು ಗುರು ಹಿರಿಯರು ನಿಶ್ಚಯಿಸಿದರು. ಸರಿ, ಉಪನಯನದ ದಿನಾಂಕ ನಿಗದಿಪಡಿಸಿ ಸಿದ್ಧತೆಗಳು ನಡೆದವು. ಊರುಗಳಿಂದ ನೆಂಟರೂ, ಇಷ್ಟರೂ ಎಲ್ಲರನ್ನೂ ಆಹ್ವಾನಿಸಿದರು.

ನಮ್ಮ ಮನೆಯ ಮೊದಲ ಕಾರ್ಯಕ್ರಮ ಅದು. ಉಪನಯನಕ್ಕೆ ನೆಂಟರಿಷ್ಟರು ಖುಷಿಯಿಂದಲೇ ಬಂದರು. ಪುರೋಹಿತರು, ವಾದ್ಯದವರು ಸೇರಿದರು. ನಮ್ಮ ಮನೆಯ ಹಿಂದಿನ ನಮ್ಮ ದೊಡ್ಡಜ್ಜನ ಮನೆಯ ಅಂಗಳದಲ್ಲಿ ದೊಡ್ಡ ಚಪ್ಪರವನ್ನು ಹಾಕಿ ಉಪನಯನ ಮಾಡುವ ಏರ್ಪಾಡು ಮಾಡಿದರು. ನಮ್ಮ ಅಜ್ಜನ ಅಣ್ಣ ತಮ್ಮಂದಿರ ಐದು ಮನೆಗಳು ನಮ್ಮೂರಿನಲ್ಲೇ ಇದ್ದುದು ಅವರವರ ಕಡೆಯಿಂದ ಬಂದ ನೆಂಟರುಗಳು ಆಯಾ ಅಜ್ಜಂದಿರ ಮನೆಯಲ್ಲೇ ಉಳಿಯಲು ಅನುಕೂಲವಾಯಿತು. ನಮ್ಮ ಅಮ್ಮನ ಕಡೆಯ ನೆಂಟರು ನಮ್ಮ ಮನೆಯಲ್ಲಿ ಉಳಿದರು.

ಬೇಯಿಸಿದ ಭತ್ತವನ್ನು ಅಜ್ಜಿ ಹದವಾಗಿ ಹುರಿದು ಕೊಟ್ಟರು. ಅಮ್ಮ ಮತ್ತು ಮಾಸ್ತ್ಯಮ್ಮ (ನಮ್ಮ ಮನೆಯಲ್ಲಿ ಹೆಚ್ಚುವರಿ ಕೆಲಸವಿದ್ದಾಗ ಅಮ್ಮನ ಸಹಾಯಕ್ಕೆ ಬರುತ್ತಿದ್ದಾಕೆ) ಅದನ್ನು ಒರಳಲ್ಲಿ ಕುಟ್ಟಿದರು. ಅವಲಕ್ಕಿ ತಯಾರಾಯಿತು. ಅದನ್ನು ಹುರಿದು ಅವಲಕ್ಕಿ ಪುರಿ ಮಾಡಿದರು. ಅದಕ್ಕೆ ಬೆಲ್ಲದ ಪಾಕ ಹಾಕಿ ಪುರಿ ಉಂಡೆ ಸಿದ್ಧಪಡಿಸಿದರು. ಜೊತೆಗೇ ಚಕ್ಕುಲಿಯೂ ತಯಾರಾಯಿತು.

ಆಗೆಲ್ಲ ಪುರಿ ಉಂಡೆ ಚಕ್ಕುಲಿ ಯಾರೂ ಸಿದ್ಧಪಡಿಸಿ ಕೊಡುತ್ತಿರಲಿಲ್ಲ. ಹೀಗಾಗಿ ಇವನ್ನೆಲ್ಲ ಮನೆಯಲ್ಲೇ ಮಾಡಿದರು. ಇವುಗಳನ್ನು ಮಾಡುವಾಗ ನಮ್ಮ ಅಜ್ಜಿಯದೇ ನಾಯಕತ್ವ. ಬೆಲ್ಲದ ಪಾಕದ ಎಳೆ ಹಿಡಿದು ಕೊಡುವುದು ಅಜ್ಜಿಯದೇ ಕೆಲಸ. ಪುರಿ ಉಂಡೆ, ಕಡಲೆ ಉಂಡೆ, ಎಳ್ಳುಂಡೆ ಎಲ್ಲ ತಯಾರಾದವು. ಉಪ್ಪಿಟ್ಟು ಮಾಡಲು ಅಕ್ಕಿಯನ್ನು ನೆನಸಿ ಒಣಗಿಸಿ ತರಿಯನ್ನೂ ತಯಾರಿಸಿದರು.

ಶಿವಮೊಗ್ಗದ ಪ್ರಸಿದ್ಧ ಜವಳಿ ಅಂಗಡಿ ಖಂಡೇರಾಯರ ಅಂಗಡಿಗೆ ಹೋಗಿ ಎಲ್ಲರಿಗೂ ಹೊಸ ಬಟ್ಟೆ ಮತ್ತು ಬಂದ ನೆಂಟರುಗಳಿಗೆ ಉಡುಗೊರೆಗೆ ಸೀರೆ, ಪಂಚೆ, ಶರ್ಟಿನ ಬಟ್ಟೆಗಳನ್ನು ಖರೀದಿಸಿ ತಂದರು.

ಒಟ್ಟಿನಲ್ಲಿ ಎಲ್ಲರಿಗೂ ನನ್ನ ಉಪನಯನದ ಸಂಭ್ರಮ. ಅಣ್ಣ, ಅಮ್ಮನೇ ಖುದ್ದಾಗಿ ಹೋಗಿ ಅಕ್ಷತೆ, ಕುಂಕುಮ ಕೊಟ್ಟು ನಮ್ಮೂರಿನ ಮೂವತ್ತೂ ಬ್ರಾಹ್ಮಣ ಕುಟುಂಬದವನ್ನು ಉಪನಯನಕ್ಕೆ ಮತ್ತು ಭೋಜನಕ್ಕೆ ಆಹ್ವಾನಿಸಿ ಬಂದರು. ನಮ್ಮ ಜಮೀನುಗಳನ್ನು ಗುತ್ತಿಗೆ ಮಾಡುತ್ತಿದ್ದ ಒಕ್ಕಲುಗಳನ್ನು ಅಜ್ಜನೇ ಹೋಗಿ ಸಂಜೆಗೆ ಬರಲು ಹೇಳಿ ಬಂದರು.

ಶಿವಮೊಗ್ಗದ ಅಡುಗೆ ಕ್ರಿಷ್ಣಪ್ಪನವರು ಹಿಂದಿನ ದಿನವೇ ಬಂದವರು ಖಾರದ ಬೂಂದಿ ಕಾಳು, ಸಿಹಿ ಬೂಂದಿ ತಯಾರಿಸಿದರು. ಪಕ್ಕದಂಗಡಿಯ ಗಣೇಶಾಚಾರಿ ಬೆಳ್ಳಿಯ ಜನಿವಾರ ಮಾಡಿಕೊಟ್ಟರು. ನಮ್ಮ ಒಕ್ಕಲು ರಾಮಣ್ಣ ಜಿಂಕೆಯ ಚರ್ಮದ ಒಂದು ಸಣ್ಣ ತುಂಡನ್ನು ತಂದುಕೊಟ್ಟನು.

ಪುರೋಹಿತರು ವೇದ ಘೋಷ, ಮಂತ್ರಗಳನ್ನು ಉಚ್ಚರಿಸಿ ಶಾಸ್ತ್ರೋಕ್ತವಾಗಿ ಉಪನಯನ ನೆಡೆಸಿದರು. ತಂದೆಯವರು ಶ್ರೀ ಗಾಯಿತ್ರಿಯನ್ನು ಉಪದೇಶಿಸಿದರು.

ನಾನು 'ದ್ವಿಜ'ನಾದೆ.

ನನ್ನ ಉಪನಯನ ಅದ್ದೂರಿಯಾಗಿಯೇ ನಡೆಯಿತು. ಗುರುಗಳು (ಉಪನಯನ ನಡೆಸಿದ ಪುರೋಹಿತರು) ಭೋಜನ ಮಾಡುವಾಗ ಮಾಡಬೇಕಾದ ಪರಿಶೇಚನೆ, ಚಿತ್ರಾವತಿ, ಇತ್ಯಾದಿ ನಿಯಮಗಳನ್ನು ಹೇಳಿಕೊಟ್ಟರು. ಸಂಜೆಯಲ್ಲಿ ನನ್ನ ಅಜ್ಜ ಸಾಯಂ ಸಂಧ್ಯಾವಂದನೆಯನ್ನು ಹೇಳಿಕೊಟ್ಟರು. ಮುಂದೆ ಸುಮಾರು 15 ದಿನಗಳ ಕಾಲ ನಮ್ಮಜ್ಜ ನನಗೆ ಸಂಧ್ಯಾವಂದನೆಯ ಮಂತ್ರ ಮತ್ತು ಕೈಕರಣವನ್ನು ಹೇಳಿಕೊಟ್ಟರು. ಈ ಮಂತ್ರಗಳು ನನಗೆ ಕಂಠಪಾಠವಾದವು. ದಿನವೂ ಶ್ರದ್ಧೆಯಿಂದ ಸಂಧ್ಯಾವಂದನೆಯನ್ನು ಎರಡೂ ಹೊತ್ತು ಮಾಡುತ್ತಿದ್ದೆ.

ಈಗ ನಾನು ಒಬ್ಬ ವಟುವಾಗಿದ್ದೆ. ನಾನು ಸಂಧ್ಯಾವಂದನೆಯ ಮಂತ್ರವನ್ನು ಸ್ಪಷ್ಟವಾಗಿ ಮತ್ತು ಜೋರಾಗಿ ಹೇಳುತ್ತಿದ್ದೆ. ನಮ್ಮ ಊರಿನ ಬಹಳ ಜನ ಇದನ್ನು ಮೆಚ್ಚಿಕೊಂಡು ಶ್ಲಾಘಿಸುತ್ತಿದ್ದರು. ನಾನೂ ಹೆಮ್ಮೆಯಿಂದ ಬೀಗುತ್ತಿದ್ದೆ.

ಮುಂದೆ ಮಾರ್ಗಶಿರ ಮಾಸ ಬಂದಿತು. ಶುಕ್ಲ ಪಕ್ಷದ ಷಷ್ಠಿಯಂದು "ಸ್ಕಂದ ಷಷ್ಠಿ" ಅಥವಾ "ಸುಬ್ರಮಣ್ಯ ಷಷ್ಠಿ". ಕೆಲವರ ಮನೆಗಳಲ್ಲಿ ಈ ಷಷ್ಠಿಯನ್ನು ಒಂದು ವ್ರತವಾಗಿ ಆಚರಿಸುತ್ತಾರೆ. ಆ ದಿನ ಅವರು ಒಬ್ಬ ವಟುವನ್ನು ಮನೆಗೆ ಕರೆದು ಆ ವಟುವಿನಲ್ಲಿ ಸುಬ್ರಹ್ಮಣ್ಯನನ್ನು ಕಾಣುತ್ತಾ, ವಟುವಿಗೆ ಭೋಜನ ಮಾಡಿಸಿ ಧನ್ಯತೆಯ ಭಾವ ಹೊಂದುತ್ತಾರೆ.

ನಮ್ಮ ಶಾಲೆಯಲ್ಲಿ ದೈಹಿಕ ಶಿಕ್ಷಣ ಅಧ್ಯಾಪಕರ ಮನೆಯಲ್ಲಿ ಈ ವ್ರತವಿತ್ತು. ಅವರ ಕಣ್ಣು ಈ ಹೊಸ ವಟುವಿನ ಮೇಲೆ ಬಿತ್ತು. ನಮ್ಮ ತಂದೆಯವರೂ ಅದಕ್ಕೆ ಸಮ್ಮತಿಸಿದರು. ಅವರ ಮನೆಯ ಪೂಜೆಗೆ ಹೋಗಿ ಊಟ ಮಾಡಿ ಬರುವುದಷ್ಟೇ ನನ್ನ ಕೆಲಸ ಎಂದು ತಿಳಿದು ನಾನೂ ಒಪ್ಪಿದೆ.

ಪೂಜೆಯ ದಿನ ನಮ್ಮ ಶಿಕ್ಷಕರ ಮನೆಗೆ ಹೋದೆ. ಅಲ್ಲಿನ ವ್ಯವಸ್ಥೆಯೇ ಬೇರೆಯಾಗಿತ್ತು. ಎಲೆ ಹಾಕಿರಲಿಲ್ಲ ಬದಲಿಗೆ ಒಂದು ಮಣೆ ಹಾಕಿದ್ದರು. ನಾನು ಹೋದ ಮೇಲೆ ನನ್ನನ್ನು ಕೈಕಾಲು ತೊಳೆದು ಬರಲು ಹೇಳಿದರು.

ನನ್ನನ್ನು ಮಣೆಯ ಮೇಲೆ ಕೂರಿಸಿದ ನಂತರ ನನ್ನ ಮುಂದೆ ಎರಡು ದೀಪ ಹಚ್ಚಿದರು. ನಮ್ಮ ಮಾಸ್ತರು ನನಗೆ ಪೂಜೆ ಮಾಡಿದರು. ಹೊಸ ಪಂಚೆಯನ್ನು ಹೊದಿಸಿದರು. ಧೂಪ ದೀಪವೂ ಆಯಿತು. ಆಮೇಲೆ ಮಾಸ್ತರು ನನ್ನ ಮುಂದೆ ಒಂದು ದೊಡ್ಡ ಬಾಳೆ ಎಲೆ ಹಾಕಿದರು. ಹಬ್ಬದ ಅಡುಗೆಯನ್ನು ಮಾಡಿದ್ದರು. ಕ್ರಮವಾಗಿ ಬಡಿಸಲಾಯಿತು.

ಮಾಸ್ತರು ಈಗ ಪರಿಶೇಚನೆ ಮಾಡಪ್ಪ ಎಂದರು. ಅಂತೆಯೇ ನಾನು ಊಟ ಶುರುಮಾಡಿದೆ. ಮಾಸ್ತರರ ಮನೆ ಯವರು ಯಾರೂ ಊಟಕ್ಕೆ ಕೂರಲಿಲ್ಲ. ಮಾಸ್ತರು ಮತ್ತು ಅವರ ಪತ್ನಿ ಬಡಿಸುತ್ತಿದ್ದರು. ಅವರ ಕೈ ದೊಡ್ಡದಿತ್ತು. ಎಲ್ಲಾ ಅಡುಗೆಯನ್ನೂ ಸ್ವಲ್ಪ ಹೆಚ್ಚೇ ಎನಿಸುವಷ್ಟು ಬಡಿಸಿದರು. ನಾನೂ ಊಟ ಮಾಡುತ್ತಾ ಹೋದೆ. ನಾನು ಊಟ ಮಾಡಿದಂತೆ ಮತ್ತೆ ಮತ್ತೆ ಬಡಿಸುತ್ತಿದ್ದರು. ಈಗ ನನಗೆ ಕಷ್ಟವಾಗತೊಡಗಿತು. ಇನ್ನು ತಿನ್ನುವುದು ಸಾಧ್ಯವೇ ಇಲ್ಲ, ಇನ್ನೇನಾದರೂ ತಿಂದರೆ ವಾಂತಿ ಆಗುತ್ತದೆ ಎನ್ನುವ ಸ್ಥಿತಿ ಮುಟ್ಟಿದೆ. ನನ್ನ ಸಂಕಟ ಮಾಸ್ತರರಿಗೆ ಅರ್ಥವಾಗಿರ ಬೇಕು. "ನಿನಗೆ ಸಾಕಾಗಿದ್ದರೆ ಬಿಟ್ಟುಬಿಡು ಮಗು. ಈ ದಿನ ನೀನು ಸ್ವಲ್ಪ ಚೆಲ್ಲಬೇಕು" ಎಂದರು.

ಅಯ್ಯೋ ಮೊದಲೇ ಹೇಳಿದ್ದರೆ!!! ಎಂದುಕೊಂಡೆ. ಎಲೆಯಲ್ಲಿ ಏನೂ ಚೆಲ್ಲಬಾರದು ಎಂಬ ಶಿಸ್ತಿನಲ್ಲಿ ಬೆಳೆದ ನನಗೆ ತುಂಬಾ ಹಿಂಸೆಯಾಗಿತ್ತು. ಆಪೋಷನ ತೆಗೆದುಕೊಂಡು ಊಟ ಮುಗಿಸಿದೆ. ಮಾಸ್ತರು ಮತ್ತು ಅವರ ಮನೆಯವರು ವಸ್ತ್ರ ರೂಪದಲ್ಲಿ ಕೊಟ್ಟ ಪಂಚೆಯ ಜೊತೆಗೆ ತಾಂಬೂಲದಲ್ಲಿ ದಕ್ಷಿಣೆಯನ್ನೂ ಕೊಟ್ಟರು. ಅವರ ಮನೆಯವರೆಲ್ಲ ಊಟ ಮಾಡುವವರೆಗೆ ಕುಳಿತಿದ್ದು, ನಂತರ ಮನೆಗೆ ಬಂದೆ.

ಮರು ವರ್ಷ ಮತ್ತೆ ಒಬ್ಬರು ಜೋಯಿಸರ ಮನೆಯಿಂದ ಅಹ್ವಾನವಿತ್ತು. ನಾನು ಹೋಗಲು ನಿರಾಕರಿಸಿದೆ. ಅಜ್ಜಿ- 'ಹಾಗೆಲ್ಲ ಹೇಳಬಾರದು ಹೋಗಿ ಬಾ' ಎಂದರು. ನಾನು ಹೋಗುವುದಿಲ್ಲ ಎನ್ನಲು ಕಾರಣವೊಂದಿತ್ತು. ಅವರ ಮಗಳೊಬ್ಬಳು ನನ್ನ ತರಗತಿಯಲ್ಲೇ ಓದುತ್ತಿದ್ದಳು. ಅವಳ ಎದುರಿಗೆ ಪಂಚೆ ಉಟ್ಟು ಪೂಜೆ ಮಾಡಿಸಿಕೊಳ್ಳುವುದು ಏಕೋ ಮುಜುಗರ ಎನಿಸುತ್ತಿತ್ತು. ಆದರೆ ಅಜ್ಜಿ ಒಪ್ಪಿಕೊಂಡಾಗಿತ್ತು. ವಿಧಿಯಿಲ್ಲದೇ ಹೋಗಬೇಕಾಯಿತು. ಮಾಸ್ತರ ಮನೆಯ ಕ್ರಮವೇ ಪುನರಾವರ್ತನೆಯಾಯಿತು. ಇಲ್ಲಿ ಇನ್ನೂ ಒಂದು ವಿಶೇಷ ನಡೆಯಿತು.

ಪೂಜೆಯ ನಂತರ ಮನೆಯ ಎಲ್ಲರೂ ಬಂದು ನಮಸ್ಕಾರ ಮಾಡಿದರು. ನನ್ನ ಸಹಪಾಠಿ ತಕರಾರು ಮಾಡುತ್ತಿದ್ದುದು ಕೇಳಿಸಿತು. ಅವರಮ್ಮ ಮನೂತಿ ಮಾಡಿ ಕರೆತಂದರು. ಅವಳು ನಮಸ್ಕಾರ ಮಾಡುವಾಗ ನನಗೆ ನಗುವೇ ಬಂದು ಬಿಟ್ಟಿತು. ಕಷ್ಟಪಟ್ಟು ತಡೆಹಿಡಿದೆ.

ಇವೆರಡೂ ನನ್ನ ಉಪನಯನದ ನಂತರ ಸುಬ್ರಹ್ಮಣ್ಯ ಷಷ್ಠಿಯ ಅನುಭವಗಳು.

*****

ಹತ್ಯೆ

– ಜಿಬಿ ಕೋಟೆ ಅನಂತ

ಏನು ಕೇಳಿಸ್ತಾ ಇದೆಯಾ ನನ್ನ ಧ್ವನಿ. ಏನಂದ್ರಿ ಕೇಳಿಸ್ತಾ ಇದೆಯಾ, ಗೋಳಗುಮ್ಮಟದೊಳಗಿಂದ ಬಂದ ಹಾಗಿದೆ ಧ್ವನಿ, ಅಂದ್ರೆ ನಾನು ಗೋಳಗುಮ್ಮಟದಲ್ಲಿ ಇಲ್ಲದಿದ್ರೂ ಗೋಳದೊಳಗಂತೂ ಇದೀನಿ. ಅಲ್ಲಿಂದಾನೇ ಮಾತಾಡ್ತಾ ಇರೋದು. ನೀವು ನನ್ನ ಧ್ವನಿ ಕೇಳಬೇಕು ಅಂದ್ರೆ ಕಾಯಬೇಕು. ಈಗೀಗ ನಾನು ಮಗುವಿನ ತರ ಆಗ್ತಾ ಇದೀನಿ ಪೂರ್ತಿ ಬೆಳೆದ ಮೇಲಲ್ವ ನಾನು ಚೆಂದವಾಗಿ ಕಾಣೋದು. ಮುದ್ದುಮುದ್ದಾಗಿ ದುಂಡು ಮುಖ, ಅಗಲವಾದ ಕಣ್ಣು, ಹವಳದ ತುಟಿ, ತಿದ್ದಿದ ಮೂಗು, ದಂತದ ಮೈಬಣ್ಣ, ಇವೆಲ್ಲಾ ಈಗೀಗ ಮೂಡ್ತಾ ಇದೆ.

ಒಂದು ದಿನ ಏನಾಯ್ತು ಗೊತ್ತಾ? ನಂಗೆ ನಾಚಿಕೆಯಾಗತ್ತೆ. ಆದ್ರೂ ಹೇಳ್ತೀನಿ.. ಹಾ! ಆವತ್ತು ರಾತ್ರಿ ಅಪ್ಪ ಊಟ ಮುಗಿಸಿ ರೂಂಗೆ ಬಂದು ಎಲೆ ಅಡಿಕೆ ಹಾಕ್ಕೊಳ್ತಾ ಇದ್ದಾಗ ಅನುರಾಧ ಅಮ್ಮ ತಲೆ ತಗ್ಗಿಸಿ ನಾಚಿಕೊಂಡು ಮುಖ ಎಲ್ಲಾ ಕೆಂಪಗೆ ಮಾಡ್ಕೊಂಡು, ಏನೂಂದ್ರೆ .ನಾನು ತಾಯಿ ಆಗ್ತಾಯಿದೀನಿ ಅಂದಾಗ ಅಪ್ಪಂಗೆ ಖುಷಿಯಾಗಿ ಅಮ್ಮನ್ನ ಮುದ್ದಾಡಿ, ತೋಳಲಿ ತಬ್ಬಿ ಹಿಡಿದು ಮುಖಕ್ಕೆ ಮುಖ ಕೊಟ್ಟು ಕಂಗ್ರಾಟ್ಸ್ ಅಂತ ಹೇಳಿದರು. ಅಮ್ಮನ ಮೈಯೆಲ್ಲಾ ಜುಂ. ಅಂತು. ಅವರು ಒಬ್ಬರನ್ನೊಬ್ಬರು ಅಪ್ಪಿಕೊಂಡು ರಾತ್ರಿ ಕಳೆದರು.

ಬೆಳಿಗ್ಗೆ ಸುದ್ದಿ ಕೇಳಿದ ನಾಗಮ್ಮಜ್ಜಿ, ಈ ಸುದ್ದಿ ಬೇಗ ಬರ್ಲಿ ಅಂತಾ ಮನೆ ದೇವರಿಗೆ ಹರಕೆ ಹೊತ್ತಿದ್ದೆ ಅಂತ ಹೇಳಿ ಮಧ್ಯಾಹ್ನ ಊಟದ ಜೊತೆಗೆ ಸಿಹಿ ಮಾಡಿ ಅಂತ ಆದೇಶ ಹೊರಡಿಸಿದರು ನಗ್ ನಗ್ತಾ. ಈ ನಗು ಸಾಂಕ್ರಾಮಿಕದಂತೆ ಮನೆ ತುಂಬಾ ಹರಡಿತು. ವಿಷ್ಯ ಅನುರಾಧಾ ಅಮ್ಮ, ನರಸಮ್ಮಜ್ಜಿಗೆ ತಿಳಿದಾಗ ನಾನು ಮೊನ್ನೆ ಸಂಕ್ರಾತಿ ಹಬ್ಬಕ್ಕೆ ಅವಳು ಬಂದಿದ್ದಾಗ ಗಮನಿಸಿದ್ದೆ. ಕಳೆಕಳೆಯಾಗಿ ಮೈಕೈ ತುಂಬಿಕೊಂಡ ಹಂಗೆ ಕಾಣ್ತಾಳ, ಏನಾದರೂ ವಿಶೇಷ ಇದೆಯಾ ಅಂತ. .ನನ್ನ ಊಹೆ ದಿಟವಾಗ್ಲಿ, ಗಂಡು ಮಗೂನೇ ಆಗ್ಲಿ ಅಂತ ಗಣೇಶಂಗೆ ಹರಕೆ ಕಟ್ಟಿದ್ದೆ.

ಅಮ್ಮನ ನೋಡಕ್ಕೆ ಯಾರಾದ್ರೂ ಬರ್ತಾನೇ ಇದ್ರು. ಬಸ್ರಿ ಬಯಕೆ ಅಂತ ಹೇಳಿ ಸ್ವೀಟು, ಖಾರಾ, ಹಣ್ಣು ಹೂವು, ಬಾಯಾಡಿಸಕ್ಕೆ ಅವ್ರು ತಂದುಕೊಟ್ಟಿದ್ದನ್ನು ತಿನ್ನು ಅಂತ ನಾಗಮ್ಮಜ್ಜಿದು ತಾಕೀತು! ಏನೂ ಸೇರಲ್ಲ ಅಂದ್ರೆ ಏನು, ನೀನು ಈಗ ಒಂಟಿಯಲ್ಲ. ಒಡಲಲ್ಲೊಂದು ಜೀವ ಇದೆ. ಅದಕ್ಕೆ ಪೋಷಣೆ ಬೇಡ್ವಾ? ಹುಟ್ಟೋ ಮಗು 'ಗಂಡುಗಲಿ' 'ವಂಶೋದ್ಧಾರಕ' ಅವನು ದಷ್ಟಪುಷ್ಟವಾಗಿ ಮೈಕೈ ತುಂಬಿಕೊಂಡು ಇರ್ಬೇಕು ಅಂತ ಗುಡುಗುತ್ತಿದ್ರು. ಅಮ್ಮನೋ ಮೊದ್ಲೇ ಪುಕ್ಲು, ಗಡಗಡ ನಡುಗಿ ಹೋಗ್ತಿದ್ಲು..

ಅಮ್ಮಂಗೊ ಆ ವಾಸನೆ ಕಂಡ್ರೆ ವಾಕರಿಕೆ, ಒತ್ತಾಯಮಾಡಿ ತಿನಿಸಿದ ಕೂಡ್ಲೆ ಅಮ್ಮ ಬಚ್ಚಲು ಮನೆ ಕಡೆ ಹೋಗ್ತಾ ಇದ್ಲು. ತಿಂದಿದ್ದೆಲ್ಲಾ ವಾಂತಿ, ಆಮೇಲೆ ಸುಸ್ತು.

ಅಪ್ಪ ಅಮ್ಮನ ಸುತ್ತಾಟಕ್ಕೆ ಕರ್ಕೊಂಡ್ ಹೋಗಿ ಅವ್ರಿಗೆ ಇಷ್ಟವಾದುದನ್ನೆಲ್ಲಾ ಕೊಡಿಸ್ತಾ ಇದ್ರು. ಅಮ್ಮನ ಫೇವರೆಟ್ ಚುರುಮರಿ, ಮಸಾಲೆ ದೋಸೆ, ಹುಳಿ ಮಾವಿನಕಾಯಿ.. ಆಮೇಲೆ ಇನ್ನೂ ಮನೆಯಲ್ಲಿ ಹಣ್ಣಿನ ಅಂಗಡಿನೇ ಇತ್ತು. ಬಾಯಾಡಿಸಕ್ಕೆ ಹುರಿಗಾಳು, ಖಾರದ ಕಡ್ಲೆಬೀಜ, ಬಾದಾಮಿ, ಗೋಡಂಬಿ, ದ್ರಾಕ್ಷಿ, ಕೆಂಪು ಕಲ್ಲುಸಕ್ರೆ ಡಬ್ಬಿಗಳು ಸಾಲಾಗಿದ್ದವು. ಗಟ್ಟಿ ಹಾಲಿಗೆ ಕೇಸರಿ ಹಾಕಿ ಕೊಡ್ಬೇಕು ಅಂತ ಅಜ್ಜಿ ರೂಲ್ಸ್ ಮಾಡಿದ್ರು.

ಇಷ್ಟೆಲ್ಲ ಪಾಲನೆ ಪೋಷಣೆ ಆದ ಮೇಲೆ ನನ್ನ ಕೈ ಕಾಲು, ಕಣ್ಣು, ಕಿವಿ, ಮೂಗು, ಬಾಯಿ ಚೆನ್ನಾಗಿ ತಿದ್ದಿ ತೀಡಿದಂಗೆ ಆಯ್ತು. ದುಂಡು ದುಂಡಗೆ ನಾನು ಗ್ಲಾಕ್ಸೊ ಬೇಬಿ ತರಹ ಆಗಿದ್ದೆ. ಈಗೀಗ ನನಗೆ ಗೋಳದ ಹೊರಗಿನ ಪ್ರಪಂಚದ ಅರಿವಾಗ್ತಾ ಬಂತು.

ಅಮೇರಿಕಾದಲ್ಲಿರೋ ಶಶಿ ಅತ್ತೆ ಹುಟ್ಟಿದಾಗ, ತೊಟ್ಟಿಲು ತೂಗಿದ್ದು ಈ ಮನೆಯಲ್ಲಿ, ಈಗ ಮತ್ತೆ ತೊಟ್ಟಿಲು ತೂಗೋ ಸಂಭ್ರಮ. ನಾಗಮ್ಮಜ್ಜಿ ಮನೆಯಲ್ಲಿ ಎಲ್ಲ ಸೊಸೆಯಂದಿರು ಚೊಚ್ಚಲು ಗಂಡೇ ಹೆತ್ತಿರೋದು. ಅಂದ್ಮೇಲೆ ಈಗ್ಲೂ ಗಂಡು ಮಗೂನೇ ಹುಟ್ಟೋದು ಅಂತ ಎಲ್ಲರಿಗೂ ಖಾತ್ರಿ!!

ಏಳು ತಿಂಗಳಾಯಿತು ಅಮ್ಮಂಗೆ 'ಸೀಮಂತ' ಜೋರಾಗೆ ಆಯ್ತು. ಭರ್ಜರಿ ಊಟ. ಸಂಜೆ ಅಮ್ಮಂಗೆ ಆರತಿ ಶಾಸ್ತ್ರ.

ಎಂಥ ಮಗು ಆಗುತ್ತೋ ಅನ್ನೋ ಅವರಿವರ ಮಾತಿಗೆ "ಚೊಚ್ಚಲು ಗಂಡೇ' ಅಂತಂದ್ರು ನಾಗಮ್ಮಜ್ಜಿ. ಆಂಜನೇಯ ಸ್ವಾಮಿ, ಗುಡಿ ಪೂಜಾರಪ್ಪ, ಕವಡೆ ಹಾಕಿ ಹೇಳವ್ರೆ, ಏನಾದ್ರಾಗ್ಲಿ ಮಂಜು ಸ್ಕ್ಯಾನ್ ಮಾಡಿಸು ಅಂದ್ರು. ಗೋಳದೊಳಗಿದ್ದ ನನಗೆ ಸಿಡಿಲು ಬಡಿದಂತಾಯ್ತು ಉಹೂಂ. ಪರೀಕ್ಷೆ ಬೇಡ ಅಂತ ಕೂಗಿದೆ. ಆ ಕೂಗು ಹೊರಗಿನವರಿಗೆ ಕೇಳಿಸಲಿಲ್ಲ. ಏನ್ಮಾಡೋದು ಅಂತ ಚಿಂತೆ ಆಯಿತು ನನಗೆ. ಕೊನೆಗೆ ಒಂದು ಉಪಾಯ ಹೊಳೀತು. ಈ ಗೋಳ ನನ್ನ 'ಪರಿಧಿ', ಇಲ್ಲಿ ನನಗೆ ಬೇಕಾದಹಾಗೆ ನಾನಿರ್ತೀನಿ! ನನ್ನ ಸ್ಕ್ಯಾನಿಂಗ್ ಮಾಡಿದ ಡಾಕ್ಟರಮ್ಮ ಎಡಗಡೆ, ಬಲಗಡೆ, ಹಿಂದೆ ಮುಂದೆ ಎಲ್ಲಾ ಆಂಗಲ್ ನಿಂದ ಪ್ರಯತ್ನಿಸಿ ಸುಸ್ತಾಗಿ ವೆರಿ ವೆರಿ ನಾನ್ ಕೋ ಆಪರೇಟಿವ್ ಬೇಬಿ ಅಂತ ಹೇಳ್ತಾ ವಾಪಸ್ ಹೋದ್ರು. 'ನನಗೆ ಗೆಲುವು'

ಆ ಡಾಕ್ಟರು ಹೆಣ್ಣು. ಅವ್ರ ಹೆಣ್ಣುಮಕ್ಕಳು ಅವ್ರನ್ನ 'ಅಮ್ಮ' ಅಂತ ಕರಿತಾ ಇಲ್ವಾ, ಹಾಗೆ ನಾನು ನನ್ನ ಅಮ್ಮನ ಅಮ್ಮ ಅಂತ ಕರೀಬೇಡ್ವಾ? ನೀವು ಒಬ್ಬ ಹೆಣ್ಣಾಗಿ ಹೆಣ್ಣು ಕುಡೀನ ಚಿವುಟಿ ಹಾಕ್ತೀರಲ್ಲ , ಇದು ನ್ಯಾಯನಾ???

ಡಾಕ್ಟರು ಸಿಜೇರಿಯನ್ ಆಗ್ಬೇಕು ಅಂದಾಗ ಅಮ್ಮಂಗೆ ಹಿಂಸೆ. ನೋವು .ಬೇಡ ಅಂದ್ಕೊಂಡು ಡಾಕ್ಟ್ರು ಕತ್ರೀ ಚಾಕೂ ಕೈಲಿ ಹಿಡಿದಿದ್ದಂಗೆ ನಾನು ಧರೆಗೆ ಇಳಿದೇಬಿಟ್ಟೆ. ಕಣ್ ಬಿಟ್ಟ ನನಗೆ ಮೊದಲು ಕಾಣಿಸಿದ್ದು ಕತ್ರೀ ಚಾಕೂ!!!

ಆಯಾ ನನ್ನ ಮೈ ತೊಳೆದು ಅಮ್ಮನ ಪಕ್ಕ ಮಲಗಿಸಿದಳು. ಅಮ್ಮ, ನಾನು ನಿನ್ನ ಕುಡಿ, ನಿನ್ನ ಥರಾನೇ, ನೋಡು ಅಂತ ಹೇಳ್ಬೇಕು ಅಂದ್ಕೊಂಡೆ. ಆಗ್ಲಿಲ್ಲ. ನನಗೆ ಅಳಕ್ಕೂ ತ್ರಾಣ ಇಲ್ಲ. ಅಮ್ಮ ನಿಂಗೆ ಜಾಸ್ತಿ ನೋವು ಕೊಟ್ನಾ?? ಇರಬೇಕು ಅದಕ್ಕೆ ಅಮ್ಮ ಹೀಗಾಗಿದ್ದಾಳೆ!!

ಅಮ್ಮ ನೀನು ಮಲಕ್ಕೋ, ಎಚ್ಚರ ಆದಮೇಲೆ ಒಂದಿಷ್ಟು ಹಾಲು ಕೊಡು. ನಾನು ನಿನ್ನ ಒಡಲ ಅಮೃತ ಕುಡಿದು, ಏನೇನೋ ಸಾಧನೆ ಮಾಡಬೇಕು. ನಾನು ನಿನ್ನ ಮಗಳು ಅಂತ ಜಗತ್ತಿಗೆ ತಿಳಿಯಬೇಕು. ಈಗ ನಾನು ನಿದ್ದೆ ಮಾಡಬೇಕು, ಮಂಪರು.

ಅಷ್ಟರಲ್ಲಿ ಹೆಂಗಸರ ಪಿಸುಮಾತು; ಅಯ್ಯೋ ಹೆಣ್ಣಾ? ಅಷ್ಟರಲ್ಲಿ ಒಂದು ಗಟ್ಟಿ ಧ್ವನಿ 'ತಗೋ ಇದನ್ನ ಇಟ್ಕೋ. ಹುಷಾರು.... ಯಾರಿಗೂ ಅನುಮಾನ ಬರಬಾರದು".

ಅರೆ! ಇದು ನಾಗಮ್ಮಜ್ಜಿ ಧ್ವನಿ. ಅವರು ನಾನು ಭ್ರೂಣದಲ್ಲಿದ್ದಾಗಲೇ ಮುಗಿಸಬೇಕು ಅಂತ ತೀರ್ಮಾನಿಸಿದ್ರು. ಆದ್ರೆ ಅದು ಆಗಲಿಲ್ಲ. ಈ ಹೊರಗಿನ ಪ್ರಪಂಚಾನೇ ಒಂಥರ. ಅಮ್ಮನ ಹೊಟ್ಟೆ ಒಳಗೆ ಎಷ್ಟು ಚೆಂದ ಇತ್ತು. ಅಮ್ಮ ಗಾಢ ನಿದ್ದೆಲಿದ್ದಾರೆ. ನನ್ನ ನೋಡೋಕೆ ಯಾರೂ ಬಂದಿಲ್ಲ ಅಂದ್ಕೊಂಡೆ. ಅಷ್ಟರಲ್ಲಿ ಯಾರೋ ಬಂದ್ರು. ಯಾರಿರಬಹುದು? ಅನ್ಕೊಂಡೆ ಅವ್ರು ನನ್ನ ಮುಖಕ್ಕೆ ಬಲವಾಗಿ ಒತ್ತಿ ಹಿಡಿದ ದಿಂಬು ನನ್ನನ್ನ ಅರೆಕ್ಷಣದಲ್ಲಿ ಹೆಣವಾಗಿಸಿತು. ಹೆತ್ತ ತಾಯೀನೇ ನನ್ನ ಬೇಡ ಅಂದ ಮೇಲೆ ನಾನು ಎಲ್ಲಿಗೆ ಹೋಗ್ಲಿ? ಅಷ್ಟರಲ್ಲಿ ಎಲ್ಲಿಂದಲೋ ಒಂದು ಧ್ವನಿ. 'ಬಾ ಕಂದ ಬಾ, ನಾನಿದೀನಿ. ನನ್ನ ಒಡಲಲ್ಲಿ ನಿನ್ನ ಅಡಗಿಸ್ಕೊಳತೀನಿ' ಅಂತ ಪ್ರೀತಿಯಿಂದ ಬರಮಾಡಿಕೊಂಡಳು ಆ ತಾಯಿ. ನಾನೀಗ ಭೂಮಿ ತಾಯಿ ಮಡಿಲಲ್ಲಿ ಶಾಶ್ವತವಾಗಿ ಮಲಗಿದ್ದೀನಿ.

*****

ಅಸಾಧಾರಣ ವೈದ್ಯ

- ಮಾಧುರಿ ಕೃಷ್ಣ ಭಟ್

ಸಸಕಸ ವೇದಿಕೆಯಲ್ಲಿ ಮೊನ್ನೆ ಶ್ರೀ ಗೋಪಿನಾಥರು ಬರೆದ 'ನನ್ನಪ್ಪ ' ಓದಿದೆ. ಮನದೊಳಗೆ ಸದಾ ನೆಲೆಯಾಗಿ ನಿಂತು ಆರಾಧಿಸಲ್ಪಡುತ್ತಿದ್ದ ನನ್ನಪ್ಪ ಕೂಡಲೇ ನೆನಪಾದರು. ಅವರು ಸುಮಾರು 42 ವರ್ಷಗಳಿಗೂ ಮಿಕ್ಕಿ ಕರಾವಳಿ ತೀರದ ಇನ್ನೂರು ಮೈಲು ಫಾಸಲೆಯಲ್ಲಿ ಹಗಲು ರಾತ್ರಿಗಳಲ್ಲಿ ಜಾತಿಮತವೆಂದಿಲ್ಲದೆ ನಡೆಸಿದ ವೈದ್ಯಕೀಯ ಸೇವೆ ನೆನಪಾಯಿತು. ಇಂದಿಗೂ ಅವರ ಮರಣವನ್ನು ಒಪ್ಪಿಕೊಳ್ಳದ ಜನ ಅಲ್ಲಿದ್ದಾರೆ. ಅವರ ಹೆಸರು ಕೇಳಿದ ತಕ್ಷಣ ನೆಲಕ್ಕೆ ಅಡ್ಡಬಿದ್ದು ನಮಸ್ಕರಿಸುವವರೂ ಇದ್ದಾರೆ. ಅವರ ಜೀವನಚರಿತ್ರೆಯ ಒಂದು ಚಿಕ್ಕ ಭಾಗವನ್ನು ಇಲ್ಲಿ ಉಲ್ಲೇಖಿಸುತ್ತೇನೆ.

ಅದು 1936-37ರಲ್ಲಿ ಮಂಗಳೂರಿನಿಂದ 57 ಮೈಲು ದೂರದಲ್ಲಿರುವ ಕೋಟೇಶ್ವರ ಎಂಬ ಕಿರುಗ್ರಾಮದಲ್ಲಿ, ನನ್ನಪ್ಪ ಮದರಾಸಿನಲ್ಲಿ ಇಂಗ್ಲೀಷ್ ವೈದ್ಯಕೀಯ ಶಾಸ್ತ್ರವನ್ನು ಓದಿ ಬಂದು ಚಿಕಿತ್ಸಾಲಯವನ್ನು ತೆರೆದಿದ್ದರೂ, ಅಂದಿನ ಜನತೆಗೆ ಆಯುರ್ವೇದ ಹಾಗೂ ಪಂಡಿತರ ಲೇಹ್ಯ, ಕಷಾಯಗಳಲ್ಲೇ ನಂಬಿಕೆ ಜಾಸ್ತಿಯಿದ್ದ ಕಾಲವಾಗಿತ್ತು.

ಅಂದು ಮಳೆ ಸುರಿಯುತ್ತಲೇ ಇತ್ತು. ಸಂಧ್ಯಾ ಸಮಯ. ಅತ್ಯಂತ ದೀನ ಸ್ಥಿತಿಯಲ್ಲಿದ್ದೊಬ್ಬ ಬಾಗಿಲಲ್ಲಿ ಕಾಣಿಸಿಕೊಂಡ. ಯುವ ಡಾಕ್ಟರನ್ನು ಕೈಮುಗಿದು ಬೇಡಿಕೊಂಡ. ಆ ಕ್ಷಣಕ್ಕೆ ಯುವ ಡಾಕ್ಟರ್ ತನ್ನ ಮೆಡಿಕಲ್ ಬ್ಯಾಗನ್ನು ಎತ್ತಿಕೊಂಡು ಆತನ ಹಿಂದೆ ಮೊಣಕಾಲು ಮಟ್ಟ ಮಳೆ ನೀರು ಹರಿಯುತ್ತಿದ್ದ ಓಣಿಯಲ್ಲಿ ತನ್ನ ಬೂಟುಗಾಲನ್ನು ಎತ್ತಿ ಎತ್ತಿ ಇಡುತ್ತ ಹೊರಟೇಬಿಟ್ಟ. ಕಣ್ಣುಗಳಲ್ಲಿ ಪ್ರಜ್ವಲಿಸುತ್ತಿದ್ದ ಬೆಳಕೇ ದಾರಿ ದೀಪವಾಗಿತ್ತು. ಗುಡಿಸಲು ಮುಟ್ಟಿದ ಡಾಕ್ಟರನಿಗೆ ಮೊದಲು ಕಂಡಿದ್ದು ನಾಲ್ಕೈದು ಹಸಿದ ಹೊಟ್ಟೆಯ ಮಕ್ಕಳು. ಜತೆಗೆ ಕರುಳು ಕತ್ತರಿಸುವ ಬಸುರಿಯ ಆರ್ತನಾದ. ಬೆಳಕೇ ಇಲ್ಲದ ಅಲ್ಲಿ ಏನೂ ಕಾಣಿಸದು. ಡಾಕ್ಟರ್ ಒಲೆ ಹೊತ್ತಿಸಲು ಹೇಳಿದರು. ಏನನ್ನಾದರೂ ತಂದು ಒಲೆಗೆ ತುಂಬಲು ಹೇಳಿದರು. ಆ ಒಲೆಬೆಂಕಿಯ ಬೆಳಕಿನಲ್ಲಿ ತನ್ನ ವೃತ್ತಿಜೀವನದ ಮೊದಲ ಹೆರಿಗೆಯನ್ನು ಮಾಡಿಸಲು ತಯಾರಾದರು. ಅದು ಬ್ರೀಚ್ ಬೇಬಿ! ತಲೆಯ ಬದಲು ಕಾಲು ಮುಂದೆ ಬಂದಿತ್ತು. ಧೈರ್ಯ ತಂದುಕೊಂಡು ಉಪಾಯವಾಗಿ ಕಾಲನ್ನು ಹಿಂದೆ ತಳ್ಳಿ, ತಲೆಯನ್ನು ಮುಂದೆ ತಂದು ಮಗುವನ್ನು ಹೊರತಂದರು. ಅಗತ್ಯವಿದ್ದ ಹೊಲಿಗೆ ಹಾಕಿದರು. ಅರ್ಧ ಗಂಟೆಯಲ್ಲಿ ತನ್ನ ಕೆಲಸ ಮುಗಿಸಿ ಡಾಕ್ಟರ್ ಎದ್ದು ನಿಂತರು. ಬೆಂಕಿ ಇಲ್ಲದ ಗುಡಿಸಲಲ್ಲಿ ಫೀಸಿನ ಬಗ್ಗೆ ಯೋಚಿಸುವುದುಂಟೇ! ಸೊಂಟ ಪೂರಾ ಬಾಗಿಸಿ ಕೈಜೋಡಿಸಿ ನಿಂತ ಗಂಡನಿಗೆ ಬರೇ ತಲೆ ಅಲುಗಾಡಿಸಿ, ಮರುದಿನ ಕ್ಲಿನಿಕ್ಕಿಗೆ ಬಂದು ಔಷಧಿ ಕೊಂಡುಹೋಗಲು ಹೇಳಿ ಬಂದ ದಾರಿಯಲ್ಲೇ ವಾಪಸಾದರು. .

ಮರುದಿನ ಒಲೆಯ ಬೆಳಕಿನಲ್ಲಿ ಹೆರಿಗೆ ಮಾಡಿಸಿದ ಯುವಕ ಡಾಕ್ಟರ ಕಥೆ ಊರಲೆಲ್ಲ ಹರಡಿತು. ಮುಂದಿನ ಬಹುವರ್ಷಗಳ ಕಾಲ ಈ ಕಥೆ ಹರಡುತ್ತ ಬಂತು. ನಾನು ತಂದೆಯವರ ಜೀವನ ಚರಿತ್ರೆ ಬರೆಯಲು ತೊಡಗಿದಾಗ, ಭೇಟಿ ಮಾಡಿದ ಪ್ರತಿಯೊಬ್ಬರೂ ಮಾತು ಮೊದಲು ಮಾಡುವುದೇ ಈ ಪ್ರಸಂಗದಿಂದ.

ಮುಂದೆ 40 ವರ್ಷಗಳ ನಂತರ ಅದೇ ನಮ್ಮೂರಿಗೆ ಡಾಕ್ಟರಾಗಿ ಬಂದ ನನ್ನ ತಮ್ಮನೂ ಹಲವು ಬಾರಿ ಇದೇ ಕಥೆಯನ್ನು .ಪುನರುಚ್ಚರಿಸಿದ. ಭಾರತದ ಹಳ್ಳಿಗಾಡಿನಲ್ಲಿ ಶ್ರೀಸಾಮಾನ್ಯ ಇಂದಿಗೂ ಹಾಗೇ ಉಳಿದಿರಬಹುದು. ***

ಡಾ. ರಾಜಕುಮಾರ್ ಜೊತೆ ಹರಟೆ

- ಎಂ.ಎಸ್. ನರಸಿಂಹಮೂರ್ತಿ

ವರ್ಷ 1996, ಬೆಳ್ಳಿತೆರೆಗೆ 61 ವರ್ಷ ತುಂಬಿತ್ತು. `ಸತಿ ಸುಲೋಚನ' 1934ರಲ್ಲಿ ತೆರೆಕಂಡ ಕನ್ನಡದ ಮೊದಲ ವಾಕ್ ಚಿತ್ರ. ಈ ಸಂದರ್ಭದ ಸವಿನೆನಪಿಗಾಗಿ ದಾವಣಗೆರೆಯಲ್ಲಿ ಒಂದು ಅದ್ದೂರಿ ಸಮಾರಂಭ ಏರ್ಪಾಡಾಗಿತ್ತು. ಸುಮಾರು 350 ಪುಟಗಳ ಬೃಹತ್ ಸ್ಮರಣಸಂಚಿಕೆ `ಬೆಳ್ಳಿತೆರೆ-61" ಅಂದು ಬಿಡುಗಡೆ ಆಯಿತು. ಮಾಸ್ಟರ್ ಹಿರಣ್ಣಯ್ಯ, ಸೋರಟ್ ಅಶ್ವಥ್, ಹಂಸಲೇಖ, ಆರ್.ಎನ್.ಜಯಗೋಪಾಲ್, ಎಂ.ನರೇಂದ್ರಬಾಬು, ಜಿ.ವಿ.ಅಯ್ಯರ್ ಮುಂತಾದವರು ಈ ಸಂಚಿಕೆಗೆ ಲೇಖನಗಳನ್ನು ಬರೆದಿದ್ದಾರೆ.

ಈ ಸ್ಮರಣ ಸಂಚಿಕೆಗೆ ಡಾ.ರಾಜಕುಮಾರ್ ಅವರ ಬಗ್ಗೆ ಒಂದು ವಿಶೇಷ ಸಂದರ್ಶನ ಲೇಖನ ಬೇಕೆಂದು ಚಲನಚಿತ್ರ ಮಾಹಿತಿ ಸಂಗ್ರಹಕಾರರಾದ ಗೆಳೆಯ ಕೆ.ಜಿ.ರಾಮಚಂದ್ರಾಚಾರ್ ನಮ್ಮ ಮನೆಗೆ ಬಂದು ಹೇಳಿದರು. ಡಾ.ರಾಜ್ ಅವರ ಸಂದರ್ಶನ ಎಂಬ ಮಾತೇ ನನ್ನನ್ನು ಪುಳಕಗೊಳಿಸಿತು. ಡಾ.ರಾಜ್ ಅವರನ್ನು ಕಂಡಿದ್ದೆ, ಮಾತಾಡಿಸಿದ್ದೆ. ಆದರೆ ಅವರ ಮನೆಗೇ ಹೋಗಿ ಹರಟೆ ಹೊಡೆಯುತ್ತಾ ಸಂದರ್ಶನ ಮಾಡುವ ಅಪೂರ್ವ ಅವಕಾಶ ಒದಗಿದ್ದು ನನ್ನ ಭಾಗ್ಯ.

ನಾನು ಡಾ.ರಾಜ್ ಅವರ ಮನೆಗೆ ನಿಗದಿತ ದಿನ ಪ್ರೆಸ್ ಫೋಟೋಗ್ರಾಫರ್, ಆಚಾರ್ ಜೊತೆ ಹೋದೆ. ಬಾಗಿಲಲ್ಲೇ ಇದ್ದ ಡಾ.ರಾಜ್ ಅವರು ನಮ್ಮನ್ನು ನಗುಮುಖದಿಂದ ಸ್ವಾಗತಿಸಿದರು. ಭಗವಾನ್, ಪಾರ್ವತಮ್ಮ ರಾಜಕುಮಾರ್ ಬಂದು ಮಾತಾಡಿಸಿದರು. ಲಘು ಉಪಾಹಾರವಾಯಿತು.

ವಾಯ್ಸ್ ರೆಕಾರ್ಡರ್ ಮುಂದಿಟ್ಟು ರಾಜ್ ಅವರನ್ನು ಮಾತಿಗೆ ಎಳೆದೆ. ಕನ್ನಡ ಚಿತ್ರರಂಗಕ್ಕೆ ಮೊಟ್ಟಮೊದಲ ಬಾರಿಗೆ `ದಾದಾ ಸಾಹೇಬ್ ಫಾಲ್ಕೆ' ಪ್ರಶಸ್ತಿ ತಂದುಕೊಟ್ಟಿದ್ದು ನೆನಪು ಮಾಡಿದೆ. `ಬೇಡರ ಕಣ್ಣಪ್ಪ' ರಾಷ್ಟ್ರಮಟ್ಟದಲ್ಲಿ ಪುರಸ್ಕಾರ ಪಡೆದ ಮೊದಲ ಚಿತ್ರ, ಮೊದಲ ಬಾರಿಗೆ `ಪದ್ಮಭೂಷಣ' ಪಡೆದ ನಟ ಎಂದೆಲ್ಲ ಹೇಳಿದೆ. ನವದೆಹಲಿಯಲ್ಲಿ (ಆಗಸ್ಟ್ 6, 1996) ಫಾಲ್ಕೆ ಪ್ರಶಸ್ತಿ ಸ್ವೀಕರಿಸಿದ ಸಮಯದಲ್ಲಿ ಪತ್ರಕರ್ತರು, ದೂರದರ್ಶನದವರು, ವಿವಿಧ ಚಾನೆಲ್ಲುಗಳವರು ಹಿಂದಿ-ಇಂಗ್ಲಿಷಿನಲ್ಲಿ ಪ್ರಶ್ನೆಗಳನ್ನು ಹಾಕಿದಾಗ ಡಾ.ರಾಜ್ ಉತ್ತರಿಸಿದ್ದು ಕನ್ನಡದಲ್ಲಿ !

``ಕ್ಷಮಿಸಿ, ನನ್ನ ಮಾತೃಭಾಷೆ ಕನ್ನಡ. ಹರಕು-ಮುರುಕು ಇಂಗ್ಲಿಷಿನಲ್ಲಿ ನಾನು ಮಾತನಾಡಲಾರೆ'' ಎಂದಿದ್ದರು. ಭಗವಾನ್ ಅವರು ಡಾ.ರಾಜ್ ಅವರ ಮಾತುಗಳನ್ನು ಇಂಗ್ಲಿಷಿಗೆ ಅನುವಾದಿಸಿ ಸುದ್ದಿ ಮಾಧ್ಯಮದ ಮಂದಿಗೆ ಹೇಳಿದ್ದರು. ಡಾ. ರಾಜ್ ಮುಗುಳ್ನಕ್ಕು ``ಇದು ಅಭಿಮಾನಿ ದೇವರುಗಳ ಆಶೀರ್ವಾದ'' ಎಂದರು.

ಗುಬ್ಬಿ ವೀರಣ್ಣನವರ ನಾಟಕದ ಕಂಪನಿಗೆ ಅವರು ಸೇರಿದಾಗ ವಯಸ್ಸು ಎಂಟು ಮಾತ್ರ. 1954ರಲ್ಲಿ `ಬೇಡರ ಕಣ್ಣಪ್ಪ' ಚಿತ್ರದ ನಾಯಕ ನಟ ಆಗುವವರೆಗಿನ ಆ ಹಳೆಯ ದಿನಗಳನ್ನು ನೆನಪು ಮಾಡಿಕೊಂಡರು. ತುಂಬಾ ಕಷ್ಟದ ದಿನಗಳನ್ನು ನಾಟಕ ಕಲಾವಿದರು ಅನುಭವಿಸಿದ್ದಾರೆ. ಗುಬ್ಬಿ ವೀರಣ್ಣನವರು ಐದು ದಿನಕ್ಕೆ ಒಂದೊಂದು ನಾಟಕವನ್ನು ಬದಲಾಯಿಸುತ್ತಿದ್ದರು. ಜನರು ಜಾತ್ರೆಗೆ ಬಂದಂತೆ ಎತ್ತಿನ ಗಾಡಿಗಳನ್ನು ಕಟ್ಟಿಕೊಂಡು ಸುತ್ತಮುತ್ತಲಿನ ಹಳ್ಳಿಗಳಿಂದ ಗುಂಪುಗುಂಪಾಗಿ ನಾಟಕಕ್ಕೆ ಬರುತ್ತಿದ್ದರು ಎಂದು ಫ್ಲ್ಯಾಷ್ ಬ್ಯಾಕಿಗೆ ಹೋದರು.

ಒಂದು ಶೋಗೆ ಒಂದು ಸಾವಿರ ರೂಪಾಯಿ ಕಲೆಕ್ಷನ್ ಎಂದರೆ ಆ ದಿನಗಳಲ್ಲಿ ಬಹುದೊಡ್ಡ ಮೊತ್ತ! ದಿನಕ್ಕೆರಡು ಷೋ ಮಾಡಬಹುದು ಎಂದು ಕೆಲವು ಕಲಾವಿದರು ಗುಬ್ಬಿ ವೀರಣ್ಣನವರಿಗೆ ಹೇಳಿದರು. ಆಗ ಯಜಮಾನರು ಹೇಳಿದ ಮಾತನ್ನ ಡಾ.ರಾಜಕುಮಾರ್ ಸ್ಮರಿಸಿಕೊಂಡಿದ್ದು ಹೀಗೆ:

`ನಮ್ಮ ಮಾತಿಗೆ ವೀರಣ್ಣನವರು ಒಪ್ಪಲಿಲ್ಲ. ಚೆನ್ನಬಸವೇಶ್ವರ ನಮಗೆ ಕೊಡೋದು ಕೊಟ್ಟೇ ಕೊಡ್ತಾನೆ. ನಮಗೆ ಕೊಡೋಕೆ ಅಂತ ಒಂದಿಷ್ಟು ಹಣಾನ ಅವನು ಕೈಯಲ್ಲಿ ಹಿಡ್ಕೊಂಡಿರ್ತಾನೆ. ಅವನಾಗಿ ಅವನು ಕೊಡ್ಬೇಕು. ನಾವಾಗಿ ಹೋಗಿ ಅವನ ಕೈಯಲ್ಲಿರೋ ಹಣಾನ ಕಿತ್ಕೊಂಡು ಬರಬಾರ್ದು'.

ಹಾಸ್ಯ ಚಲನಚಿತ್ರಗಳ ಬಗ್ಗೆ ಅವರ ಅಭಿಪ್ರಾಯ ಕೇಳಿದೆ. `ಚಲನಚಿತ್ರಗಳಲ್ಲಿ ಹಾಸ್ಯ ಇರಬೇಕು ನಿಜ, ಇತ್ತೀಚಿನ ದಿನಗಳಲ್ಲಿ ಹಾಸ್ಯ ಬೇರೆ ದಿಕ್ಕಿನಲ್ಲಿ ಹೋಗ್ತಾ ಇದೆ. ಮೊದಲು ನರಸಿಂಹರಾಜು, ಬಾಲಣ್ಣನ್ನ ನೋಡಿದ ಕೂಡಲೇ ಜನ ನಗ್ತಾ ಇದ್ರು. ಹಾಸ್ಯ ಆರೋಗ್ಯಕರವಾಗಿ ಇರಬೇಕು. ಕತೆಗೆ ಹಾಸ್ಯದ ಟ್ರ್ಯಾಕ್ ಹೊಂದಾಣಿಕೆ ಆಗಬೇಕು. ಕ್ಷಣಿಕ ಮನರಂಜನೆಗೆ ಅಗನತ್ಯವಾದ ಪದಗಳನ್ನ ಹಾಕಿಕೊಂಡರೆ ಅದು ಹೆಚ್ಚು ದಿನ ಬಾಳಿಕೆ ಬರೊಲ್ಲ' ಎಂದರು.

ರಾಜಕುಮಾರ್ ಅವರ ಮಾತು ನನ್ನ ಮೇಲೆ ಗಾಢ ಪರಿಣಾಮ ಬೀರಿತು. ಅವರು ಹೇಳಿದ್ದು ಡಬ್ಬಲ್ ಮೀನಿಂಗ್ ಡೈಲಾಗ್ ಗಳಿಗೆ ಹೆಚ್ಚಿನ ಆಯಸ್ಸು ಇಲ್ಲ ಎಂದು. ಅದು ನಿಜ ಎನ್ನಿಸಿತು. ಅವರ ಮಾತು ನನಗೆ ದಾರಿದೀಪವಾಯಿತು. ನಾನು ಬರೆಯುತ್ತಿದ್ದ ಧಾರಾವಾಹಿಗಳಲ್ಲಿ ಡಬ್ಬಲ್ ಮೀನಿಂಗ್ ಬಾರದಂತೆ ಜಾಗ್ರತೆ ವಹಿಸಿದೆ.

1992ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದ್ದ ನನ್ನ `ವರ್ಗಾವರ್ಗಿ' ಕೃತಿಯನ್ನು ತೆಗೆದುಕೊಂಡು ಹೋಗಿದ್ದೆ. ಸಂದರ್ಶನ ಮುಗಿದ ಕೂಡಲೇ ಅವರ ಕೈಗೆ ಪುಸ್ತಕ ಕೊಟ್ಟೆ. ಅವರು ಪ್ರೀತಿಯಿಂದ ಸ್ವೀಕರಿಸಿದರು. ಕ್ಯಾಮರಾಗಳು ಕ್ಲಿಕ್ ಆದವು. ಅನಂತರ ರಾಜಕುಮಾರ್ ಯಾವ ರೀತಿ ಪ್ರೋತ್ಸಾಹದ ಮಾತುಗಳು ಹೇಳಿದರು ಎಂಬುದು ನೆನಪಿದೆ.

"ಈ ಕರ್ಟನ್ ಹತ್ರ ನನಗೆ ಪುಸ್ತಕ ಇನ್ನೊಮ್ಮೆ ಕೊಡಿ. ಅಲ್ಲಿ ಫೋಟೋ ಚೆನ್ನಾಗಿ ಬರುತ್ತೆ. ಬನ್ನಿ, ಇನ್ನೊಂದು ಫೋಟೋ ತೆಗೆಸಿಕೊಳ್ಳೋಣ" ಎಂದ ಅವರು ತಮಗೇ ಫೋಟೋ ಬೇಕೇನೋ ಎಂಬಂತೆ ನನ್ನನ್ನು ಕರೆದುಕೊಂಡು

ಹೋಗಿ ತಮ್ಮ ಮನೆಯ ಕರ್ಟನ್ ಮುಂದೆ ನಿಲ್ಲಿಸಿ ಒಂದು ಫೋಸ್ ಕೊಟ್ಟರು. ಆ ಫೋಟೋವನ್ನ ಬ್ಲೋ ಅಪ್ ಮಾಡಿ ನಮ್ಮ ಮನೆಯಲ್ಲಿ ಹಾಕಿಕೊಂಡಿದ್ದೇನೆ.

ಫೋಟೋ ಎಂದರೆ ಸಿಡುಕುವ ಇಂದಿನ ಕಲಾವಿದರೆಲ್ಲಿ, ಡಾ.ರಾಜ್ ಎಲ್ಲಿ? ಅವರ ಸರಳತೆಗೆ ಇದು ಇಂದು ಉದಾಹರಣೆ. ಒಂದು ಗಂಟೆ ಕಾಲಾವಕಾಶ ಕೊಟ್ಟಿದ್ದ ಸಂದರ್ಶನ ಮೂರು ಗಂಟೆಗಳಷ್ಟು ದೀರ್ಘ ಕಾಲ ನಡೆಯಿತು.

`ನಮಗೆ ನೀಡುವ ಪಾತ್ರ ನಮ್ಮಲ್ಲಿ ಪ್ರವೇಶಿಸಬೇಕು. ನಮಗೆ ಗೋಚರವಾಗದ ಒಂದು ಶಕ್ತಿ ನಮ್ಮನ್ನು ಆಡಿಸುತ್ತೆ. ನಾವು ಪ್ರವೇಶ ಮಾಡಿದ ಪಾತ್ರದ ಶಕ್ತಿ ಅದು!' ಎಂದು ನಕ್ಕರು.


******

ನಿಘಂಟು ಪರಿಚಯ

ಹವಿ-ಸವಿ ಕೋಶ (ಹವ್ಯಕ-ಕನ್ನಡ ನಿಘಂಟು)

- ಜಿ.ವಿ. ಅರುಣ

ನಮ್ಮ ಪ್ರಿಯ ಭಾಷೆ ಕನ್ನಡವು ಅನೇಕ ಪ್ರಾಂತೀಯ ಪ್ರಭೇದಗಳನ್ನು ಒಳಗೊಂಡಿದೆ. ಮಂಗಳೂರು ಕನ್ನಡ, ಬೆಂಗಳೂರು ಕನ್ನಡ, ಧಾರವಾಡದ ಕನ್ನಡ, ಬಳ್ಳಾರಿ ಕನ್ನಡ ಹೀಗೆ. ನಮ್ಮ ರಾಜ್ಯದೊಡನೆ ಗಡಿಯನ್ನು ಹಂಚಿಕೊಂಡಿರುವ ಇತರ ರಾಜ್ಯಗಳ ಭಾಷೆಗಳ ಪ್ರಭಾವವು ಗಡಿನಾಡಿನ ಕನ್ನಡದ ಮೇಲೆ ಆಗಿರುತ್ತದೆ. ಹಾಗೆಯೇ ಆ ಉಭಯ ಭಾಷಾ ವಲಯಗಳಲ್ಲಿ ಕನ್ನಡದ ಭಾಷೆಯ ಪ್ರಭಾವವು ಅಲ್ಲಿಯ ನೆರೆಯ ಭಾಷೆಗಳ ಮೇಲೂ ಆಗಿರುತ್ತದೆ. ಮಲೆಯಾಳಂ, ತಮಿಳು, ತೆಲುಗು, ಉರ್ದು, ಮರಾಠಿಗಳ ಜೊತೆಗೆ ನಮ್ಮ ರಾಜ್ಯದಲ್ಲೇ ಇರುವ, ಪಂಚದ್ರಾವಿಡ ಭಾಷೆಗಳಲ್ಲಿ ಒಂದಾದ, ತುಳು ಭಾಷೆಯ ಜೊತೆಗೆ ಕನ್ನಡದ ಕೊಡು–ಕೊಳ್ಳುವಿಕೆ ಇದ್ದೇ ಇದೆ. ಕೊಂಕಣಿ, ಕೊಡವ ಭಾಷೆಗಳು ಸೀಮಿತ ವಲಯದಲ್ಲಿ ಬಳಕೆಯಲ್ಲಿವೆ.



ಈ ಪ್ರಭೇದಗಳಲ್ಲದೆ ಕನ್ನಡ ನಾಡಿನಲ್ಲಿ ಇನ್ನೂ ಹಲವು ಪ್ರಾದೇಶಿಕ ಉಪಭಾಷೆಗಳು ಬಳಕೆಯಲ್ಲಿವೆ. ಇವುಗಳನ್ನು ಬಳಸುವ ಪರಿಮಿತ ಜನರ ಪರಿಸರದಿಂದ ಅವು ಒಂದು ಬಗೆಯ ಸಾಮಾಜಿಕ ಉಪಭಾಷೆಗಳಾಗಿರುತ್ತವೆ. ಹವ್ಯಕ ಕನ್ನಡ, ಕೋಟ ಕನ್ನಡ, ಕೋಟೆ ಕನ್ನಡ, ಭೈರ ಕನ್ನಡ, ಗೌಡ ಕನ್ನಡ ಮುಂತಾದವು ಅವುಗಳಲ್ಲಿ ಹಲವು. ಶ್ರೀವಿಜಯನು ತನ್ನ ಕವಿರಾಜಮಾರ್ಗದಲ್ಲಿ ಹೇಳಿರುವ "ಕನ್ನಡಂಗಳ್" ಎಂಬುದು ಇವೆಲ್ಲವನ್ನು ಒಳಗೊಳ್ಳುತ್ತದೆ.

ಒಮ್ಮೆ ಖ್ಯಾತ ಲೇಖಕರಾದ ಶ್ರೀ ಕೆ.ವಿ. ತಿರುಮಲೇಶ್ ಅವರ “ತರತರದ ತರಕಾರಿ” ಎಂಬ ಪ್ರಬಂಧವನ್ನು ಓದುತ್ತಿದ್ದೆ. ಅಲ್ಲಿ ಬಡಮಸ್ಥ, ಕುಂಞಕುಟ್ಟಿ ಸಂಸಾರ, ಬೆಟ್ಟುಗದ್ದೆ, ಮೇಲಾರ, ಸೌಳಿ, ದಾರಳೆ, ಪಟಗಲ, ಅಳತ್ತೊಂಡೆ, ಕೆಮ್ಮುಂಡೆ ಮುಂತಾದ ಅನೇಕ ಶಬ್ದಗಳನ್ನು ಉಪಯೋಗಿಸಿದ್ದು, ವಿಶೇಷವಾಗಿ ನನ್ನ ಗಮನವನ್ನು ಸೆಳೆದಿತ್ತು. ಕನ್ನಡದ ಜಾಯಮಾನಕ್ಕೆ ಹೊಂದುವ ಶಬ್ದಗಳಾದರೂ ನಾನು ಕೇಳದೇ ಇದ್ದ ಈ ಹಲವು ಶಬ್ದಗಳು ನನ್ನ ಕುತೂಹಲವನ್ನು ಕೆರಳಿಸಿದ್ದವು. ನನ್ನಂಥ ಓದುಗರಿಗೆ ತಿಳಿಯಲಿ ಎಂದೇ ಶ್ರೀ ತಿರುಮಲೇಶ್ ಅವರು ಆ ಹವ್ಯಕ ಶಬ್ದಗಳನ್ನು ಕಂಸದಲ್ಲಿ ನೀಡಿದ್ದರು. ಆ ಲೇಖನದ ಪ್ರಾರಂಭದ ವಾಕ್ಯ ಹೀಗಿದೆ: ‘ತರಕಾರಿ, ನೆಟ್ಟಿಕಾಯಿ

(ಹವ್ಯಕ), ಕಾಯಿಪಲ್ಲೆ (ಉ ಕನ್ನಡ), ಕಾಯಿಕರೆಪ್ಪು (ತುಳು) – ಆಹಾ, ಅವುಗಳದೇ ಒಂದು ಅದ್ಭುತ ಲೋಕ.' ಆಗ ನನಗೆ ಆ ಶಬ್ದಗಳದ್ದೇ ಒಂದು ಅದ್ಭುತ ಲೋಕವಾಗಿ ಕಂಡಿತ್ತು!

ಇದು ಇದ್ದಕ್ಕಿದ್ದಂತೆ ನೆನಪಿಗೆ ಬರಲು ಒಂದು ನಿರ್ದಿಷ್ಟ ಕಾರಣವಿದೆ. ಅದು ಈಚೆಗೆ ನಾನು ನೋಡಿದ "ಹವಿ–ಸವಿ ಕೋಶ" ಎಂಬ ಹವ್ಯಕ–ಕನ್ನಡ ನಿಘಂಟು. ಇದರ ರಚನಕಾರರು ಕಾಸರಗೋಡಿನ ಶ್ರೀ ವಿ.ಬಿ.ಕುಳಮರ್ವ ಅವರು. ನಾಲ್ಕು ದಶಕಗಳಿಗೂ ಹೆಚ್ಚಿನ ಕಾಲ ಅವರು ತತ್ಪರತೆಯಿಂದ, ಏಕಾಂಗಿಯಾಗಿ ಮಾಡಿದ ಸ್ತುತ್ಯಕಾರ್ಯದ ಫಲ ಕಳೆದ ವರ್ಷದ ಕೊನೆಗೆ ಪ್ರಕಟಗೊಂಡ ಈ ಹವ್ಯಕ–ಕನ್ನಡ ನಿಘಂಟು.

ಹವಿ–ಸವಿ ಕೋಶ

ಹವಿ–ಸವಿ ಕೋಶ (ಹವ್ಯಕ–ಕನ್ನಡ ನಿಘಂಟು)
ಲೇಖಕರು: ಶ್ರೀ ವಿ. ಬಿ. ಕುಳಮರ್ವ
ಮೊದಲ ಮುದ್ರಣ ೨೦೨೧; ಪುಟಗಳು ೫೧೦;
ಬೆಲೆ: ರೂ. ೫೦೦/–
ಸೌಮ್ಯ ಪ್ರಕಾಶನ,
ಕುಳಮರ್ವ, "ಶ್ರೀನಿಧಿ', ಭಟ್ ಕಂಪೌಂಡ್.
ನಾರಾಯಣಮಂಗಲ, ಅಂಚೆ: ಕುಂಬ್ಳೆ,
ಮಂಜೇಶ್ವರ ತಾಲೂಕು,
ಕಾಸರಗೋಡು, ಕೇರಳ ರಾಜ್ಯ– ೬೭೧೩೨೧
ಮೊಬೈಲ್: ೯೪೪೬೦೮೮೫೧೫

ಇದಕ್ಕೆ ಮೊದಲು ನಾನು ಮೂರು ಬೇರೆ ಬೇರೆ ರೀತಿಯ ಹವಿಗನ್ನಡ ಪುಸ್ತಕಗಳನ್ನು ನೋಡಿದ್ದೆ. ಮೊದಲನೆಯದು ಪ್ರೊ॥ ಎಂ.ಮರಿಯಪ್ಪ ಭಟ್ಟರು ಸಿದ್ಧಪಡಿಸಿದ್ದ 'ಹವ್ಯಕ ಇಂಗ್ಲಿಷ್ ನಿಘಂಟು.' ಮತ್ತೊಂದು ಡಾ। ಶ್ರೀಕೃಷ್ಣಭಟ್ ಅರ್ತಿಕಜೆ ಅವರ 'ಹವ್ಯಕ ಗಾದೆಗಳು.' ಮೂರನೆಯದು ಡಾ। ಉಪ್ಪಂಗಳ ರಾಮ ಭಟ್ಟ ಅವರು ರಚಿಸಿದ ಹವ್ಯಕ ಭಾಷೆಯ ಸಾಹಿತ್ಯ, ಸಂಸ್ಕೃತಿ, ನುಡಿರೂಪಗಳನ್ನು ಕುರಿತ ಸಂಶೋಧನಾ ಲೇಖನಗಳನ್ನು ಒಳಗೊಂಡ ಪುಸ್ತಕ 'ಹವಿಕ. ಇದನ್ನು ಓದಿದಾಗ ನನ್ನ ಗಮನಕ್ಕೆ ಬಂದದ್ದು ಇದು: ಹವಿಗನ್ನಡದಲ್ಲಿ ಸ್ತ್ರೀ ಸೂಚಕ ಪ್ರತ್ಯಯಕ್ಕೆ ಹತ್ತುವ ಕ್ರಿಯಾಪದವು ನಪುಂಸಕ ಲಿಂಗವಾಗಿ ಇರುತ್ತದಂತೆ. "ಮಗಳು ಹಾಡಿತ್ತು; ಓಡಿತ್ತು" ಎನ್ನುವ ರೀತಿ. ಅದೇ ರೀತಿ ಕೆಲವು ವರ್ಗದ ಗಂಡಸರನ್ನು ಬಿಟ್ಟು ಉಳಿದವರ ಎಲ್ಲ ಕ್ರಿಯಾಪದಗಳೂ ನಪುಂಸಕ ಲಿಂಗದಲ್ಲಿ ಇರುತ್ತದಂತೆ. ಇದು ಆ ಭಾಷೆಯ ವೈಶಿಷ್ಟ್ಯ. ಇವುಗಳ ಬಗ್ಗೆ ವಿವರಗಳಿಗೆ "ಹವಿಕ" ಪುಸ್ತಕವನ್ನು ನೋಡಿ. ಈಗ ಶ್ರೀ ಕುಳಮರ್ವರ "ಹವಿ – ಸವಿ ಕೋಶ" .

ಶ್ರೀ ಕುಳಮರ್ವ ಅವರ ಕಾರ್ಯಸ್ಥಾನ ಕಾಸರಗೋಡು. ಅದು ಅಚ್ಚ ಕನ್ನಡದ ನೆಲ. ಕನ್ನಡದ ಮೊದಲ ರಾಷ್ಟ್ರಕವಿಗಳಾದ ಮಂಜೇಶ್ವರ ಗೋವಿಂದ ಪೈ ಅವರ ಜನ್ಮಸ್ಥಳ. ಅದರೆ ಅದು ಕರ್ನಾಟಕಕ್ಕೆ ಸೇರುವುದರಿಂದ ವಂಚಿತವಾದ ಪ್ರದೇಶ. ಈಗ ಕೇರಳಕ್ಕೆ ಸೇರಿದ್ದರೂ ಅಲ್ಲಿ ಕನ್ನಡವು ಇನ್ನೂ ನೆಲೆ ನಿಂತಿರುವುದಕ್ಕೆ ಶ್ರೀ ಕುಳಮರ್ವ ಅವರಂಥವರು ಕಾರಣ. ಅವರು ಕೇರಳದ ವಿದ್ಯಾಭ್ಯಾಸ ಇಲಾಖೆಯಲ್ಲಿ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದ್ದರು. ಅವರು ಅಧ್ಯಾಪನದ ಜೊತೆಗೆ ಅಲ್ಲಿಯ ಮಾಧ್ಯಮಿಕ ಹಾಗೂ ಪ್ರೌಢ ಶಾಲಾ ತರಗತಿಗಳ ಕನ್ನಡ

ಪಠ್ಯಪುಸ್ತಕಗಳ ಹಾಗೂ ಶಿಕ್ಷಕರ ಕೈಪಿಡಿಗಳ ರಚನೆಯಲ್ಲಿ ತೊಡಗಿಸಿಕೊಂಡಿದ್ದರು. ಮೂರು ದಶಕಗಳಿಗೂ ಸುದೀರ್ಘ ಕಾಲ ಆ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಅನಂತರ ಈ ಕಾರ್ಯಕ್ಕೆ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಈ ಕೆಲಸದ ವೇಳೆ ಆ ಪಠ್ಯಪುಸ್ತಕಗಳಿಗೆ ಪೂರಕವಾಗಿ, ಸಮಗ್ರ ಪುಸ್ತಕಕ್ಕೆ ಸಂಬಂಧಿಸಿದ ಎಲ್ಲಾ ಹೊಸ ಶಬ್ದಗಳನ್ನು ಹೆಕ್ಕಿ ತೆಗೆದು ಅವುಗಳಿಗೆ ಅರ್ಥ ನೀಡಿ ಶಬ್ದಕೋಶವನ್ನು ತಯಾರಿಸಿ ಕೊಡುತ್ತಿದ್ದರು.

ಅವರು ಕಾಲೇಜಿನ ದಿನಗಳಿಂದ ಹವ್ಯಕ-ಕನ್ನಡ ನಿಘಂಟನ್ನು ಮಾಡಬೇಕೆಂಬ ಉತ್ಕಟ ಅಭಿಲಾಷೆ ಹೊಂದಿದ್ದರು. ಇದಕ್ಕಾಗಿ ಅವರು ಹವಿಗನ್ನಡ ಎಂದು ಕರೆಯುವ ಹವ್ಯಕ ಕನ್ನಡದ ಶಬ್ದಗಳ ಸಂಗ್ರಹದಲ್ಲಿ ತೊಡಗಿಕೊಂಡಿದ್ದರು. ಅನೇಕ ಹಿರಿಯರನ್ನು ಸಂಪರ್ಕಿಸಿ ಅವರಿಂದ ಶಬ್ದ ಸಂಗ್ರಹ ಮಾಡಿದ್ದರು. ಕೆಲವು ಸಮಯದಲ್ಲಿ ಈ ಕೆಲಸವು ಮುಂದೆ ಸಾಗದೆ ಕೈಚೆಲ್ಲುವಂತಾದರೂ ಮತ್ತೆ ಅದರಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಹೀಗೆ ಸಂಗ್ರಹ ಮಾಡಿದ ಶಬ್ದಗಳಿಗೆ ಅರ್ಥ ನಿರ್ಧಾರ ಮಾಡಿ, ನಿಘಂಟಿನಲ್ಲಿ ಅನೇಕ ಶಬ್ದಗಳಿಗೆ ಅವು ಪ್ರಯೋಗವಾಗುವ ವಾಕ್ಯದ ಉದಾಹರಣೆಗಳನ್ನು ನೀಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಹವ್ಯಕ ಯುವಕ ಯುವತಿಯರು ತಮ್ಮ ಭಾಷೆಯಲ್ಲಿ ಮಾತನಾಡುವುದನ್ನು ಕಡಿಮೆ ಮಾಡುತ್ತಿದ್ದಾರೆ ಎಂಬ ಮಾತು ಆಗಾಗ ಕೇಳಿಬರುತ್ತಿರುತ್ತದೆ. ಇಂಥ ಸಮಯದಲ್ಲಿ ವಿಶಿಷ್ಟ ಹವಿಗನ್ನಡ ಶಬ್ದಗಳು ಮರೆತು ಹೋಗುವುದಕ್ಕೆ ಮುಂಚೆ, ಅವನ್ನು ಅರ್ಥಸಹಿತ ದಾಖಲಿಸಿರುವುದು ಅವುಗಳಿಗೆ ಅಮರತ್ವವನ್ನು ತಂದುಕೊಟ್ಟಂತೇ ಸರಿ. ಹವ್ಯಕ ಯುವಜನತೆ ಕೀಳರಿಮೆಯನ್ನು ಬಿಟ್ಟು ತಮ್ಮ ವಿಶಿಷ್ಟ ಹವಿ ನುಡಿಯನ್ನು ಮನೆಗಳಲ್ಲಿ, ಬಂಧುಮಿತ್ರರೊಡನೆ ಆಡಿ, ನುಡಿದು, ಉಳಿಸಿ ಬೆಳೆಸಬೇಕು. ಅದರ ಹಿರಿಮೆ ಎಂದೂ ಹಿರಿದಾಗಿರುವಂತೆ ಎತ್ತಿ ಹಿಡಿಯಬೇಕು. ಈ ಎಲ್ಲ ಕಾರ್ಯಗಳಿಗೂ ಒಳ್ಳೆಯ ತಳಹದಿಯನ್ನು ನೀಡಲು ಈ ಹವ್ಯಕ-ಕನ್ನಡ ನಿಘಂಟು ಒಳ್ಳೆಯ ಸಾಧನವಾಗುತ್ತದೆ.

ಶ್ರೀ ತಿರುಮಲೇಶ್ ಅವರಂತೆ ಇನ್ನೂ ಅನೇಕರ ಕನ್ನಡದ ಕೃತಿಗಳಲ್ಲಿ ಹವಿಗನ್ನಡ ಶಬ್ದಗಳು ಇಣುಕಿವೆ. ಮುಂದೆ ಆ ಭಾಷೆಯ ಬಗ್ಗೆ ಒಲವಿರುವ ಲೇಖಕರು ಕನ್ನಡದಲ್ಲಿ ಬರೆಯುವಾಗ ಸೂಕ್ತ ಹವಿಗನ್ನಡ ಶಬ್ದಗಳನ್ನು ಉಪಯೋಗಿಸಿ (ಕಂಸಗಳಲ್ಲಿ ಅವುಗಳ ಅರ್ಥವನ್ನು ನೀಡಿ) ಬರೆದರೆ, ಕಾಲಕ್ರಮೇಣ ಅವು ಸರ್ವಮಾನ್ಯ ಕನ್ನಡದ ಶಬ್ದಗಳಾಗಿ ಬಿಡುತ್ತವೆ. ಇದರಿಂದ ಕನ್ನಡ ಭಾಷೆಯು ಅಷ್ಟು ಬೆಳೆಯುತ್ತದೆ; ಅಷ್ಟು ಶ್ರೀಮಂತವಾಗುತ್ತದೆ. ಈ ಬಗ್ಗೆ ಯುವ ಹವಿಗನ್ನಡ ಬರಹಗಾರರು ದೃಷ್ಟಿ ಹರಿಸಬೇಕು.

ಉದಾಹರಣೆಗೆ 'ಪದಂಕು/ಪದಂಗು' ಎಂಬ ಶಬ್ದವನ್ನು ನೋಡಿ. ಇದಕ್ಕೆ ಕೆಲಸವಿಲ್ಲದೆ ಅಡ್ಡಾಡುವುದು, ಪರದಾಡುವುದು ಎಂಬ ಅರ್ಥವನ್ನು ನೀಡಿದ್ದಾರೆ. 'ಪದಂಕಟೆ' ಎಂದರೆ ನಿಧಾನವಾಗಿ ಕೆಲಸ ಮಾಡುವ ವ್ಯಕ್ತಿ. ಇವರು 'ಪದಂಕಟಯ್ಯ' / 'ಪದಂಕಟಮ್ಮ' ಆಗಿ ಕನ್ನಡದಲ್ಲಿ ವಿರಾಜಮಾನರಾಗಬಹುದು.

ಮತ್ತೊಂದು ಶಬ್ದವನ್ನು ನೋಡಿ, 'ಆಡಕ್ಕಾಡ". ಇದರರ್ಥ 'ಅಧಿಕೃತವಲ್ಲದ; ಗಾಳಿ ಸುದ್ದಿ' ಎಂದು. ಅದನ್ನು ನಾವು ಬಳಸಿಕೊಂಡು 'ಇಂದು ವಾಟ್ಸಪ್ಪಿನಲ್ಲಿ ಆಡಕ್ಕಾಡದ್ದೇ ಆಟವಾಗಿ ಹೋಗಿದೆ!' ಎಂದು ಉಪಯೋಗಿಸಬಹುದಲ್ಲವೇ? ಹೀಗೆ ಕನ್ನಡದ ಜಾಯಮಾನಕ್ಕೆ ಚೆನ್ನಾಗಿ ಹೊಂದುವ ಅನೇಕ ಹವಿಗನ್ನಡ ಶಬ್ದಗಳನ್ನು ಕನ್ನಡದಲ್ಲಿ ಬಳಸಿ ಜನಪ್ರಿಯ ಮಾಡುವ ಹೊಣೆ ಯುವ ಹವಿಗನ್ನಡ ಬರಹಗಾರರ ಮೇಲಿದೆ.

ಈ ಶಬ್ದಕೋಶದಲ್ಲಿ ಸುಮಾರು ಎಂಟುವರೆ ಸಾವಿರ ಹವ್ಯಕ ಶಬ್ದಗಳಿಗೆ ಅರ್ಥವನ್ನು ನೀಡಿದ್ದಾರೆ. ಹವ್ಯಕರು ಪರಸ್ಪರ ಹವಿಗನ್ನಡದಲ್ಲಿ ಮಾತನಾಡುವಾಗ ಕೆಲವು ಶಬ್ದಗಳನ್ನು – ಸಾನುನಾಸಿಕ ಪುಲ್ಲಿಂಗ ಶಬ್ದಗಳನ್ನು, ಅರೆ ಅನುಸ್ವಾರದಿಂದ ಕೊನೆಗೊಳಿಸಿ ಉಚ್ಚರಿಸುವುದನ್ನು ನಾವು ಗಮನಿಸಬಹುದು. ಈ ನಿಘಂಟಿನಲ್ಲಿ ಅಂಥ ಶಬ್ದಗಳ ಕೊನೆಯ ಅಕ್ಷರದ ಮೇಲೆ 'ಲಿ' ರೀತಿಯ ಸಣ್ಣ ಬಿಂದುವಿನ ಚಿಹ್ನೆಯನ್ನು ನೀಡಿ ಆ ಉಚ್ಚಾರವನ್ನು ಸೂಚಿಸಿದ್ದಾರೆ. ನನ್ನ ಗಮನಕ್ಕೆ ಬಂದ ಇನ್ನೊಂದು ವಿಶೇಷ ಎಂದರೆ ಚ ವರ್ಗದ ಅನುನಾಸಿಕ 'ಞ' ಅಕ್ಷರದಿಂದ ಮೊದಲಾಗುವ ಶಬ್ದಗಳು. ಕನ್ನಡದಲ್ಲಿ ಇಂಥ ಶಬ್ದಗಳು ಇಲ್ಲ. ಇದರ ಜೊತೆಗೆ 'ಞ್ಞ' ಎಂಬ ಒತ್ತಕ್ಷರವು ಹಲವು ಹವಿಗನ್ನಡ ಶಬ್ದಗಳಲ್ಲಿ ಪ್ರಯೋಗವಾಗಿದೆ.

ಹವಿ–ಸವಿ ಕೋಶದ ಮತ್ತೊಂದು ವಿಶೇಷತೆ ಎಂದರೆ ಅದರಲ್ಲಿ ಅನೇಕ ಹವ್ಯಕ ನುಡಿಗಟ್ಟುಗಳನ್ನು ನೀಡಿ ಅದಕ್ಕೆ ಅರ್ಥವನ್ನು ಕೊಟ್ಟಿರುವುದು. ಉದಾಹರಣೆಗೆ ೧) ಅಂತರ್ಲಾಗ ಹಾಕು; ೨) ಕರಟಕೆರಸು. ಇವುಗಳ ಅಧ್ಯಯನ ಬಹಳ ಉಪಯೋಗಿ ಎಂದು ನನ್ನ ಭಾವನೆ. ಚರ್ವಿತಚರ್ವಣ, ತೌಡು ಕುಟ್ಟುವುದು ಇವುಗಳಿಗೆ ಸಂವಾದಿಯಾದ ನುಡಿಕಟ್ಟು ಕರಟಕೆರಸು. ತೆಂಗನ್ನು ತುರಿದು ಬರಿದಾಗಿರುವ ಕರಟವನ್ನು ಕೆರೆದರೆ ಏನು ತಾನೆ ಸಿಕ್ಕೀತು? ಇದನ್ನು ಪರಿಣಾಮಕಾರಿಯಾಗಿ ನಾವು ಕನ್ನಡದಲ್ಲಿ ಬಳಸಬಹುದು.

ಈ ಹವಿ–ಸವಿ ನಿಘಂಟಿನಲ್ಲಿ ದಪ್ಪ ಮೊಳೆಯ ಅಕ್ಷರಗಳನ್ನು ಬಳಸಿರುವುದರಿಂದ ಹಿರಿಯರೂ ಸುಲಭವಾಗಿ ಬಳಸಬಹುದು. ೫೧೦ ಪುಟಗಳ ಈ ಗ್ರಂಥವನ್ನು ಶ್ರೀ ಕುಳಮರ್ವರೇ ಪ್ರಕಟಿಸಿದ್ದಾರೆ. ಹವಿಗನ್ನಡದಲ್ಲಿ ಆಸಕ್ತಿಯಿರುವ ಎಲ್ಲರೂ ಈ ಹವಿ-ಸವಿ ಕೋಶವನ್ನು ತಮ್ಮ ಮನೆಗಳಲ್ಲಿ ಇಟ್ಟುಕೊಂಡು ಉಪಯೋಗಿಸಬೇಕು.

ಕಾಸರಗೋಡಿನಲ್ಲಿ ನೆಲೆ ನಿಂತು, ಈ ಕಾರ್ಯವನ್ನು ಮಾಡಿರುವ ಶ್ರೀ ವಿ. ಬಿ. ಕುಳಮರ್ವ ಅವರನ್ನು ನಾವೆಲ್ಲರೂ ಮನಸಾರೆ ಅಭಿನಂದಿಸೋಣವೇ?

*****

ಪ್ರವಾಸ ಕಥನ

ಮುಂಗ್ಪೂವಿನ ಕವಿಗುರು ರವೀಂದ್ರ ಭವನ

- ಮಹಾಬಲ



ಎರಡು ವರುಷದ ಹಿಂದೆ ನಾವು ಪೂರ್ವ ಭಾರತ ಪ್ರವಾಸ ಹೋಗಿದ್ದೆವು. ಸಿಕ್ಕಿಂ ರಾಜಧಾನಿ ಗ್ಯಾಂಗ್ಟೋಕ್ ನೋಡಿಕೊಂಡು ಡಾರ್ಜಿಲಿಂಗಿಗೆ ಹೊರಡುತ್ತಲಿದ್ದೆವು. ಪಕ್ಕದಲ್ಲಿ ದಾರಿಯುದ್ದ ನಮ್ಮ ಜತೆಯೇ ಸ್ಪರ್ಧೆ ನೀಡುವಂತೆ ಹರಿದು ಬರುತ್ತಿದ್ದ ತೀಸ್ತಾ ನದಿ, ಅದರ ಹಿನ್ನಲೆಯಲ್ಲಿ ಹಿಮಾಲಯ ಎಂಬ ಹೆಸರಿನಂತೆ ಹಿಮಾಚ್ಛಾದಿತವಲ್ಲದಿದ್ದರೂ ಅಡಿಯಿಂದ ಮುಡಿಯವರೆಗೆ ಹಸಿರು ವನಸಿರಿಯನೇ ಹೊದ್ದ ಪೂರ್ವ ಹಿಮಾಲಯದ ಪರ್ವತಶ್ರೇಣಿ, ತೂರಿಬರುತ್ತಿದ್ದ ಕುಳಿರ್ಗಾಳಿ ಒಂದು ಬಗೆಯ ಆಹ್ಲಾದದ ಅಲೆಯನ್ನೇ ಎಬ್ಬಿಸಿತ್ತು. ಕಡಿದಾದ ರಸ್ತೆಯಲ್ಲಿ ನಿಧಾನವಾಗಿಯೇ ನಮ್ಮ ಬಸ್ ಚಲಿಸುತ್ತಿತ್ತು. ಆ ಸೊಬಗ ಸವಿಯಲು ಬಯಸದೆ ನಿದ್ದೆಗೆ ಶರಣಾದವರೂ ಕೆಲವರಿದ್ದರು.

ಡಾರ್ಜಿಲಿಂಗಿನಿಂದ ಮೂವತ್ತೈದು ಕಿ.ಮೀ. ದೂರದಲ್ಲಿದ್ದಾಗ ಪ್ರವಾಸದ ವ್ಯವಸ್ಥಾಪಕ, ಮಾತುಗಾರ ಸಚಿನ್, ಧ್ವನಿವರ್ಧಕ ಕೈಗೆತ್ತಿಕೊಂಡು "ನಿದ್ರಾದೇವಿಯ ಆಲಿಂಗಿಸಿರುವ ಪ್ರವಾಸಿಗಳೇ, ಕಿಟಕಿಯಿಂದ ಪ್ರಕೃತಿಯ ಸೊಬಗನ್ನು ಸವಿಯುತ್ತಿರುವ ರಸಿಕರೇ, ನಮ್ಮ ಮಧ್ಯಾಹ್ನದ ಭೋಜನವನ್ನು ಇಲ್ಲೇ ಹತ್ತಿರದ ಒಂದು ಸುಂದರವಾದ ಹಳ್ಳಿಯಲ್ಲಿ ತೆಗೆದು ಕೊಳ್ಳುತ್ತಿದ್ದೇವೆ. ಅದು ನಿಮ್ಮಲ್ಲಿರುವ ಕವಿಗಳಿಗೆ ಹಾಗೂ ಕವಿಹೃದಯದವರಿಗೆ ಬಹಳ ಸಂತಸ ನೀಡುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಉಳಿದ ವಿವರವನ್ನು ನಿಮಗೆ ಅಲ್ಲಿ ಮಾರ್ಗದರ್ಶಿಯೊಬ್ಬರು ನೀಡುತ್ತಾರೆ" ಎಂದು ಘೋಷಿಸಿದ.



"ಯಾವುದು ಆ ಸ್ಥಳ" ಎಂದು ಕೇಳಿದವರಿಲ್ಲಾ ಅವನದೊಂದೇ ನಗುಮೊಗದ ಉತ್ತರ "ಕಾದು ನೋಡಿ" ಎಂದಷ್ಟೇ.



ಒಂದು ಐದು ಕಿ ಮೀ ಸಾಗುವಷ್ಟರಲ್ಲಿ ಒಂದು ದೊಡ್ಡ ಬಂಗಲೆಯಂತಿದ್ದ ಕಟ್ಟಡದ ಪಕ್ಕ ಬಸ್ ನಿಂತಿತು. ದೂರದಲ್ಲಿ ಬಣ್ಣಬಣ್ಣದ ಹೂವುಗಳಿದ್ದ ಹಲವಾರು ಸಸ್ಯೋದ್ಯಾನಗಳು, ಚಹಾ ತೋಟಗಳು ಎಲ್ಲರ ಗಮನ ಸೆಳೆದವು. ಬಂಗಲೆಯ ಪಕ್ಕದಲ್ಲಿ 'ಸರ್ಕಾರಿ ಕ್ವಿನೈನ್ ಕಂಪನಿ ಲಿಮಿಟೆಡ್' ಎಂಬ ಫಲಕ ಗಮನ ಸೆಳೆಯಿತು. ಬಂಗಲೆಯ ಬಾಗಿಲಲ್ಲೇ ಮತ್ತೊಂದು ಫಲಕ "ಕಬಿಗುರು ರಬೀಂದ್ರ ಭವನ", ಗೇಟಿನೊಳಗೆ ರವೀಂದ್ರರ ಕಪ್ಪು ಶಿಲೆಯ ಎದೆಮಟ್ಟದ ಪುತ್ಥಳಿಯೂ ಬಂದವರನ್ನು ಅಲ್ಲಿಂದಲೇ ಸ್ವಾಗತಿಸುತ್ತಿತ್ತು.

ಹೌದು ಸಚಿನ್ ನಿಜವನ್ನೇ ನುಡಿದಿದ್ದ. ಕವಿ ರವೀಂದ್ರರ ಹೆಸರೇ ಸಾಲದೆ ಕವಿಗಳಲ್ಲಿ, ಕಾವ್ಯಾಸಕ್ತರಲ್ಲಿ ಸಂಚಲನ ಉಂಟು ಮಾಡುವುದಕ್ಕೆ! ನಾನು ಸಚಿನನನ್ನು "ಇದು ರವೀಂದ್ರರ ಜನ್ಮ ಸ್ಥಳವಲ್ಲ, ಕಾರ್ಯಕ್ಷೇತ್ರವೂ ಅಲ್ಲ. ಇಲ್ಲೇಕೆ ರವೀಂದ್ರರ ಸ್ಮಾರಕ?" ಎಂದು ಕೇಳಿದಾಗ ಅವನು "ಬನ್ನಿ, ಒಳಗೆ ಹೋಗೋಣ ಅಲ್ಲಿ ಮಾರ್ಗದರ್ಶಿ ಮಜುಂದಾರ್ ಇರುತ್ತಾರೆ.ಅವರು ಎಲ್ಲ ರಹಸ್ಯವನ್ನೂ ನಿಮಗೆಲ್ಲ ತಿಳಿಸುತ್ತಾರೆ" ಎನ್ನುತ್ತ ಎಲ್ಲರನ್ನೂ ಒಳಗೆ ಕರೆದುಕೊಂಡು ಹೋದ.

ಅಲ್ಲಿದ್ದ ಮಜುಂದಾರ್ ಎಲ್ಲರನ್ನೂ ನಗುಮೊಗದಿಂದ ಸ್ವಾಗತಿಸಿ "ಆತ್ಮೀಯ ಪ್ರವಾಸಿಗಳೇ, ಈ ಸ್ಥಳದ ಹೆಸರು ಮುಂಗ್ಪೂ (MUNGPOO). ಡಾರ್ಜಿಲಿಂಗ್ ಜಿಲ್ಲೆಯಲ್ಲಿರುವ ಒಂದು ಪುಟ್ಟ ಪರ್ವತ ಗ್ರಾಮ. ಇಲ್ಲಿನ ಜನಸಂಖ್ಯೆ ಸುಮಾರು ಇಪ್ಪತ್ತು ಸಾವಿರ. ಎದುರುಗಡೆ ಸಿಂಕೋನ ಮರಗಳ ನಡುವೆ ನೀವು ಕಾಣುತ್ತಿರುವುದು ಸರ್ಕಾರಿ ಕ್ವಿನೈನ್ ಕಾರ್ಖಾನೆ. ನೀವು ಶಾಲೆಯ ಪಾಠಗಳಲ್ಲಿ ಸಿಂಕೋನ ಮರಗಳ ತೊಗಟೆಯಿಂದ ಮಲೇರಿಯಾದ ಔಷಧಿ ಕ್ವಿನೈನ್ ತಯಾರಿಸುತ್ತಿದ್ದರು ಎಂಬ ವಿಷಯ ತಿಳಿದಿರುತ್ತೀರಿ. ಈಗ ಕ್ವಿನೈನನ್ನು ಕೃತಕವಾಗಿ ರಾಸಾಯಿನಿಕಗಳಿಂದ ತಯಾರಿಸುತ್ತಿರುವುದರಿಂದ ಸಿಂಕೋನ ತೊಗಟೆ ಬಳಕೆಯಾಗುತ್ತಿಲ್ಲ. ಹಾಗಾಗಿ ಇತರ ಬಗೆಯ ಔಷಧೀಯ ಸಸ್ಯಗಳನ್ನೂ ಈಗ ಇಲ್ಲಿ ಬೆಳೆಯಲಾಗುತ್ತಿದೆ" ಎಂದು ವಿವರಿಸತೊಡಗಿದ.

ನನ್ನ ಕುತೂಹಲವೇ ಬೇರೆ. ಈ ವಿವರವೇನೋ ಸರಿ, ಕವಿ ರವೀಂದ್ರರಿಗೂ ಈ ಸ್ಥಳಕ್ಕೂ ಏನು ಸಂಬಂಧ ಎಂದು ನಾನು ಪ್ರಶ್ನೆ ಕೇಳುವ ಮುನ್ನ ಅವನೇ ಮುಂದುವರೆಸಿದ. "ನೀವು ಎದುರು ಕಾಣುತ್ತಿರುವ ಬೃಹತ್ ಬಂಗಲೆ ಸರ್ಕಾರಿ ಕ್ವಿನೈನ್ ಕಂಪನಿಯ ಉನ್ನತ ಅಧಿಕಾರಿ ಮನಮೋಹನ್ ಸೇನ್ ಅವರದ್ದು. ಅವರ ಪತ್ನಿ ಮೈತ್ರೇಯಿದೇವಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಬಂಗಾಲಿ ಸಾಹಿತಿಯಾಗಿದ್ದು "ನಾ ಹನ್ಯತೆ" ಎಂಬ ಕಾದಂಬರಿಗಾಗಿ ಖ್ಯಾತರು.

ಮೈತ್ರೇಯಿಯವರ ತಂದೆ ಸುರೇಂದ್ರನಾಥ್ ದಾಸ್ ಗುಪ್ತ ಅವರು ಟಾಗೋರರ ಆಪ್ತಸ್ನೇಹಿತರಾಗಿದ್ದರು. ಮೈತ್ರೇಯಿಯವರ ಆಹ್ವಾನದ ಮೇರೆಗೆ ಟಾಗೋರರು ೧೯೩೮ ರಿಂದ ನಾಲ್ಕು ಬಾರಿ ಪ್ರತಿವರ್ಷ ಬೇಸಗೆಯಲ್ಲಿ ಇಲ್ಲಿ ಬಂದು ತಂಗಿದ್ದರು. ಕೊನೆಯ ಬಾರಿ ಬಂದಾಗ ಅವರಿಗೆ ಅನಾರೋಗ್ಯವಾಗಿ ಮಧ್ಯದಲ್ಲೇ ಕೊಲ್ಕತ್ತಾಗೆ ವಾಪಸು ಹೋಗಬೇಕಾಯಿತು. ಈಗ ಈ ಭವನ ರವೀಂದ್ರರ ಸ್ಮಾರಕವಾಗಿದೆ.

ಮಜುಂದಾರ್ ಇವನ್ನೆಲ್ಲ ಹೇಳುತ್ತ "ಬನ್ನಿ ಬಂಗ್ಲೆಯೊಳಗೆ ಹೋಗೋಣ, ನಿಮಗೆ ಅಲ್ಲಿ ಇನ್ನೂ ಸುಂದರವಾದ ನೋಟಗಳು ಕಾದಿವೆ" ಎಂದು ಎಲ್ಲರನ್ನೂ ಒಳಗೆ ಕರೆದುಕೊಂಡು ಹೋದ.

ಅದೊಂದು ವಿಶಾಲವಾದ ಬ್ರಿಟಿಷ್ ಕಾಲದ ಬಂಗಲೆ. ಉದ್ದನೆಯ ವೆರಾಂಡ, ಎಲ್ಲೆಡೆ ರೆಡ್‌ಆಕ್ಸೈಡ್ ನೆಲ, ದೊಡ್ಡ ಹಜಾರ, ಕೊಠಡಿಗಳಿಂದ ಆಹ್ಲಾದಕರ ಅನುಭವ ನೀಡಿದವು. ಹಿತ್ತಲಿನಿಂದ ಬಂದ ತಂಪು ಗಾಳಿ ಸೊಬಗನ್ನು ಇನ್ನಷ್ಟು ಹೆಚ್ಚಿಸಿತು. ಟಾಗೋರರ ವಿಶಿಷ್ಟ ಉಡುಗೆಯ ಭಾವಚಿತ್ರ, ಬಿಳಿಬಣ್ಣದ ಪ್ರತಿಮೆ, ಅವರ ಹಲವು ಕವಿತೆಗಳ ಕೈಬರಹದ ಛಾಯಾಚಿತ್ರಗಳು, ಅಪರೂಪದ ಛಾಯಾಚಿತ್ರಗಳು, ಟಾಗೋರರೇ ರಚಿಸಿದ್ದ ಚಿತ್ರಕಲೆಗಳು, ಎಲ್ಲರನ್ನೂ ಸೂಜಿಗಲ್ಲಿ ನಂತೆ ಸೆಳೆದವು. ಟಾಗೋರರು ಸ್ವತಃ ವಿನ್ಯಾಸ ಮಾಡಿ ಅವರ ಮಗ ರತೀಂದ್ರನಾಥ್ ನಿರ್ಮಿಸಿದ ಮಹಾಗನಿ ಮರದ ಮೇಜು, ಕುರ್ಚಿ ಹಾಗೂ ಮಂಚ ಕೂಡ ಅಲ್ಲಿ ಪ್ರದರ್ಶನಕ್ಕೆ ಇತ್ತು. ಟಾಗೋರರ ಪ್ರಸಿದ್ಧ "ಜನಮ್ ದಿನ್" ಕವನವನ್ನಲ್ಲದೆ ಇತರ ಹಲವಾರು ಕವನಗಳನ್ನೂ ಮುಂಗ್ಪುವಿನ ತಮ್ಮ ವಾಸ್ತವ್ಯದಲ್ಲೇ ಅವರು ಬರೆದಿದ್ದರಂತೆ.

"ಈ ಬಾತ್ ರೂಂ ಕೂಡ ವಿಶೇಷ. ಇಲ್ಲಿ ನೋಡಿ, ಬನ್ನಿ" ಎಂದು ಮಜುಂದಾರ್ ಕರೆದಾಗ ಎಲ್ಲರಿಗೂ ವಿಶೇಷ ಏನಿದ್ದೀತು ಎಂಬ ನಗು. ಮೂರಡಿ ಎತ್ತರದ ಒಂದು ತೊಟ್ಟಿ. ಪಕ್ಕದಲ್ಲೊಂದು ನಲ್ಲಿ. ಸ್ವಲ್ಪ ಎತ್ತರದಲ್ಲಿ ಇನ್ನೊಂದು ತೊಟ್ಟಿಯಲ್ಲಿ ಬಿಸಿನೀರಿನ ವ್ಯವಸ್ಥೆ. ತಣ್ಣೀರಿಗೆ ಬಿಸಿನೀರು ಬೆರೆಸಿಕೊಂಡು ತೊಟ್ಟಿಯಲಿ ಕಾಲುಚಾಚಿ ಕುಳಿತು ಕಿಟಕಿ ಯಿಂದಾಚೆ ಕಾಣುವ ರಮ್ಯ ಭೂದೃಶ್ಯವನ್ನು ನೋಡುತ್ತ ಸ್ನಾನವನ್ನೂ ಆನಂದಿಸುತ್ತಿದ್ದರಂತೆ ಟಾಗೋರರು. ಬಾತ್ ಟಬ್ ವಿನ್ಯಾಸದ ಸರಳತೆ ಬೆರಗುಗೊಳಿಸಿತು. "ಅದಕ್ಕೇ ಅವರು ವಿಶ್ವಕವಿ" ಎಂದು ಅಭಿಮಾನದ ನಗೆ ನಕ್ಕ ಮಜುಂದಾರ್.

ಅಲ್ಲಿಗೆ ದೂರದ ಕೋಲ್ಕತ್ತಾದಿಂದ ಬಂದಿದ್ದ ಕೆಲವು ಬಂಗಾಲೀ ಕಾವ್ಯಾಸಕ್ತರು ರವೀಂದ್ರರ ಪ್ರತಿಮೆಯ ಮುಂದೆ ನಿಂತು "ರಬೀಂದ್ರ ಸಂಗೀತ'ವನ್ನು ಸುಶ್ರಾವ್ಯವಾಗಿ ಹಾಡತೊಡಗಿದರು. ವಾದ್ಯದ ಅಬ್ಬರವಿಲ್ಲದ ಆ ಹಾಡಿಕೆ ಸುಂದರ ರಸಾನುಭವ ಉಂಟುಮಾಡಿತು. ಹೊರಗಿದ್ದ ಸೊಬಗಿನ ಉದ್ಯಾನದಲ್ಲಿ ಊಟ ಮುಗಿಸಿದೆವು. ವಿಶ್ವಕವಿಗಳ ಪ್ರತಿಮೆಯ ಮುಂದೆ ನಿಂತು ಫೋಟೋ ತೆಗೆಸಿಕೊಂಡು "ಕವೀಂದ್ರರೆ, ನಿಮ್ಮ ಕಾವ್ಯಪ್ರತಿಭೆ ನಮ್ಮ ಮಸ್ತಕಕೂ ಸ್ವಲ್ಪ ಹರಿಯಲಿ" ಎಂದು ಕೋರಿಕೊಂಡೆವು.

ಅನಿರೀಕ್ಷಿತವಾದದ್ದಾದರೂ ಅವಿಸ್ಮರಣೀಯವಾಗಿತ್ತು ಮುಂಗ್ಪೂವಿನ ಭೇಟಿ.

***

ನೋಡಿಯೋ ಸಾಹಿತ್ಯ ದಾಸೋಹ ೧೯೭

ಅಧ್ಯಕ್ಷರ ಅನಿಸಿಕೆಗಳು

– ಎಲ್. ಗಿರಿಜಾ ರಾಜ್

ಸಂಚಾಲಕರಾದ ರವೀಂದ್ರ ಅವರೇ, ನಿರ್ವಹಣೆ ಮಾಡಿದ ಮಹಾಬಲ ಅವರೇ, ಇಂದಿನ ನೋಡಿಯೋ ದಾಸೋಹದಲ್ಲಿ ಭಾಗವಹಿಸಿದ ಸ್ನೇಹಿತರೇ, ಉಪಸ್ಥಿತರಿರುವ ಇತರ ಬಂಧುಗಳೇ, ಸಮನ್ವಯ ಸಮಿತಿಯ ಸ್ನೇಹಿತರೇ, ಎಲ್ಲರಿಗೂ ಸಸ್ನೇಹ ಪೂರ್ವಕ ನಮಸ್ಕಾರಗಳು

ನನ್ನ ಜೀವನದ ಅತ್ಯಂತ ಖುಷಿಯ ದಿನ ಇದು. ವೈವಿಧ್ಯಮಯ ಸಾಹಿತ್ಯ ಕುಸುಮಗಳ ವಿಕಸಿತ ನಂದನದಲ್ಲಿ ವಿಹರಿಸುವ 'ತೃಷಿತ ಚಂಚರೀಕ'ವೇ ನಾನಾಗಿದ್ದೆ. ಈಗಾದರೋ ಹೊಟ್ಟೆ ತುಂಬಾ ಜ್ಞಾನದ ಬಂಡುಂಡ ತೃಪ್ತಿಯ ಭೃಂಗವಾಗಿದ್ದೇನೆ. ಇಲ್ಲಿ ಒಂದು ಹೊಸಜೀವನ ದರ್ಶನವೇ ನನಗಾಯಿತು. ಒಂದೊಂದು ಲೇಖನವೂ. ಕವಿತೆಗಳೂ ಸೇರಿದಂತೆ, ತನ್ನದೇ ವಿಶಿಷ್ಠ ರೀತಿ, ಚಿಂತನೆ ಸೊಬಗು, ವಿಲಾಸ, ವೈಖರಿಗಳಿಂದ ಮನಸೆಳೆದವು.. ಎಲ್ಲರ ಪ್ರಸ್ತುತಿಯ ಬಗ್ಗೆಯೂ ನನ್ನ ಪ್ರಾಮಾಣಿಕ ಚಿಂತನೆಗೆ ದಕ್ಕಿದ ಅಭಿಪ್ರಾಯಗಳನ್ನು ನಾನು ಕೆಲವು ವಾಕ್ಯಗಳಲ್ಲಿ ನಿಮ್ಮ ಮುಂದಿಡುತ್ತೇನೆ.

ಬೆಂಬಿಡದ ಬೇತಾಳನಂತೆ ಕೆಲವರಿಗೆ ಮೆಸೇಜ್ ಕೊಟ್ಟು, ಲೇಖನಗಳನ್ನು ತರಿಸಿಕೊಂಡಿದ್ದಕ್ಕೆ ಕ್ಷಮೆ ಇರಲಿ! ಏಕೆಂದರೆ ಲೇಖನಗಳನ್ನು ಓದುವ ಆಸಕ್ತಿ, ಕುತೂಹಲ ಇತ್ತು, ಜೊತೆಗೆ ಬದ್ಧತೆಯೂ ಇತ್ತು. ಸಾಹಿತ್ಯದ ವಿವಿಧ ಪ್ರಕಾರಗಳ ಲೇಖನಗಳನ್ನು ಓದಲು ದೊರೆತ ಅಪೂರ್ವ ಅವಕಾಶವೆಂದು ವಿನಮ್ರವಾಗಿ ಸೂಚಿಸಲು ಬಯಸುತ್ತೇನೆ. ಸಮನ್ವಯ ಸಂಚಾಲಕ ಸಮಿತಿಯ ವಿಶ್ವಾಸದ ಆಹ್ವಾನಕ್ಕೆ ಮಣಿದು ಒಪ್ಪಿದೆ. ಇಂಥ ಹೊಣೆ ವಹಿಸಿಕೊಳ್ಳಲು ಜ್ಞಾನ ಹಾಗೂ ಪ್ರತಿಭೆಯ ವಿಷಯಗಳಲ್ಲಿ ನಾನು ಕಿರಿಯಳು. ಪರಿಚಯವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟ ಗೆಳತಿ ರಾಧಿಕಾ ಅವರಿಗೆ ಧನ್ಯವಾದಗಳು.

ನಿರ್ಮಲ ಜಿ.ವಿ. ಅವರ ಅಮೇರಿಕಾದ "ವಿಸ್ಮಯ ತಾಣ". ನಿರ್ಮಲಾ ಅವರು ಸದಾ ಹೊಚ್ಚಹೊಸದಾದ ತಾಜಾ ವೈಜ್ಞಾನಿಕ ಲೇಖನಗಳಿಂದ ನಮ್ಮ ವಿಜ್ಞಾನದ ಜ್ಞಾನವನ್ನು ವಿಕಸಿಸುತ್ತ, ಬೆರಗು ಮೂಡಿಸುತ್ತಲೇ ಬಂದಿದ್ದಾರೆ. ಅವರು ಇಂದು ಕ್ಯಾಲಿಫೋರ್ನಿಯಾದ "ಮಿಸ್ಟರಿ ಸ್ಪಾಟ್" ನ ನೈಸರ್ಗಿಕ ಚಮತ್ಕಾರಗಳ ಬಗ್ಗೆ ಓದುವಾಗ, ಅವರೇ ಹೇಳುವ ಹಾಗೆ ಪಾಂಡವರಿಗೆ ಮಯಾಸುರ ಕಟ್ಟಿಕೊಟ್ಟ ಸಭಾಭವನವೋ ಎಂದಾಗ, ನನಗೆ ಜೊತೆ ಜೊತೆಯಲ್ಲೇ ಅರೇಬಿಯನ್ ನೈಟ್ಸ್ ಮತ್ತು ನಮ್ಮ ಜಾನಪದ ಅಜ್ಜಿ ಕತೆಗಳೋ ಆಯಾಚಿತವಾಗಿ ನೆನಪಗೆ ಬಂದವು. ಅವು ಎಷ್ಟಾದರೂ ಕಥೆಗಳು, ಉತ್ಪ್ರೇಕ್ಷಿತ ಮಾಯಾತಂತ್ರದ ಕಲ್ಪನಾ ವಿಭ್ರಮೆಗಳು. ಆದರೂ ಅವನ್ನು ಓದುವಾಗಲೇ ರೋಮಾಂಚನವಾಗುತ್ತಿತ್ತು. ಆದರೆ ಭೂಮಿಯ ಮೇಲೆ ನಿಜವಾಗಿಯೂ ಅಂತಹ ವಿಸ್ಮಯ ತಾಣ ಒಂದಿದೆ ಎಂದಾಗ ಜೀವ ಪುಳಕಿತವಾಗದೇ ಇದ್ದೀತೆ? ಮೆದುಳು ಕೌತುಕಗಳ ಗೂಡಾಗದೇ ಇದ್ದೀತೆ? ಪ್ರಕೃತಿಯ ಮಡಿಲಲ್ಲಿ ನಿಗೂಢವಾಗಿ ಅಡಗಿರುವ ವೈಚಿತ್ರಗಳನ್ನು ಮನುಷ್ಯ ತನ್ನ ನಿಶಿತಮತಿಯಿಂದ ಹೊರಗೆ ಎಳೆಯುತ್ತಿದ್ದರೂ ಇನ್ನೂ ಅಲ್ಲೇ ಅನಂತವಾಗಿ ಅಡಗಿ ವಿಜ್ಞಾನಿಗಳಗೆ ಸವಾಲೊಡ್ಡುತ್ತಿರುವುದು ಮುಗಿದೇ ಇಲ್ಲ. ಕ್ಯಾಲಿಫೋರ್ನಿಯಾದ ಈ ವಿಸ್ಮಯ ತಾಣದ ವಿವರಣೆಯನ್ನು ಸಚಿತ್ರವಾಗಿ, ಕುತೂಹಲಭರಿತವಾಗಿ ಲೇಖಕಿ ಬರೆದಿದ್ದಾರೆ. ಗೆಳತಿ ನಿರ್ಮಲಾ ಅವರಿಗೆ ಅಭಿನಂದನೆಗಳು

ಮುಂದಿನದು **ಗಣಪತಿ ಹೆಗಡೆ ಅವರ "ವಿಶ್ವಾಸ".** ನನ್ನ ವಿಶ್ವಾಸವನ್ನು ಗೆದ್ದ ಲೇಖನ, ಎಲ್ಲರ ವಿಶ್ವಾಸವನ್ನೂ ತನ್ನ ಕಡೆ ಸೆಳೆದುಕೊಳ್ಳುವ ಸಾರವತ್ತಾದ ಘಟನೆ. ಸಕ್ರಿಯವಾಗಿ ಪಾಲ್ಗೊಳ್ಳುವ ಇಬ್ಬರು ಸ್ನೇಹಿತರ ನಡುವೆ ನಡೆಯುವ ಸಂಭಾಷಣೆ, ಅಲ್ಲಿಲ್ಲದ ರಮೇಶ ಮತ್ತು ಪ್ರವೀಣರ ನಡುವೆ ನಡೆದ ಪ್ರಸಂಗವನ್ನು ಉಲ್ಲೇಖಿಸುತ್ತಾ ಮನದಲ್ಲಿ ಇನ್ನಾವುದಕ್ಕೋ ಏಟುಹಾಕುವ, ಬಾಣ ಹೂಡುವ ಜಾಣತನ ಸುಧಾಕರನ ಮಾತುಗಳಲ್ಲಿ ಇದೆ. ಕೆಲವರಿಗೆ ಮಾತೇ ಬಂಡವಾಳ, 'ಬಾಯಿದ್ದವನು ಬರದಲ್ಲೂ ಗೆದ್ದ' ಅನ್ನುವಂತೆ ಎಲ್ಲಿದ್ದರೂ ಅವರು ಅಲ್ಲಿಯೇ ಸಲ್ಲುವರು. ಹೆಗಡೆ ಅವರ ತೂಕದ ಮಾತುಗಳು ಇಲ್ಲಿ ಮನಸೆಳೆಯುತ್ತವೆ. ಗೆಳೆಯನನ್ನು ಮಾತಿಗೆಳೆಯುವ ಜಾಣತನ ಸುಧಾಕರನಲ್ಲಿ ಇದೆ. ಅವರು ಮರುಳಾಗಿ ನಾಲ್ಕು ಮಾತು ಹೆಚ್ಚಿಗೆ ಆಡಿದ್ದಕ್ಕೆ ಜೇಬಿನಿಂದ ಐನೂರರ ನಾಲ್ಕು ನೋಟುಗಳು ಹೊರಬಂದು ಸುಧಾಕರನ ಜೇಬಿಗೆ ಹೋಗಬೇಕಾಯಿತು. ಇದು ವಿಶ್ವಾಸವಲ್ಲ "ಹೊಗಳಿಕೆಯ ಹೊನ್ನಶೂಲ" ಎಂದು ಮನೆಯ ಒಡತಿ ಕೂಗಿದರೋ ಅಥವಾ ಅವರ ಅಂತರಂಗ ಪಿಸುಗುಟ್ಟಿತೋ! ಅಲ್ಲಲ್ಲಿ ಸಂಸ್ಕೃತದ ಉಕ್ತಿಗಳು, ಸುಭಾಷಿತಗಳು ತುಂಬಾ ಇಷ್ಟವಾಗುತ್ತವೆ, ಅವನ್ನು ನಾನು ಒಂದೆಡೆ ಬರೆದಿಟ್ಟು ಕೊಂಡಿದ್ದೇನೆ. ಹೆಗಡೆಯವರೇ ಇದು ಉತ್ತಮವಾದ ಲೇಖನ, ಅಭಿನಂದನೆಗಳು.

ಮುಂದಿನ ಲೇಖನ **ಗೌರಿ ಭಟ್ಟ ಅವರ "ನೀಲ್ ಐಲ್ಯಾಂಡ್".** ಪ್ರವಾಸ ಕಥನದ ಹೆಸರು ನೋಡುತ್ತಿದ್ದಂತೆ ನನ್ನ ಕಣ್ಣುಗಳು ಮಿಂಚಿದವು. ನಿಮ್ಮ ಲೇಖನ ನಮ್ಮ ಅಂಡಮಾನಿನ ಪ್ರವಾಸದ ಮಧುರ ಸ್ಮೃತಿಗಳು ಮರುಕಳಿಸುವಂತೆ ಮಾಡಿತು. ಅದೊಂದು ಅತ್ಯಂತ ರಮ್ಯತಾಣ, ವಿವರಿಸಿರುವ ರೀತಿ ಎಷ್ಟು ಸಜೀವವಾಗಿದೆ ಎಂದರೆ ನನ್ನ ಕಣ್ಮುಂದೆ ಆ ದೃಶ್ಯಗಳನ್ನು ನೋಡುತ್ತಿದ್ದಂತೆ ಅನಿಸಿತು. ನಮ್ಮ ಊರಿನಲ್ಲಿ ನಮ್ಮ ಚಿರಪರಿಚಿತರೇ, ಆಪ್ತರೆನಿಸಿದವರೇ ನಮ್ಮ ಕಷ್ಟಕಾಲಕ್ಕೆ ಒದಗುವುದಿಲ್ಲ. ಯಾವುದೋ ಕಾಣದ ಊರು, ಪ್ರವಾಸಿ ತಾಣ, ಕಂಡುಕೇಳದ ಜನ, ಅಪರಿಚಿತರು ಸಂಕಟದ ಸಂದರ್ಭಗಳಲ್ಲಿ ಭಾವನಾತ್ಮಕವಾಗಿ ಸ್ಪಂದಿಸುವುದು ಕಣ್ಣಲ್ಲಿ ಸಂತಸಭಾಷ್ಪವಾರಿ ಸ್ಪುರಿಸುವಂತೆ ಮಾಡುತ್ತದೆ, ಹೃದಯ ಆರ್ದ್ರತೆಗೆ ಸಲ್ಲುತ್ತದೆ. ಇಂಥ ಪ್ರವಾಸದ ನೆನಪುಗಳು ಜೀವಿತದ ಕೊನೆಗಾಲದವರೆಗೂ ನಮ್ಮ ಮನವನ್ನು ಮಿಡಿಯುತ್ತಲೇ ಇರುತ್ತದೆ. ಸದ್ಯ! ನೀವು ನಿಕೋಬಾರ್ ದ್ವೀಪಗಳೊಳಕ್ಕೆ ಹೋಗಿ ಸಿಕ್ಕಿಹಾಕಿಕೊಳ್ಳಲಿಲ್ಲವಲ್ಲ. ,ಅಲ್ಲಿ ಮನುಷ್ಯರನ್ನು ಜೀವಂತವಾಗಿ ಹಿಡಿದು ತಿನ್ನುವ ನರ ಭಕ್ಷಕರಿದ್ದಾರಂತೆ. ಅಭಿನಂದನೆಗಳು ಗೌರಿ.

ಮುಂದಿನ ಲೇಖನ **ನಾಗರತ್ನ ಚಂದ್ರಶೇಖರ್ ಅವರ "ಏನೆಂದು ಕರೆಯಲಿ ನಿನ್ನ?"** ಪ್ರಶ್ನಾರ್ಥಕ ರೂಪದ ಶೀರ್ಷಿಕೆಯೇ ಭಾವನಾತ್ಮಕ ಸ್ಪರ್ಶದಿಂದ ರೂಪಗೊಂಡ ಸೂಚನೆ ನೀಡುತ್ತದೆ. ನಾವು ಸ್ತ್ರೀಯರು 'ಭಾವುಕರು'. ಪ್ರತಿದಿನ ಗೃಹಿಣಿಯರಿಗೆ ಜೊತೆಯಾಗುವ ಮನೆಯ ಸದಸ್ಯರ ಜೊತೆಗೆ ಜೀವನಾವಶ್ಯಕ ವಸ್ತುಗಳನ್ನು ಅವಳು ಸ್ಪರ್ಶಿಸಿ ಸ್ವಚ್ಛ ಮಾಡುತ್ತಿರಬೇಕಾಗುತ್ತದೆ. ನೋಡು ನೋಡುತ್ತಾ ಜೀವವಿಲ್ಲದ ಅವುಗಳೊಂದಿಗೆ ಒಂದು ರೀತಿಯ ಭಾವನಾತ್ಮಕ ತುಡಿತ ಏರ್ಪಡುವುದು. ಆಸರೆ ನೀಡುವುದು ಮನೆ ಆದರೆ ಅದರೊಳಗೆ ದಣಿದ ದೇಹಕ್ಕೆ ಆಶ್ರಯ ನೀಡಿ ಬೆಚ್ಚನೆಯ ಸುಖದೊಂದಿಗೆ ನೆಮ್ಮದಿಯ ನಿದ್ದೆಗೆ ಎಳೆದೊಯ್ಯುವುದು 'ಹಾಸಿಗೆ'. ಹಾಸಿಗೆ ಎಂದು ನೇರವಾಗಿ ಹೇಳದೆ ವಿಧವಿಧವಾಗಿ ಬಣ್ಣಿಸುತ್ತಾ, ರಮ್ಯ ಕಲ್ಪನಾಲಹರಿಯನ್ನು ಹರಿಯಬಿಟ್ಟಿದ್ದಾರೆ. ಹಾಸಿಗೆ ಎಂದು ಊಹಿಸುವ ಸೂಚನೆಗಳನ್ನು ಮಾತ್ರ ಅಲ್ಲಲ್ಲಿ ನೀಡುತ್ತಾರೆ. ನಾಗರತ್ನ ಅವರು ಎಂದಿನಂತೆ ಓದುತ್ತಿದ್ದ ಲೇಖನಗಳಿಗಿಂತ ಇದು ವಿಭಿನ್ನವಾಗಿದೆ. ಹಾಸ್ಯವನ್ನು ಮೀರಿದ ಒಂದು ಭಾವನಾತ್ಮಕ ಮಿಡಿತ ಲೇಖನದಲ್ಲಿದೆ. ಅಭಿನಂದನೆಗಳು ನಾಗರತ್ನ.

ಟಿ.ಎಸ್. ಶ್ರವಣಕುಮಾರಿ ಅವರ "ಕರೆಯ ಮೇಲೆ". ಚರವಾಣಿ ಇಲ್ಲದೆ ಜೀವನ ಚಲಿಸುವುದೇ ಇಲ್ಲ ಎನ್ನುವ ಪರಿಸ್ಥಿತಿಗೆ ನಾವೆಲ್ಲಾ ದೂಡಲ್ಪಟ್ಟಿದ್ದೇವೆ. ಬೇಡದ ಎರಡು ಕರೆಗಳು, ಬೀಸಿದ ಗಾಳಕ್ಕೆ ಸಿಕ್ಕಿಹಾಕಿಕೊಳ್ಳದೇ ಅವರೊಡನೆ ತಾಳ್ಮೆಯಿಂದ ಸಂಭಾಷಣೆ ನಡೆಸಿ ಮನರಂಜನೆಯ ಅನುಭವ ಪಡೆದು ನಮಗೂ ಉಣಿಸಿದ ಶ್ರವಣಕುಮಾರಿ ಅವರು ಪ್ರಸ್ತುತಿಪಡಿಸಿದ ವಿಶಿಷ್ಟ, ವಿಭಿನ್ನ ಲೇಖನ. ನಿರೂಪಣೆ ಎಂದಿನಂತೆ ಲವಲವಿಕೆಯಿಂದ

ಮುಂದಕ್ಕೆ ಹರಿದಿದೆ. ಅವರ ಓದು ಬರಿ ಓದುವಿಕೆ ಅನಿಸುವುದಿಲ್ಲ, ಕಣ್ಮುಂದೆ ನಡೆಯುತ್ತಿರುವಂತೆ ಸಜೀವ ವಾತಾವರಣ ಮೂಡಿಸುತ್ತಾರೆ. ಮೊನ್ನೆಮೊನ್ನೆ ನಮ್ಮ ಮನೆಯವರೂ ಇಂಥದೊಂದು ಗಾಳಕ್ಕೆ ಬೀಳುವವರಿದ್ದರು, ಅಷ್ಟರಲ್ಲಿ ಹಿತೈಷಿಗಳೊಬ್ಬರು ಎಚ್ಚರಿಸಿದರು. ಉತ್ತಮ ನಿರೂಪಣೆ, ಅಭಿನಂದನೆಗಳು, ಶ್ರವಣಕುಮಾರಿ ಮೇಡಂ.

ಮುಂದಿನ ಲೇಖನ **ರಾಧಿಕಾ ವಿ ಗುಜ್ಜರ್ ಅವರ "ನನ್ನ ದೇಹವೆಂಬ ಲೇಖನಿಯ ಶಾಯಿ"**. ವಿಶಿಷ್ಠ ಶೀರ್ಷಿಕೆಯೇ ಲೇಖನದೆಡೆಗೆ ಸೆಳೆಯುತ್ತದೆ. ಚರ್ವಿತಚರ್ವಣವಾದ ಶೀರ್ಷಿಕೆಗಳಗಿಂತ ಅಪರೂಪವಾದ, ಅನುರೂಪವಾದ ವಿಭಿನ್ನ ಶೀರ್ಷಿಕೆ. ಮಗಳೊಬ್ಬಳು ಮೆಲುದನಿಯಲ್ಲಿ ಆಪ್ತವಾಗಿ ತನ್ನ ಅಮ್ಮನನ್ನು ನೆನೆಯುವ, ಹೃದಯ ಆರ್ದ್ರಗೊಳಸುವ ಲೇಖನ. ಅಮ್ಮನನ್ನು ಕಳೆದುಕೊಂಡ ಗೋಳಾಟ, ವ್ಯಥೆ, ವಿಷಾದ ಇಲ್ಲಿ ಇಲ್ಲ. ಇದ್ದರೆ ಹತ್ತರೊಂದಿಗೆ ಅದು ಹನ್ನೊಂದನೆಯದಾಗುತ್ತಿತ್ತು. ಏಕೆಂದರೆ ಅವಳಿಲ್ಲ ಎಂಬ ಚಿಂತೆಯೇ ಇಲ್ಲ, ಅವಳು ನಮ್ಮೊಳಗೇ ಹರಿದು ನಿಂತಿದ್ದಾಳೆ, ಆಕೆಯ ದೈಹಿಕ ಹಾಗೂ ಮಾನಸಿಕ ಗುಣಗಳು ತಾವೇ ತಾವಾಗಿ ಈಗ ನಮ್ಮಲ್ಲಿ ಹೊಮ್ಮಿವೆ ಎನ್ನುತ್ತಾರೆ. ಹೆಚ್ಚೇನು ನಾವು ಆಕೆಯ ಪ್ರತಿರೂಪವೇ ಆಗಿದ್ದೇವೆ ಎನ್ನುತ್ತಾರೆ, ತಾಯಿಯನ್ನು, ಅವಳ ಗುಣಗಳನ್ನು ಅವಳ ಚಲನವಲನ ಕರಕುಶಲತೆ ಕೌಶಲ್ಯಗಳನ್ನು, ಹವ್ಯಾಸಗಳನ್ನು ಹತ್ತಿರದಿಂದ ಕಂಡ ಮಗಳು ಮುದ್ದಾಗಿ ಪಟ್ಟಿಮಾಡುವ ರೀತಿಯಲ್ಲೇ ಲೇಖನದ ಸಾರ್ಥಕತೆ ಇದೆ, ನಾನೊಂದು ಲೇಖನಿ ಎಂದು ಅದಕ್ಕೆ ಅಮ್ಮನೇ ಶಾಯಿಯೆಂದು ಹೇಳುವುದರ ಹಿನ್ನೆಲೆಯಲ್ಲಿ ಒಂದು ಹೊಸ ಉಪಮೆ ತಾಯಿ-ಮಗಳ ಸಂಬಂಧಕ್ಕೆ ತಲೆಯೆತ್ತಿರುವುದು ಮಾತ್ರವಲ್ಲ, ಹಿನ್ನೆಲೆಯಲ್ಲಿದ್ದ ಒಬ್ಬ ಕಾವ್ಯ ಪ್ರಿಯೆ ಅನಾವರಣವಾಗಿದ್ದಾಳೆ. ರಾಧಿಕಾ ಅವರಿಗೆ ಅಭಿನಂದನೆಗಳು.

ರೇಣುಕಾ ದೇಸಾಯಿಯವರ "ನಾಟಕಕ್ಕೆ ನನ್ನ ನೋಟ" ಎಂಬ ಲೇಖನ. ಆತಂಕ ಮೂಡಿಸುವ ಸಮಾಜದ ಬಗ್ಗೆ ನಿಜವಾದ ಜಾಗೃತಿ ಮೂಡಿಸುತ್ತಿರುವುದು "ಹವ್ಯಾಸಿ ರಂಗಭೂಮಿ" ನಿಜ. ಟಿ.ಎನ್.ಸೀತಾರಾಮ್ ಅವರ ಧಾರವಾಹಿಗಳಲ್ಲಿ 'ಸೇತುರಾಮ್' ಅವರ ನಟನೆಯ ಪ್ರಬುದ್ಧತೆ, ಅವರ ದಿಟ್ಟ ಮಾತುಗಾರಿಕೆ, ನೇರ ನಡೆ-ನುಡಿ, ನಿಷ್ಠೂರ ಆದರೂ ಚಿಂತೆಯಿಲ್ಲ, ನಾನಿರುವುದೇ ಹೀಗೆ... ಎಂಬ ಭಾವ ಬಿಂಬಿಸುವ ಪಾತ್ರಗಳನ್ನು ಅವರು ಮಾಡುತ್ತಿದ್ದರು. ಸೂಕ್ಷ್ಮ ಗ್ರಾಹಿ, ಸಹೃದಯಿಯಾದ ಲೇಖಕಿ, ಸೇತೂರಾಂ ಅವರ. ನಾಟಕವೊಂದರ ಬಗ್ಗೆ ಆಳ ಚಿಂತನೆ ನಡೆಸಿರುವುದು ಅವರ ಲೇಖನದಲ್ಲಿ ಸ್ಪಷ್ಟವಾಗಿದೆ. ಹೌದು! ಒಬ್ಬ ನಾಟಕಕಾರ ಸಮಾಜದ ವಾಸ್ತವ ನಗ್ನ ಸತ್ಯವನ್ನು ಅದಿದ್ದ ಹಾಗೆಯೇ ಚಿತ್ರಿಸುವುದು ಮಾತ್ರವಲ್ಲ ಮುಂದಕ್ಕೆ ಅದರಿಂದ ಆಗುವ ಪರಿಣಾಮಗಳ ಬಗ್ಗೆ ಒಬ್ಬ ದ್ರಷ್ಟಾರನಂತೆ ತೆರೆ ತೆರೆದು ಎಚ್ಚರಿಕೆ ನೀಡುತ್ತಾನೆ. ಸಾಮೂಹಿಕವಾಗಿ ಇಂಥದನ್ನು ನೋಡಿದಾಗ ಜನಜಾಗೃತಿ ಮೂಡಿಏನಾದರೂ ಪರಿವರ್ತನೆಯಾದೀತು ಎಂಬ ಆಶಯ ನಾಟಕಕಾರನದು. ಉತ್ತಮ ಆಶಯ ಹೊತ್ತ ಉತ್ತಮ ಲೇಖನ. ಅಭಿನಂದನೆಗಳು ರೇಣುಕಾ.

ಮುಂದಿನ ಲೇಖನ **ಎನ್.ವಿ.ರಘುರಾಮ್ ಅವರ "ಡಾ.ರಾಜಲಕ್ಷ್ಮಿ-ಕಿರುಪರಿಚಯ"**. ಈ ಮಹಿಳೆ ಕರ್ನಾಟಕಕ್ಕೆ ಮಾತ್ರವಲ್ಲ, ವಿಶ್ವಕ್ಕೇ ಸ್ಫೂರ್ತಿ ಸದೃಶ. ಕಣ್ತೆರೆಸುವಂತಹ ವ್ಯಕ್ತಿತ್ವಗಳ ಸಾಧನೆಗಳು. ನಮಗೆ ಎಲ್ಲ ಇದ್ದರೂ ಸುಮ್ಮನೆ ಯಾವುದೋ ಕಲ್ಪಿತ ಮಾನಸಿಕ ವೈಕಲ್ಯಗಳನ್ನು ಮಾಡಿಕೊಂಡು ಕೊರಗುತ್ತೇವೆ. ಇಂಥ ಲೇಖನಗಳು ಎಲ್ಲ ಕೊಟ್ಟಿರುವ ಆ ದೇವನ ಬಗ್ಗೆ, ಅವನ ಅಖಂಡ ಕರುಣೆಯ ಬಗ್ಗೆ ಭರವಸೆ, ಕೃತಜ್ಞತೆ ಮೂಡಿಸುತ್ತವೆ. ಹಾಗೆಯೇ ನಾವೇನೂ ಮಾಡದೇ ಇರುವುದರ ಬಗ್ಗೆ ನಾಚಿಕೆಯನ್ನು ಮೂಡಿಸುತ್ತದೆ. ಈ ಲೇಖನ ನನ್ನನ್ನು ಮೂಕವಿಸ್ಮಿತಳನ್ನಾಗಿ ಮಾಡಿತು. ಆತ್ಮವಿಶ್ವಾಸ, ಏನನ್ನಾದರೂ ಸಾಧಿಸಿಬಿಡುವ ಅಪಾರ ಛಲ, ಈ ಸಮಾಜಕ್ಕೆ ತನ್ನಿಂದ ಸಲ್ಲಬೇಕಾದ ಋಣವಿದೆಯೆಂದು ಮಹತ್ತಾಗಿ ಯೋಚಿಸುವ ಪರಿ ಅಚ್ಚರಿ ತರುತ್ತದೆ. ನನಗೆ ವಿಶ್ವದ ವಿಶೇಷ ಚೇತನ ನಿಕ್ ವೊಯಾಚಿಚ್ ನೆನಪು ತಂದಿತು. ಇಂಥ ಸ್ಫೂರ್ತಿಯುತ ವಾದ ಸಾರ್ಥಕ ಲೇಖನಕ್ಕೆ ರಘುರಾಮ್ ಅವರಿಗೆ ಅಭಿನಂದನೆಗಳು.

ಮುಂದಿನ ಬರಹ **ಶಾಂತಾ ನಾಗಮಂಗಲ ಅವರ "ಭಾರತೀಯ ಯಜ್ಞ ಸಂಸ್ಕೃತಿಯ ಸೊಗಸು ಕುಮಾರವ್ಯಾಸನ ಲೇಖನಿಯಲ್ಲಿ".** ಇಂದಿನ ದಾಸೋಹದ ಲೇಖನಗಳಲ್ಲಿ ವಿಭಿನ್ನವಾದ, ಮಹತ್ವದ ವಿಚಾರಗಳನ್ನು ಹೊಂದಿರುವ ಹಾಗೆಯೇ ಪ್ರತ್ಯೇಕವಾಗಿ ಒಂದು ಕಾರ್ಯಕ್ರಮದ ಆಯೋಜನೆಗೆ ಯೋಗ್ಯವಾದ ಲೇಖನ ಇದು. ದಿನನಿತ್ಯದ ಲೌಕಿಕ ವ್ಯಾಪಾರಗಳಲ್ಲಿ ಮಗ್ನವಾಗಿರುವ ಮನಸ್ಸುಗಳಿಗೆ, ಯಾಂತ್ರಿಕ ಜಂಜಾಟಗಳಿಂದ ಬಿಡುಗಡೆಯಾಗಿ ಪ್ರಶಾಂತವಾಗಿ ಶುದ್ಧ ಭಾವದಿಂದ ಕುಳಿತು ಹೇಳಬೇಕಾಗಿರುವ ಅಗತ್ಯವಾದ ಶ್ರದ್ಧೆ ಆಸಕ್ತಿಗಳಿಂದ ಗ್ರಹಿಸಬೇಕಾದ ವಿಷಯಗಳು, ಯಜ್ಞ, ದಾನ ತಪಸ್ಸುಗಳು ಅರ್ಥವಾಗುವಂತೆ ಸರಳವಾಗಿ ಮನಸ್ಸಿಗೆ ತಿಳಿಯುವಂತೆ ಕುತೂಹಲ ಗರಿಗೆದರುವಂತೆಯೂ ಹೇಳಿರುವುದು ಲೇಖನದ ಹಿರಿಮೆ. ರೂಪಕ ಸಾಮ್ರಾಜ್ಯ ಚಕ್ರವರ್ತಿ, ಜನಪದ ಕವಿ, ಪದವೊಂದನಿಟ್ಟು, ಅದನ್ನು ಅಳುಪದ ಕವಿ ವೀರನಾರಾಯಣನ ಭಕ್ತನಾದ ಕುಮಾರವ್ಯಾಸ ಅತ್ಯಂತ ಇಷ್ಟವಾದ ಕವಿ. ಈ ಸಂದರ್ಭದಲ್ಲಿ ಸಂಚಾಲಕರಲ್ಲಿ ಮನವಿ, ಶಾಂತಕ್ಕನವರ ಉಪನ್ಯಾಸ ಒಂದನ್ನೇ ನೋಡಿಯೋ ದಾಸೋಹದಲ್ಲಿ ಪ್ರತ್ಯೇಕವಾಗಿ ಏರ್ಪಡಿಸುವ ಪ್ರಯತ್ನವಾಗಲಿ. ಇಂತಹ ಅತ್ಯುತ್ತಮ ಲೇಖನಕ್ಕೆ, ಲೇಖಕಿಗೆ ಗೌರವಪೂರ್ವಕ ಅಭಿನಂದನೆಗಳು.

ಮುಂದಿನದು **ಪೋಲೇನಹಳ್ಳಿ ರಮೇಶ್ ಅವರ "ಹಳ್ಳಿಯ ಅರಳೀಮರ ಹಾಗೆಯೇ ಇದೆ".** ಇದೊಂದು ಕವನ. ಪೋಲೇನಹಳ್ಳಿ ರಮೇಶ್ ಅಂದರೆ 'ಪೋರ'ನ ಪ್ರಬುದ್ಧ ಕವನ. ಮರ ಮಾತನಾಡದು, ಆಡಲು ಬಂದಿದ್ದರೆ ಬಾಯಿಗೆ ಬಂದಂತೆ ಮೊದಲು ಮನುಷ್ಯನನ್ನು ದಬಾಯಿಸಿ, ಮೂದಲಿಸುತ್ತಿತ್ತೇನೋ ಅಥವಾ ಅದರ ಧ್ಯಾನಸ್ಥ, ಸೌಮ್ಯ, ಪರೋಪಕಾರ ಬುದ್ಧಿಗೆ ಅನುಗುಣವಾಗಿ ಉಪದೇಶ ಮಾಡುತ್ತಿತ್ತೇನೋ ಗೊತ್ತಿಲ್ಲ!! ಮೊದಲ ವಾಕ್ಯ ವೃಂದದಲ್ಲಿ "ಚಿಗುರು" ಶಬ್ದವನ್ನು ಸ್ವಾರಸ್ಯಪೂರ್ಣವಾಗಿ ಬಳಸಿದ್ದೀರಿ. ಇದ್ದಲ್ಲಿಯೇ ಇದ್ದುಕೊಂಡು ಧನ್ಯತೆ ಪಡೆಯುವ ಕಡಿದರೂ, ಬಡಿದರೂ, ಎದ್ದಿದ್ದರೂ, ಬಿದ್ದಿದ್ದರೂ, ತನ್ನ ಪರೋಪಕಾರ ಬುದ್ಧಿ ಬಿಡದು. ಮರ ಅಜರಾಮರ! ಮರ ಅಜರಾಮರ! "ಧ್ಯಾನಿಸುತ್ತಾ ನಿಂತ ಮರ ಸ್ಥಾವರ" ಎಂಬ ಸಾಲು ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಅರ್ಥಪೂರ್ಣ ಕವನ, ಅರಳಿಮರದಲ್ಲಿ ಬ್ರಹ್ಮರಾಕ್ಷಸ ವಾಸ ಮಾಡುತ್ತಾನೆ ಎಂಬುದು ಹುಸಿ ಭ್ರಮೆಯಾಗಿಯೇ ಉಳಿಯುತ್ತದೆ. ಎಂದಿನಂತೆ ಚೈತ್ರದಲ್ಲಿ ಚಿಗುರಿ ಹಸಿರು ಚೆಲ್ಲುತ್ತಾ, ಹಾಗೆಯೇ ಇದೆ, ಹಳ್ಳಿಯ ಅರಳಿಮರ, ಅಲ್ಲಿ ಏನೆಲ್ಲ ಬೇರೆ ಬದಲಾವಣೆಯಾದರೂ ಕೂಡ....ಅಭಿನಂದನೆಗಳು, ರಮೇಶ್.

ಮುಂದಿನ ಲೇಖನ, **ಮಾಲತಿ ಶ್ರೀನಿವಾಸನ್‌ರವರ "ಸಂಕ್ರಾಂತಿ ಸಂಭ್ರಮ".** ಹಬ್ಬಗಳು ನಮ್ಮ ಸಂಸ್ಕೃತಿಯ ಪ್ರತಿ ಬಿಂಬಗಳು. ನಮ್ಮ ಹಿಂದೂಗಳಿಗೆ ಪ್ರತಿವರ್ಷ ಸಾಲುಸಾಲು ಹಬ್ಬಗಳ ಸಂಭ್ರಮ. ಇಂದಿನ ಆಧುನಿಕ ಜೀವನದ ನಾನಾ ಬಗೆಯ ಕಾರಣಗಳಿಂದ ಪೂರ್ತಿ ತಿರೋಹಿತವಾಗಿಲ್ಲದಿದ್ದರೂ ಆ ಶ್ರದ್ಧೆ ಬಹುತೇಕ ಕಳೆದುಕೊಂಡಿದ್ದೇವೆ. ಅಮ್ಮ, ಅಜ್ಜಿ, ಮನೆಯ ಮಕ್ಕಳೆಲ್ಲ ಸೇರಿ ಎಳ್ಳು ಮತ್ತು ಸಕ್ಕರೆ ಅಚ್ಚು ಮಾಡುವ ವಿಧಾನವನ್ನು, ಸಂಭ್ರಮದ ದೃಶ್ಯಗಳು ಕಣ್ಮುಂದೆ ಬರುವಂತೆ ಚಿತ್ರಿಸಿದ್ದೀರಿ. ಕಪ್ಪು ಎಳ್ಳು ಬೆಳ್ಳಗೆ ಮಾಡುವುದೇನು? ಮರಳಿನ ಜೊತೆ ಕಡಲೆಕಾಯಿ ಬೀಜ ಹುರಿಯುವುದೇನು? ಕೊಬ್ಬರಿಯ ಕಪ್ಪು ಸಿಪ್ಪೆ ತೆಗೆದು ನಯವಾಗಿ ಸಣ್ಣ ಚೂರು ಮಾಡುವುದೇನು?? ಆದರೆ ನಮಗೆ ಇಷ್ಟವಾದದ್ದು ಒಂದೇ! ಮಧ್ಯೆ ಮಧ್ಯೆ ಕೆಲಸ ಮಾಡುವ ನೆಪದಲ್ಲಿ ಮೆಲ್ಲಗೆ ಆಕಡೆ ಈಕಡೆ ನೋಡಿ ಬಾಯೊಳಗೆ ತಿಂಡಿ ಹಾಕಿಕೊಂಡು ಮಜಾ ಮಾಡುವ ಮಕ್ಕಳ ಕಪಿಚೇಷ್ಟೆ! ತುಂಬಾ ಚೆನ್ನಾಗಿದೆ. ನಾವೂ ಸಹ ಅಂಥ ಸವಿದಿನಗಳನ್ನು ಅನುಭವಿಸಿ ಬಂದಿದ್ದೇವೆ ಬಿಡಿ. ಸಂಕ್ರಾಂತಿ ಹಬ್ಬವನ್ನು ಮುಂಗಡವಾಗಿ ಆಚರಿಸಿದಂತೆ ಆಯಿತು. ಅಭಿನಂದನೆಗಳು ಮಾಲತಿ.

ವಿಠ್ಠಲ್ ಇಜೇರಿ ಅವರ "ಕಥಾಪ್ರಪಂಚ–ದೃಷ್ಟಾಂತ ಕತೆಗಳು". ಎರಡು ಪುಟ್ಟ ಕಥೆಗಳನ್ನು ಓದುವುದಕ್ಕೆ ಮುನ್ನ ದೃಷ್ಟಾಂತ ಕಥೆಗಳು ಹೇಗೆ ರೂಪಗೊಂಡವು? ಎಂಬುದಕ್ಕೆ ಮುನ್ನುಡಿಯಾಗಿ ಹೇಳಿರುವ ಪ್ರಾರಂಭದ ಮಾತುಗಳು ಭವ್ಯವಾಗಿವೆ. ಮೊದಲ ಕಥೆ "ಮೂವರು ದರೋಡೆಕೋರರು"– ಸಾತ್ವಿಕ, ರಾಜಸ ಮತ್ತು ತಾಮಸ

ಗುಣಗಳು ಹೇಗೆ ಮನುಷ್ಯ ಮಾಡುವ ಕರ್ಮದ ಮೇಲೆ ಪ್ರಭಾವ ಬೀರುತ್ತದೆ ಎಂಬ ಬಗ್ಗೆ ಭಗವದ್ಗೀತೆಯ ೧೭ನೇ ಅಧ್ಯಾಯದಲ್ಲಿ ನಮಗೆ ಸಿಗುತ್ತದೆ. ಈ ಪುಟ್ಟ ಕತೆಯಲ್ಲಿ ಮೂವರು ದರೋಡೆಕೋರರು ಮೂರು ಗುಣಗಳನ್ನು ಪ್ರತಿನಿಧಿಸುತ್ತಾರೆ. ಎರಡನೇ ಕತೆ "ಸಾಧನೆಗೆ ತಕ್ಕ ಫಲ" ಅಲ್ಪ ಸ್ವಲ್ಪ ಸಾಧನೆಗೆ ತಕ್ಕ ಫಲ ಸಿಗುವಾಗ, ಉತ್ತಮ ಸಾಧನೆಗೆ ಉತ್ತಮ ಫಲ ದೊರೆಯುತ್ತದೆ. ಇಲ್ಲಿ ತೋರಿಕೆಯ ಸಾಧು ವೇಷವೇ ಕಳ್ಳನೊಬ್ಬನಿಗೆ ಒಳ್ಳೆಯದನ್ನು ಮಾಡಿದಾಗ ಅವನು ಅದರಿಂದ ಪ್ರಭಾವಿತನಾಗಿ ನಿಜವಾದ ಸಂನ್ಯಾಸಿ ಆಗುತ್ತಾನೆ. ಜೀವನದ ಪರಮ ಅರ್ಥ ಕಂಡುಕೊಳ್ಳುತ್ತಾನೆ. ಉತ್ತಮ ಲೇಖನ ಇಜೇರಿ ಸರ್, ಅಭಿನಂದನೆಗಳು

ಪಾರ್ವತಿ ವಿ ಹೆಗಡೆಯವರ "ಅದಲು-ಬದಲು". ಮೊದಲು ಆಟದ ಸವಿ ಸಾಲು ತೋರಿಸಿ ಅದನ್ನು ಬದಲು ಮಾಡಿ, ಈಗ ನಾನು ಹೇಳುತ್ತಿರುವುದು ಆಟವಲ್ಲ ಒಂದು ಕಥೆ ಎಂದು ಹೇಳುವ ಕಲಾತ್ಮಕ ಆರಂಭವೇ ಆಸಕ್ತಿದಾಯಕವಾಗಿದೆ. ಸಾಕಷ್ಟು ಚಿಂತನೆಗೆ ಗ್ರಾಸ ನೀಡುವ ದೊಡ್ಡ ಸತ್ಯ ಹುದುಗಿಸಿಕೊಂಡಿರುವ ಪುಟ್ಟ ಕತೆ. ಮತ್ತೆ ಮತ್ತೆ ಮಾಡಲೇ ಬೇಕೆಂಬ ಅನಿವಾರ್ಯ ಅವಲಂಬನೆ ತರುವವು ಚಟಗಳು. ವ್ಯಕ್ತಿ ತಾನಾಗಿ ಹೋಗುವವರೆಗೂ ಅವನ ತಂಟೆಗೇ ಬರುವುದಿಲ್ಲ, ಹೋದರೆ ಕೊನೆಯವರೆಗೂ ಬಿಡುವುದಿಲ್ಲ. ಚಟ್ಟ ಹತ್ತುವವರೆಗೂ ಚಟಗಳು ಬಿಡುವುದಿಲ್ಲ ಎನ್ನುತ್ತಾರಲ್ಲ ಹಾಗೆ. ಕತೆಯಲ್ಲಿ ಚಟಕ್ಕೆ ಬಿದ್ದ ಕುಮಾರ್ ಅದರಿಂದ ಬಿಡುಗಡೆಯಾಗಲು ಅವನ ತಂದೆಯ ಸಾವಿನಂತಹ ಪ್ರಬಲ ಕಾರಣವೇ ಬೇಕಾಗುತ್ತದೆ. ಬುದ್ಧನ ಕಥೆಗಳು, ಈಸೋಪನ ಕಥೆಗಳು, ಝೆನ್ ಕಥೆಗಳಲ್ಲಿ ನೋಡುವಂತೆ ನೀತಿಯ ಪ್ರತಿಪಾದನೆಗಾಗಿ ಕತೆ ಹೇಳುತ್ತಿದ್ದುದನ್ನು ನೆನೆಯಬಹುದು. ಕುಮಾರನನ್ನು ಬಿಡಲಾರದ ಅಂತಹ ಯಾವ ಆಕರ್ಷಣೆ ಅದರಲ್ಲಿದೆ ಎಂಬ ಕುತೂಹಲಕ್ಕಾಗಿ ಶ್ರೀಧರ್ ಮದ್ಯಪಾನ ಸೇವಿಸಿ, ಅದರ ಆಳಕ್ಕೆ ಬಿದ್ದು ಕುಮಾರನ ಸ್ಥಾನಕ್ಕೆ ಬದಲಾಗುತ್ತಾನೆ, ತನ್ನ ತಂದೆ ಸತ್ತಾಗ ಬದಲಾದ ಕುಮಾರ ಶ್ರೀಧರನ ಮುನ್ನಿನ ಸ್ಥಿತಿಗೆ ಬದಲಾವಣೆಯಾಗುತ್ತಾನೆ. ಯಯಾತಿ ಎಂದೋ ಹೇಳಿದ ಸಾರ್ವಕಾಲಿಕ ಸತ್ಯವುಳ್ಳ ಶ್ಲೋಕದೊಂದಿಗೆ ಕತೆ ಮುಕ್ತಾಯ ವಾಗಿದೆ. ಚಟಗಳು ವಿಷದ ಲಡ್ಡುಗಳಗೆ ಮೇಲೆ ಎರಡು-ಮೂರು ಪದರ ಸಿಹಿ ಸವರಿದ ಹಾಗೆ, ಸಿಹಿ ಸವಿಯುತ್ತ ಸವಿಯುತ್ತ ಕರಗಿದ ಮೇಲೆ ಒಳಗಿರುವ ವಿಷ ನುಂಗಿ ನೊಣೆಯುತ್ತದೆ. ಪ್ರಾರಂಭದಲ್ಲಿ ಸವಿಸವಿಯಾಗಿದ್ದರೂ ಅವನ ಮುಂದಿನ ಬದುಕಿನ ದುರಂತದ ಪುಟಗಳನ್ನು ಬರೆಯುತ್ತದೆ. ನೆಮ್ಮದಿಯ ದಿನಗಳನ್ನು ನಾಶಮಾಡುತ್ತದೆ. ಒಳ್ಳೆಯ ಸತ್ವಪೂರ್ಣ ಕತೆ! ಅಭಿನಂದನೆಗಳು, ಪಾರ್ವತಿ ಮ್ಯಾಡಂ.

ಮುಂದಿನ ಲೇಖನ **ಗುರುರಾಜ ಶಾಸ್ತ್ರಿಯವರ "ಬಯಸಿದ್ದೇ ಬಂದದ್ದು".** ಗೆಳೆತನ ನಿಷ್ಕಲ್ಮಶ, ನಿಯಮರಹಿತ ಬಾಂಧವ್ಯ. ಗುರು ಅವರು ಇಲ್ಲಿ ಒಂದು ಸ್ನೇಹದ ಸುತ್ತ ಹಬ್ಬಿ ನಿಂತ ಬಂಧನವನ್ನು ನೈಜವಾಗಿ ಚಿತ್ರಿಸುತ್ತ ಹೋಗಿದ್ದಾರೆ. ಕೆಲವರು ಜೀವನದಲ್ಲಿ ಅದೃಷ್ಟಶಾಲಿಗಳು. ಅವರ ಅಭಿರುಚಿ, ಬಯಕೆಗಳಿಗೆ ತಕ್ಕಂತೆ ಅವರ ಬದುಕೂ ರೂಪುಗೊಳ್ಳುತ್ತದೆ. ಸದಾ ಪ್ರಸಿದ್ಧಸಾಧಕರ ಜೊತೆ ಫೋಟೋ ತೆಗೆಸಿಕೊಳ್ಳಲು ಬಯಸುತ್ತಿದ್ದ ವಿಜಯ್, ಇಲ್ಲಿ ದಯೆಯಿಲ್ಲದ ಗೌರವ ಎಂಬ ಗುರು ಅವರ ಮಾತು ಅರ್ಥಪೂರ್ಣವಾಗಿ ಬಂದಿದೆ. ಪ್ರಸಿದ್ಧ ಚಲನಚಿತ್ರ ತಾರೆಯೇ ಪತ್ನಿಯಾಗಿ ದೊರೆತು ಮದುವೆ ಸಮಾರಂಭ ಪ್ರತಿಷ್ಟಿತರಿಂದಲೇ ತುಂಬಿಹೋಗಿರುತ್ತದೆ. ಬಹುತೇಕ ಎಲ್ಲ ಕಲಾವಿದರು ಹಾಜರಿರುತ್ತಾರೆ. ಅದನ್ನೇ ಹೇಳೋದು 'ಪಡೆದುಕೊಂಡು ಬರಬೇಕು ಎಲ್ಲಾದಕ್ಕೂ ಅಥವಾ ಕೇಳಿಕೊಂಡು ಬರಬೇಕು' ಅನ್ನುವ ಮಾತು ಗೆಳೆಯನ ವಿಷಯದಲ್ಲಿ ನಿಜವಾಯಿತು. ಎಮ್.ಎಸ್.ಎನ್. ಮನೆಗೆ ಹೋಗಿ ಅವರೊಂದಿಗೆ ಫೋಟೋ ತೆಗೆಸಿಕೊಂಡಾಗ, ಗೆಳೆಯನ ನೆನಪು ಆಯಾಚಿತವಾಗಿ ಮೂಡಿ, ಮರುಕಳಿಸಿ, ಹೊಮ್ಮಿಬಂದ ಸುಂದರ ಲೇಖನ. ಅಭಿನಂದನೆಗಳು ಗುರು ಅವರೇ.

ಶ್ರೀಪ್ರಕಾಶ್ (ಹುವಾಶ್ರೀ) ಅವರ ಕವನ "ಹಾರೈಕೆ". ಶ್ರೀಪ್ರಕಾಶ್ ಅವರನ್ನು ನಿಮ್ಮ ಲೇಖನ ಕಳುಹಿಸಿ ಎಂದು ನಾನು ಸಂದೇಶ ಕಳುಹಿಸಿದಾಗ, ಒಂದು ಗಮಕ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಿದ್ಧತೆಯಲ್ಲಿದ್ದರು. ಅವಸರಕ್ಕೊಂದು ಮಕ್ಕಳ ಪದ್ಯ ಎಂದು ಅವರು ತಮ್ಮ ೬ ವರ್ಷದ ಮುದ್ದು ಮೊಮ್ಮಗಳ ಬಗ್ಗೆ ಮುದ್ದಾದ ಹರಕೆ,

ಶುಭಾಶಯಗಳೊಂದಿಗೆ ಒಂದು ಕವನ ಬರೆದು ಕಳುಹಿಸಿದರು. ಮಕ್ಕಳೇ ಮನೆಗೆ ದೀಪ, ಅವರು ಒಳಗೆ ಹೊರಗೆ ಕುಣಿಯುವಾಗ, ಚೈತನ್ಯ ಸ್ವರೂಪಿಗಳಾಗಿ ನಲಿದಾಡುವಾಗ ಆ ದೃಶ್ಯ ವೈಭವವೇ ಚಂದ! ಮುಗ್ಧ ಲೋಕದ ಆನಂದ. ಪ್ರಾಸಬದ್ಧತೆಯಿಂದ ಕೂಡಿದ ಈ ಕವನ ಗೇಯರೂಪಕ್ಕೆ ಬಂದರೆ ಇನ್ನೂ ಸೊಗಸಾಗಿರುತ್ತದೆ. ಅವಳ ತುಂಟಾಟದ ಗುಣಗಳು, ನಗು ಎಲ್ಲವೂ ಇಲ್ಲಿ ಲವಲವಿಕೆಯ ಬಣ್ಣನೆಯಲ್ಲಿ ಅನಾವರಣವಾಗಿವೆ. ಕರೋನಾ ಕೂಡ ಇಲ್ಲಿ ಅಯಾಚಿತವಾಗಿ ನುಸುಳಿದೆ. ಅದರ ಆಗಮನದಿಂದ ಬಯಲಲ್ಲಿ ಮಕ್ಕಳು ಸ್ವಚ್ಛಂದವಾಗಿ ಆಡುವುದಕ್ಕೂ ಅಡ್ಡಿ ಯಾಗಿದೆ. ಚಂದದ ಕವನಕ್ಕೆ ಅಭಿನಂದನೆಗಳು ಪ್ರಕಾಶ್ ಸರ್.

ಮುಂದಿನ ಲೇಖನ **ಮಾಧುರಿ ಕೃಷ್ಣಭಟ್ ಅವರ "ಅಸಾಧಾರಣ ವೈದ್ಯ"** ಲೇಖನ. ಗೋಪಿನಾಥ್ ಸರ್ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯಲ್ಲಿ ಬರೆದ "ನನ್ನಪ್ಪ" ಲೇಖನ ನನ್ನ ಲೇಖನಕ್ಕೆ ಸ್ಫೂರ್ತಿ ಎಂದು ಹೇಳುತ್ತ, ಅವರ ತಂದೆಯ ಅವರ್ಣನೀಯ ವೈದ್ಯಕೀಯ ಸೇವೆಯ ಮಹತ್ವವನ್ನು ಶ್ರದ್ಧೆಯಿಂದ ಸ್ಮರಿಸಿದ್ದಾರೆ. ಲೇಖನ ಕೇಳುತ್ತಿದ್ದಂತೆ ಬಹಳ ಬೇಗ ಮುಗಿದೇ ಹೋಗುತ್ತದೆ. ಆದರೆ ಅದರಲ್ಲಿ ಬಂದಿರುವ ವೈದ್ಯರ ನಿಷ್ಕಲ್ಮಷ ನಿಸ್ವಾರ್ಥ ಸೇವೆ ಮನ ಕಲಕುತ್ತಲೇ ಇರುತ್ತದೆ. ಬಡವನೊಬ್ಬನ ಕರೆಗೆ ಓಗೊಟ್ಟು, ಸಂಜೆ ಕತ್ತಲಲ್ಲಿ, ಧಾರಾಕಾರ ಮಳೆಯಲ್ಲಿ ಮೆಡಿಕಲ್ ಕಿಟ್ಟಿನೊಡನೆ ಬಡವನ ಮನೆಯ ಗುಡಿಸಲು ಮುಟ್ಟುವ ವೈದ್ಯನ ಹೃದಯ ಶ್ರೀಮಂತಿಕೆ, ಕಾರ್ಯತತ್ಪರತೆ, ಹೊಸಜೀವ ಧರೆಗೆ ತರುವ ಶ್ರದ್ಧೆ, ಅಭಿನಂದನಾರ್ಹ. ನಮ್ಮ ಸ್ನೇಹಿತರಾದ ಮಾಧುರಿ ಅವರು ಅಂಥ ತಂದೆಯ ಮಗಳು ಎಂಬ ಹೆಮ್ಮೆ ನಮ್ಮದು. ಸಾರ್ಥಕ ಲೇಖನ, ಅಭಿನಂದನೆಗಳು, ಮ್ಯಾಡಂ.

ಮುಂದಿನ ಲೇಖನ **ಶೀಲಾ ಅರಕಲಗೂಡು ಅವರ "ಕತೆ ಬಂತು ಕತೆ"**. ಓದುವ ಕಲೆ ಇವರಿಗೆ ಚೆನ್ನಾಗಿ ಒಲಿದಿದೆ, ದನಿಯ ಏರಿಳಿತಗಳು ಕೇಳುಗರನ್ನು ಸೆಳೆಯುತ್ತವೆ. ಇಂಗ್ಲಿಷ್‌ನ ಪ್ರಖ್ಯಾತ ನಗೆ ನಟ ಚಾರ್ಲಿ ಚಾಪ್ಲಿನ್ ತನ್ನ ಹಾವಭಾವ ದೃಷ್ಟಿಗಳಲ್ಲಿ ಮಾತಿಲ್ಲದೆ ನಗಿಸುವುದಕ್ಕೆ ಲೋಕ ಪ್ರಸಿದ್ಧರು. ಅವರು ಒಂದೆಡೆ ಹೇಳುತ್ತಾರೆ– "My pain may be the reason for some body's laugh, But my laugh must never be the reason for somebody's pain" ಎಂಬ ಚಾರ್ಲಿಯ ತತ್ವದ ಆಧಾರದ ಮೇಲೆಯೇ, ಶ್ರೇಷ್ಠ ನಗೆ ನಟರಾಗಲೀ, ಹಾಸ್ಯ ಬರಹಗಾರರಾಗಲೀ, ವಿದೂಷಕರಾಗಲೀ, ಅವರ ಭಾವನೆಗಳು, ಹಾವಭಾವಗಳು ನಿಂತಿವೆ ಎಂದೆನಿಸುತ್ತದೆ. ಕತೆ ಬರೆಯುತ್ತೇನೆ ಎಂದು ಅದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಾ, ಲೇಖಕಿ ಮೆದುಳಿನಿಂದ ಹೊರಹೊಮ್ಮುತ್ತಿದ್ದ ಒಂದಿಷ್ಟು ತುಂಟತನ ಸೇರಿದ ಹಾಸ್ಯದ ಹಗುರ ಭಾವನೆಗಳಲ್ಲಿ ತೇಲಾಡುತ್ತಲೇ ಕೊನೆಗೂ ಅಬ್ಬ! ಶೀರ್ಷಿಕೆಯೊಂದನ್ನು ಸಿದ್ಧ ಮಾಡುತ್ತಾರೆ. ಮುಂದಿನ ದಾಸೋಹದ ವೇಳೆಗಾದರೂ ಕಥೆಯು ನಮಗೆ ಬರುತ್ತದೆಯಲ್ಲವೇ? "ಇವಳ ಕಥೆ ಓದೋ ಕರ್ಮ ಯಾರಿಗೆ ಇದ್ದೀತು" ಎಂದು ದೇವರು ಅಂದುಕೊಂಡಿರ ಬಹುದು ಎಂಬ ನಕಾರಾತ್ಮಕ ಕಲ್ಪನೆಯಿಂದ, ಮತ್ತೆ "ನಾನು ಕತೆ ಬರೆದರೆ ಇದಪ್ಪಾ ಕತೆ ಅಂದ್ರೆ? ಅನ್ನಿಸಬೇಕು" ಎಂಬ ಸಕಾರಾತ್ಮಕ ಲಹರಿಗೆ ಬಂದು, ಪ್ರಾರಂಭದ ತೊಡಕು ವಿಘ್ನಗಳನ್ನು ತಮ್ಮದೇ ಆದ ವಿನೋದಪೂರ್ಣ ರೀತಿಯಲ್ಲಿ ಸಮರ್ಥನೆ ಮಾಡುತ್ತಿರುವಾಗಲೇ ನಗಿಸುತ್ತಾ ಹೋಗುತ್ತಾರೆ. ಹಾಸ್ಯೋತ್ಪಾದಕರೆಲ್ಲ ಸ್ವತಃ ಅಪಾರ ಬುದ್ಧಿವಂತರು, ವಿವೇಕಿಗಳೂ ಜಾಣರಾದರೂ ತಮ್ಮನ್ನು ತಾವೇ ನಗೆಪಾಟಲಿಗೆ ಒಡ್ಡಿಕೊಂಡು ದಡ್ಡರಂತೆ, ಮೂರ್ಖರಂತೆ ತೋರಿಸಿಕೊಳ್ಳು ವುದು ಅವರ ಪ್ರತಿಭೆಯ ಒಳಗುಟ್ಟು. ಉತ್ತಮ ಲೇಖನ. ಅಭಿನಂದನೆಗಳು ಶೀಲಾ.

ಮುಂದಿನ ಲೇಖನ, **ರವೀಂದ್ರಕುಮಾರ್ ಎಲ್ವೀ ಅವರ "ಉಪನಯನವೂ, ಸುಬ್ರಹ್ಮಣ್ಯ ಷಷ್ಠಿಯೂ".** ಒಂದು ಉಪನಯನದ ಸುತ್ತ ಎಷ್ಟೊಂದು ಜನರ ಸಂಭ್ರಮ, ಕಾರ್ಯಶ್ರದ್ಧೆ, ಸಾಮೂಹಿಕ ಕರ್ತವ್ಯಪರತೆ ಅಡಗಿರುತ್ತದೆ. ಅಡುಗೆಗಳು, ತಿಂಡಿಗಳ ಹೆಸರುಗಳು ಬಾಯಲ್ಲಿ ನೀರೂರಿಸುತ್ತವೆ. ಸುಲಲಿತವಾಗಿ ಸಹಜ ಸುಂದರವಾಗಿ ಓದಿಸಿಕೊಂಡು ಹೋಗುತ್ತದೆ. ಸ್ಕಂದ ಷಷ್ಠಿ ಅಥವಾ ಸುಬ್ರಮಣ್ಯ ಷಷ್ಟಿಯ ಬಗ್ಗೆಯೂ ಅಷ್ಟೇ! ವಟುವೊಬ್ಬನನ್ನು ಕರೆದು, ಅವನಲ್ಲಿ ಸುಬ್ರಹ್ಮಣ್ಯನನ್ನು ಕಂಡು ಆತನಿಗೆ ಭೋಜನ ನೀಡಿ ಧನ್ಯರಾಗುವುದು. ಈ

ಆಚರಣೆಗಳನ್ನು ರೂಪಿಸಿದ ಹಿರಿಯರ ಹೃದ್ಭಾವಗಳಲ್ಲಿ ಎಷ್ಟು ಉನ್ನತ ಸಂಸ್ಕೃತಿ ಇತ್ತು ಎಂಬ ಅರಿವಾಗುತ್ತದೆ. ಶಿಕ್ಷಕರ ಮನೆಯಲ್ಲಿ ಊಟ, ಮಾಸ್ತರರಿಂದಲೇ ಪೂಜೆ ಮಾಡಿಸಿಕೊಳ್ಳುವ ಸುಯೋಗ, ಜೋಯಿಸರ ಮನೆಯಲ್ಲಿ ಅವರ ಮಗಳು ಇವರ ಸಹಪಾಠಿಯಾಗಿದ್ದು, ಇವರಿಗೆ ನಮಸ್ಕಾರ ಮಾಡಲು ಮುಜುಗರ ತೋರಿಸುವುದು, ಅದನ್ನು ಕಂಡು ಕಷ್ಟಪಟ್ಟು ನಗು ತಡೆದಿಟ್ಟುಕೊಂಡದ್ದು – ಎಲ್ಲವೂ ಚೆನ್ನಾಗಿದೆ. ಅಭಿನಂದನೆಗಳು, ರವೀಂದ್ರ ಕುಮಾರ್ ಸರ್.

ಜಿ.ಬಿ.ಕೋಟೆ ಅನಂತ್ ಅವರ "ಹತ್ಯೆ" ಎಂಬ ಕತೆ. ಮನುಷ್ಯ ಸಂಬಂಧಗಳು ಈಗಂತೂ ಅರ್ಥ ಕಳೆದುಕೊಳ್ಳುತ್ತಿವೆ. ಭ್ರೂಣಹತ್ಯೆ, ಹೆಂಗೂಸಿನ ಕೊಲೆ, ವರದಕ್ಷಿಣೆ ಸಾವುಗಳು ಇವೆಲ್ಲ ಎರಡು–ಮೂರು ದಶಕಗಳ ಹಿಂದೆ ಇದ್ದಷ್ಟು ಬಾಹುಳ್ಯ ಇವತ್ತು ಇಲ್ಲ. ಇಂದು ಹೆಣ್ಣು ಮಕ್ಕಳು ಉನ್ನತ ಶಿಕ್ಷಣ ಪಡೆದು ಆರ್ಥಿಕ ಸ್ವಾವಲಂಬಿಗಳಾಗಿ, ಕಂಪ್ಯೂಟರೀಕರಣದ ಪ್ರಭಾವದಿಮದ ವಿಶ್ವದ ವಿದ್ಯಾಮಾನಗಳಿಗೆ ಹೆಚ್ಚು ತೆರೆದು ಕೊಂಡವರಾಗಿ 'ದಿಟ್ಟೆಯರಾಗಿದ್ದಾರೆ. ಹೆಮ್ಮೆಪಡುವ ರಾಶಿರಾಶಿ ಸಾಧನೆಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಎನ್.ವಿ.ರಘುರಾಮ್ ಅವರು ಓದಿದ ಡಾಕ್ಟರ್ ರಾಜಲಕ್ಷ್ಮಿ ಅವರ (ವಿಶೇಷ ಚೇತನ) ಸಾಹಸಗಾಥೆಯನ್ನು ಇದೇ ದಾಸೋಹದಲ್ಲಿ ಕೇಳಿದೆವು. ಆಸ್ತಿಯಲ್ಲಿ ಸಮಾನ ಹಕ್ಕುಗಳು ಈಗ ಇರುವುದರಿಂದ ಇವೆಲ್ಲ ಸ್ವಲ್ಪ ಕಡಿಮೆಯಾಗಿದೆ. ಸಂಬಂಧಗಳ ಜಿಡ್ಡನ್ನು ಈಗಿನವರು ಬಹಳ ಸುಲಭವಾಗಿ ಬಿಡಿಸಿಕೊಳ್ಳುತ್ತಿದ್ದಾರೆ, ಭಾವುಕ ದೃಶ್ಯಗಳೇ ಕಡಿಮೆಯಾಗುತ್ತಿವೆ. ಅಮ್ಮನ ಹೊಟ್ಟೆಯಲ್ಲಿಯೇ ಚೆನ್ನಾಗಿತ್ತು ಎಂದು ಏಕೆ ಹೊರಬಂದೆನೋ ಎಂದು ನವಜಾತ ಶಿಶು ಸ್ವಗತದಲ್ಲಿ ಮುಗ್ಧವಾಗಿ ಪೇಚಾಡುವ ಪುಟ್ಟ ಕಂದನ ನುಡಿಗಳು, ಅದಕ್ಕೆ ಅರಿಯದಂತೆ ಇಂಥದೊಂದು ಕ್ರೌರ್ಯಕ್ಕೆ ಕಾರಣವಾಗಿರುವ ಮನುಷ್ಯರೂಪದ ರಾಕ್ಷಸರ ವರ್ತನೆಯ ಕಡೆಗೆ ಬೊಟ್ಟು ಮಾಡಿ ತೋರಿಸುವಂತಿದೆ. "ಧರೆಗಿಳಿದ ಮೊದಲ ನೋಟಕ್ಕೆ ಕಣ್ಬಿಟ್ಟಾಗ ನನಗೆ ಕಂಡಿದ್ದು ಕತ್ತರಿ ಚಾಕು" ಎಂಬ ವಾಕ್ಯ ಎಷ್ಟೊಂದು ಅರ್ಥಪೂರ್ಣವಾಗಿದೆ. ಬಹಳ ಚಂದದ ನಿರೂಪಣೆ, ದನಿಯ ಏರಿಳಿತಗಳು ತುಂಬಾ ಚೆನ್ನಾಗಿದೆ. ಅಭಿನಂದನೆಗಳು, ಅನಂತ ಸರ್.

ಮುಂದಿನ ಲೇಖನ **ಎಂಎಸ್ಎನ್ ಅವರ "ರಾಜಕುಮಾರನ ಜೊತೆ ಹರಟೆ".** ಡಾಕ್ಟರ್ ರಾಜ್ ಅವರ ಸಂದರ್ಶನ ಎಂಬ ಮಾತೇ ನನ್ನನ್ನು ಪುಳಕಗೊಳಿಸಿತು ಎಂದು ನೀವು ಓದುವಾಗ, ಅಂಥ ಅಪರೂಪದ ಪ್ರಸಂಗವನ್ನು ನಮ್ಮ ಮುಂದೆ ಹೇಳಹೊರಟಿದ್ದೀರಿ ಎಂಬ ವಿಷಯವೇ ನಮ್ಮನ್ನೂ ಪುಳಕಗೊಳಿಸಿದೆ. ಅಭಿನಯ ಹಿಮಾಲಯದ ಶೃಂಗವೇರಿದರೂ ಅದೇ ವಿನಯ, ಸರಳತೆ ಆತನನ್ನು ಲೋಕಪೂಜಿತನನ್ನಾಗಿ ಮಾಡಿತು. ನಿರಹಂಕಾರವೇ ದೊಡ್ಡ ಆಭರಣವಾಯಿತು. ತಣ್ಣನೆಯ ನೋಟ, ಸದಾ ಮಂದಸ್ಮಿತ ಚಾರುಹಾಸ, ಹೊಗೆಯಿಲ್ಲದ ನಗೆ ರಾಜಣ್ಣನ ನಿಷ್ಕಲ್ಮಶ ಬಗೆ, "ಹಾಸ್ಯ ಚಲನಚಿತ್ರಗಳ ಬಗ್ಗೆ ರಾಜಕುಮಾರ್ ಅವರ ಅಭಿಪ್ರಾಯ ನನಗೆ ದಾರಿದೀಪವಾಯಿತು" ಎಂದು ನೀವು ಹೇಳುವ ಮಾತಿನಲ್ಲಿ, ಅವರ ಅಭಿಪ್ರಾಯವನ್ನು ಅಪಾರ ಗೌರವ ಅಭಿಮಾನಗಳಿಂದ ಸ್ವಾಗತಿಸಿದ್ದು ಮಾತ್ರವಲ್ಲ ಅದನ್ನು ನಿಮ್ಮ ಬರಹದಲ್ಲಿ ಅಳವಡಿಸಿಕೊಂಡಿದ್ದು ಸಹ ಇವತ್ತು ಎಂ.ಎಸ್.ನರಸಿಂಹಮೂರ್ತಿ ಅವರ ಅಪೂರ್ವ ಯಶಸ್ಸಿಗೆ ಒಂದು ಅಂಶವಾಗಿರಬಹುದಲ್ಲವೇ? ಒಳ್ಳೆಯ ಲೇಖನಕ್ಕಾಗಿ ಎಂ.ಎಸ್.ಎನ್. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಕೆ.ಎನ್.ಮಹಾಬಲ ಅವರ **"ಮುಂಗ್ಪೂವಿನ ಕಬಿಗುರು ರವೀಂದ್ರ ಸ್ಮೃತಿಭವನ",** ಪ್ರವಾಸದಲ್ಲಿ ಮಹಾಬಲರು ಮತ್ತು ಅವರ ಪತ್ನಿಗೆ ಒದಗಿದ ವಿಶಿಷ್ಟ ಅಪ್ಯಾಯಮಾನ ಅನುಭವದ ಬಣ್ಣನೆ. ಎರಡು ವರ್ಷಗಳ ಹಿಂದೆ ಪೂರ್ವಭಾರತದ ಪ್ರವಾಸಕ್ಕೆ ಹೋದಾಗ ಡಾರ್ಜಿಲಿಂಗ್ ನಿಂದ ಸ್ವಲ್ಪ ದೂರದಲ್ಲಿ ಅವರು ದರ್ಶಿಸಿದ "ಕಬಿಗುರು ರವೀಂದ್ರರ ಸ್ಮೃತಿ ಭವನ" ಲೇಖಕನ ಮನದಲ್ಲಿ ಎಂದೆಂದೂ ಅಳಿಯದ ಮಧುರ ನೆನಪಾಗಿ ಉಳಿದಿದೆ. ಇಲ್ಲಿ ಅವರು ಬರೆದಿರುವ ಶೈಲಿ, ಪ್ರವಾಸ ಸಾಹಿತ್ಯಕ್ಕೆ ಸರಿಯಾದ ಭಾಷಾ ಲಾಲಿತ್ಯ ಅವರ ವಾಕ್ಯಸರಣಿಯಲ್ಲಿದೆ

ಎನಿಸಿತು. ಬಹುಶಃ ಪ್ರವಾಸ ಸಾಹಿತ್ಯ ಹೆಚ್ಚು ಬರೆದಿರಬಹುದು ಎನಿಸಿತು. ಅಲ್ಲಲ್ಲಿ ವಿನೋದ ಲೇಪ ಓದುಗರನ್ನು ಗೆಲುವಾಗಿರಿಸುತ್ತದೆ. ಮಜುಂದಾರರ ಮಾಹಿತಿಪೂರ್ಣ ವಿವರಣೆ ಇಷ್ಟವಾಗುತ್ತದೆ. ರವೀಂದ್ರನಾಥ್ ಟಾಗೋರ್ ಅವರ ಒಡನಾಟ ದೊರೆತ ಮನ್‌ಮೋಹನ್ ಸೇನ್, ಮೈತ್ರೇಯಿ ದೇವಿ ಮತ್ತು ತಂದೆ ಸುರೇಂದ್ರನಾಥ್ ಇವರೆಲ್ಲ ಎಷ್ಟು ಧನ್ಯಾತ್ಮರು ಎನಿಸುತ್ತದೆ, ಸ್ನಾನದ ಮನೆಯ ವಿನ್ಯಾಸ ಟ್ಯಾಗೋರರ ಪ್ರಕೃತಿ ಪ್ರೇಮವನ್ನು ಸಾರುತ್ತದೆ. ಉತ್ತಮ ಲೇಖನಕ್ಕೆ ಅಭಿನಂದನೆಗಳು, ಮಹಾಬಲ ಸರ್.

ಮುಂದಿನ ಲೇಖನ **ಜಿ.ವಿ. ಅರುಣ ಅವರ "ಹವಿ–ಸವಿ ಕೋಶ (ಹವ್ಯಕ ಕನ್ನಡ ನಿಘಂಟು)".** ಅರುಣ ಅವರ ಲೇಖನಗಳು ನಮಗೆ ಅರಿವಿಲ್ಲದ ಹೊಸ ಸಂಗತಿಗಳನ್ನು ಸೊಗಸಾಗಿ ಆಕರ್ಷಕ ರೀತಿಯಲ್ಲಿ ಕಟ್ಟಿಕೊಡುತ್ತವೆ ಎಂಬುದು ಈಗಾಗಲೇ ನಮ್ಮೆಲ್ಲರಿಗೂ ವಿದಿತವಾದ ವಿಚಾರ. 'ಹವ್ಯಕ ಕನ್ನಡ' ಎಂಬುದು ಒಂದಿದೆ ಎಂದು ಕೇಳಿದ್ದೆವೇ ಹೊರತು ಹೆಚ್ಚಿನದೇನೂ ತಿಳಿದಿರಲಿಲ್ಲ. ನಲವತ್ತು ವರ್ಷಗಳಿಗಿಂತಲೂ ಹೆಚ್ಚಿನ ಕಾಲ ಏಕಾಂಗಿಯಾಗಿ ಶ್ರಮಿಸಿ ಹೊರತಂದ ವಿ.ಬಿ.ಕುಳಮರ್ವರ ಸಾಧನೆ ತುಂಬ ದೊಡ್ಡದು! ನನಗೆ ದೀನಸ್ಥಿತಿಯಲ್ಲಿದ್ದ ವಚನಗಳ ಓಲೆಗರಿಗಳ ಪುನರುಜ್ಜೀವನ ಮಾಡಲು ಹಲವಾರು ವರ್ಷಗಳ ಕಾಲ ಏಕಾಂಗಿಯಾಗಿ ಶ್ರಮಿಸಿದ ಫ.ಗು. ಹಳಕಟ್ಟಿಯವರ ನೆನಪಾಯಿತು. ಭಾಷೆಗಾಗಿ ದುಡಿದ ಇಂಥ ಸಾಧಕರು ವಿರಳ. ನಮ್ಮ ಕನ್ನಡದಲ್ಲಿ ಪ್ರತಿನಿತ್ಯ ಉಪಯೋಗಿಸುವ ಒಳ್ಳೆಯ ಪದಗಳೇ ಅನವರತ ಪ್ರಯೋಗಕ್ಕೆ ಒಳಗಾಗಿ ಚರ್ವಿತಚರ್ವಣ ಅಥವಾ ಸವಕಲು ಎಂಬ ಪಟ್ಟ ಕಟ್ಟಿಕೊಂಡಿವೆ. ಅಂಥ ಜಾಗಗಳಲ್ಲಿ ನಾವು ಹವ್ಯಕ ಕನ್ನಡ ಪದಗಳನ್ನು ಉಪಯೋಗಿಸಿ ಆ ಹೊಸತನದ ಸೊಗಸನ್ನು ಅನುಭವಿಸುತ್ತ ಕನ್ನಡಭಾಷೆಗೆ ಇನ್ನಷ್ಟು ಶ್ರೀಮಂತಿಕೆ ಸೇರಿಸಬಹುದು. ನಿಧಾನವಾಗಿ ಕೆಲಸ ಮಾಡುವ ವ್ಯಕ್ತಿಗೆ ಕನ್ನಡದಲ್ಲಿ "ಪದಂಕಟೆ" ಎಂಬ ಶಬ್ದವಿದೆ. ಲೇಖಕರು ಹೇಳುವ ಹಾಗೆ ನಾವೆಂದು "ಪದಂಕಟಯ್ಯ" ಅಥವಾ "ಪದಂಕಟಮ್ಮ" ಬಿರುದು ಪಡೆದು ವಿರಾಜಿಸುವುದು ಬೇಡ ಅಲ್ಲವೇ? ಇಂಥ ಸೊಗಸಾದ ಹೊಸ ವಿಚಾರಗಳ ಲೇಖನಕ್ಕೆ ಅಭಿನಂದನೆಗಳು ಅರುಣ ಸರ್.

ನನಗೆ ಈ ಅವಕಾಶ ಒದಗಿಸಿದ್ದಕ್ಕಾಗಿ ಸಮನ್ವಯ ಸಮಿತಿ, ಕನ್ನಡವೇ ಸತ್ಯ ಸಂಚಾಲಕರಾದ ರವೀಂದ್ರ ಅವರಿಗೆ ಮತ್ತು ಸಮಿತಿಯ ನಿರ್ವಾಹಕರಿಗೆ ವಂದನೆಗಳು. ಇದುವರೆಗೂ ಸಾವಧಾನದಿಂದ ಕೇಳಿದ ಎಲ್ಲ ಸ್ನೇಹಿತರಿಗೂ ಧನ್ಯವಾದಗಳು.

*****